ಚಿಂತನ ಬಯಲು

ತ್ರೈಮಾಸಿಕ

ISSN 2278-2192



ಸಂಪುಟ 6 ಸಂಚಿಕೆ 4 ಎಪ್ರಿಲ್ – ಜೂನ್ 2018
Volume 6, Issue 4 April - June 2018

ಚಿಂತನ ಬಯಲು

ಸಂಪಾದಕಿ
ರೇಶ್ಮಾ ಜಿ. ಭಟ್

ಸಂಪಾದಕೀಯ ಸಲಹೆ
ಡಾ. ಅಜಕ್ಕಳ ಗಿರೀಶ ಭಟ್
ಡಾ. ಶ್ರೀಧರ್ ಎಚ್.ಜಿ.
ಡಾ. ವರದರಾಜ ಚಂದ್ರಗಿರಿ
ಡಾ. ಜಿ.ಬಿ. ಹರೀಶ್
ಶ್ರೀ ಎಂ.ಎ. ಸುಬ್ರಹ್ಮಣ್ಯ

ಚಿಂತನ ಬಯಲು
ನಂ. 15–109, ಮೊಡಂಕಾಪು ಅಂಚೆ
ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ – 574 219

CHINTHANA BAYALU
Kannada Quarterly; A Peer Reviewed Journal
Volume 6, Issue 4, April - June 2018

Edited, Published, Printed & Owned by
Reshma G. Bhat
Door No. 15-109, Modankapu Post
Bantwal Taluk, Dakshina Kannada - 574 219
Karnataka
Phone : 9449772651
Email : chinthanabayalu@gmail.com

© : Reserved

Price : Rs. 50

Pages : 64

Cover Photo by : **Reshma Bhat**

Cover Design : **Kallur Nagesh**

Designed & Printed at :

Aakrithi Prints
Maximus Complex
Light House Hill Road
Mangaluru - 575 001
Tel. : 0824 2443002

ಸೂಚನೆ : ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳ ಹಕ್ಕು ಆಯಾ ಲೇಖಕರದ್ದಾಗಿರುತ್ತದೆ. ಇಲ್ಲಿಯ ಲೇಖನಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತವೆ. ಅವುಗಳು ಪತ್ರಿಕೆಯ ಅಭಿಪ್ರಾಯಗಳಾಗಿರಬೇಕೆಂದೇನಿಲ್ಲ.

ಪುಟನೋಟ

1. **ಸಾಮಾಜಿಕ ಕಳಕಳಿಯ ಮಿನಿ ಕಾದಂಬರಿ ‘ಕಲ್ಲು ಕಂಬವೇರಿದ ಹುಂಬ’**

❖ ಡಾ. ಮಮತಾ ರಾವ್ / 5

2. **ಪ್ರಬುದ್ಧ ಸಂಬಂಧಗಳ ಅನ್ವೇಷಣೆ : ಧಾತು ಧಾತು (ಕಾದಂಬರಿ)**

❖ ಡಾ. ಬಿ. ಜನಾರ್ದನ ಭಟ್ / 11

3. **ಕಾಸರಗೋಡು ಪರಿಸರದ ಕನ್ನಡ ಸ್ಥಳನಾಮಗಳು**

❖ ಡಾ. ಮೋಹನ ಕುಂಟಾರ್ / 15

4. **ಜರ್ಮನಿಯ ಒಳಗಿನ ದರ್ಶನ**

❖ ಡಾ.ಜಿ.ಎನ್.ಉಪಾಧ್ಯ / 26

5. **10ನೇ ಶತಮಾನದ ಕನ್ನಡ–ತೆಲುಗು ದ್ವಿಭಾಷಿಕ ಶಾಸನಗಳ ಸ್ವರೂಪ**

❖ ಮಂಜುನಾಥ ಟಿ. / 31

6. **ಗೋವಿಂದ ಪೈಯವರ ಗದ್ಯ ಬರಹಗಳು**

❖ ಡಾ. ಪಾರ್ವತಿ ಜಿ. ಐತಾಳ್ / 41

7. **ಬಾಡ ಕಾದಂಬರಿಯಲ್ಲಿ ಪ್ರಾದೇಶಿಕತೆ**

❖ ಸುರೇಶ್ / 45

8. **ಸಾಹಿತ್ಯ ಮತ್ತು ಶಾಸನಗಳಲ್ಲಿ ಅಣ್ಣಿಗೇರಿ**

❖ ಸಂಜಯ ಎನ್. ಹಂಜೆ / 50

ಸಂಪಾದಕೀಯ

ಈ ಸಂಚಿಕೆಯಲ್ಲಿ ಭಾಷೆ–ಸಂಸ್ಕೃತಿಗಳಿಗೆ ಸಂಬಂಧಿಸಿದ ಲೇಖನಗಳಿವೆ. ಮೋಹನ ಕುಂಟಾರ್ ಅವರು ಬರೆದ ಲೇಖನ ಈಗ ಮಲಯಾಳ ಪ್ರದೇಶವಾಗುತ್ತಿರುವ ಕಾಸರಗೋಡು ಪರಿಸರದ ಸ್ಥಳಗಳ ಹಿಂದಿರುವ ಸಾಂಸ್ಕೃತಿಕ ವಿವರಗಳನ್ನು ಶೋಧಿಸುತ್ತದೆ. ಹತ್ತನೇ ಶತಮಾನದ ಕನ್ನಡ ತೆಲುಗು ದ್ವಿಭಾಷಿಕ ಶಾಸನಗಳ ಸ್ವರೂಪದ ಬಗ್ಗೆ ಸಂಶೋಧನ ವಿದ್ಯಾರ್ಥಿ ಮಂಜುನಾಥ ಟಿ ಇವರ ಲೇಖನವಿದೆ. ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ಮುಖ್ಯವೆನಿಸಿದ ಅಣ್ಣಿಗೇರಿಯ ಬಗ್ಗೆ ಅಧ್ಯಯನವನ್ನೊಳಗೊಂಡ ಸಂಜಯ ಹಂಜೆಯವರ ಲೇಖನವಿದೆ. ವಿಮರ್ಶಾಲೇಖನಗಳಿವೆ. ಓದುಗರ ಅಭಿಪ್ರಾಯಗಳನ್ನು ಸ್ವಾಗತಿಸುತ್ತೇವೆ.

ಸಂಪಾದಕಿ

ಸಾಮಾಜಿಕ ಕಳಕಳಿಯ ಮಿನಿ ಕಾದಂಬರಿ
'ಕಲ್ಲು ಕಂಬವೇರಿದ ಹುಂಬ'

ಡಾ. ಮಮತಾ ರಾವ್
ಮುಂಬಯಿ

(ಲೇಖಕರು–ಡಾ.ಬಿ.ಜನಾರ್ದನ್ ಭಟ್; ಪ್ರಕಾಶಕರು–ಅಂಕಿತ ಪುಸ್ತಕ, ಬೆಂಗಳೂರು–2018–ಬೆಲೆ–ರೂ.95/–)

ಡಾ. ಜನಾರ್ದನ ಭಟ್ ಇವರು ವೃತ್ತಿಯಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರು. ಬಹುಮುಖ ಪ್ರತಿಭೆಯ ಸಾಹಿತಿಯಾಗಿ, ಬಹುಭಾಷಿಕ ವಿದ್ವಾಂಸರಾಗಿ, ಉತ್ತಮ ವಾಗ್ಮಿ ಹಾಗೂ ಸಹೃದಯ ವಿಮರ್ಶಕರಾಗಿ ಕನ್ನಡ ಸಾಹಿತ್ಯ ಲೋಕಕ್ಕೆ ಚಿರಪರಿಚಿತರು. ಆದರೆ ಇವೆಲ್ಲಕ್ಕಿಂತ ಮಿಗಿಲಾಗಿ ತಮ್ಮನ್ನು ತಾವು ಕಾದಂಬರಿಕಾರರೆಂದು ಗುರುತಿಸಿಕೊಳ್ಳಲು ಇಷ್ಟಪಡುವವರು. ನಾಲ್ಕು ಕಾದಂಬರಿ, ನಾಲ್ಕು ಕಥಾ ಸಂಕಲನಗಳಲ್ಲದೆ ವೈಚಾರಿಕ ಸಾಹಿತ್ಯ, ವಿಮರ್ಶೆ, ಅನುವಾದ, ಮಕ್ಕಳ ಸಾಹಿತ್ಯ, ಗ್ರಂಥ ಸಂಪಾದನೆ, ಅಂಕಣ ಸಾಹಿತ್ಯ ಹೀಗೆ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿ ಇವರು ರಚಿಸಿರುವ ಮಹತ್ತ್ವಪೂರ್ಣ ಕೃತಿಗಳ ಸಂಖ್ಯೆ 70ರಷ್ಟು. ಇವರ ಪ್ರತಿಭೆ ಹಾಗೂ ಸಾಧನೆಗಳನ್ನು ಅರಸಿಕೊಂಡು ಬಂದ ಪ್ರಶಸ್ತಿ–ಪುರಸ್ಕಾರಗಳ ಸಂಖ್ಯೆಯೂ ಅಪಾರ. ಹೊಸ ತಲೆಮಾರಿನ ಬರಹಗಾರರಿಗೆ ಡಾ. ಜನಾರ್ದನ ಭಟ್ ಎಂದರೆ ಆಪ್ತಮಿತ್ರರಿದ್ದಂತೆ, ಸಾಹಿತ್ಯದ ಕುರಿತಾದ ಮಾಹಿತಿ ಕೋಶವಿದ್ದಂತೆ. ಅವರನ್ನು ಸಂಪರ್ಕಿಸಿದ್ದೇ ತಡ, ಎಷ್ಟೇ ಕಾರ್ಯಬಾಹುಳ್ಯವಿದ್ದರೂ ಸಹಾಯಹಸ್ತ ನೀಡಲು, ಮಾರ್ಗದರ್ಶನ ಮಾಡಲು ಸದೈವ ತತ್ಪರರು. ಅತ್ಯಂತ ಸರಳ ಹಾಗೂ ಸ್ನೇಹಪರ ಜೀವಿಯಾದ ಡಾ. ಜನಾರ್ದನ ಭಟ್ ಅವರು ತಮ್ಮ ಬದುಕಿನಲ್ಲಿ ಮೈಗೂಡಿಸಿಕೊಂಡಿರುವ ಮೌಲ್ಯಗಳು, ನಂಬಿಕೊಂಡು ಬಂದಂತಹ ತತ್ವಗಳು ಅವರ ಸೃಜನಶೀಲ ಬರಹಗಳಲ್ಲಿ ಧಾರಾಳವಾಗಿ ಪ್ರತಿಬಿಂಬಿತವಾಗುವುದನ್ನು ಕಾಣಬಹುದು.

ಡಾ.ಜನಾರ್ದನ ಭಟ್ ಅವರು ಬರೆದಂತಹ 'ಉತ್ತರಾಧಿಕಾರ'(2007), 'ಹಸ್ತಾಂತರ' (2008), 'ಅನಿಕೇತನ'(2009) ಎಂಬ ತ್ರಿವಳಿ ಕಾದಂಬರಿಗಳ ತರುವಾಯ 2015ರಲ್ಲಿ ಬರೆದ ಕಾದಂಬರಿ 'ಮೂರು ಹೆಜ್ಜೆ ಭೂಮಿ' ಓದುಗರ ಮೆಚ್ಚುಗೆ ಹಾಗೂ ವಿಮರ್ಶಕರ ಗಮನ ಸೆಳೆದಿವೆ ಮಾತ್ರವಲ್ಲದೆ ಪ್ರಶಸ್ತಿ ಪುರಸ್ಕಾರಗಳನ್ನೂ ಪಡೆದಿವೆ. ಚೊಚ್ಚಲ ಕಾದಂಬರಿ 'ಉತ್ತರಾಧಿಕಾರ'ಕ್ಕೆ 2013ರ ಸಾಲಿನ 'ವರ್ಧಮಾನ ಪ್ರಶಸ್ತಿ', 'ಹಸ್ತಾಂತರ'ಕ್ಕೆ 2013ರ ಕ.ಸಾ.ಪ. ವತಿಯಿಂದ 'ವಸುದೇವ ಭೂಪಾಲಂ ಪ್ರಶಸ್ತಿ', 'ಮೂರು ಹೆಜ್ಜೆ ಭೂಮಿ' ಕಾದಂಬರಿಗೆ 'ಭಾರತೀಸುತ ದತ್ತಿ ಪ್ರಶಸ್ತಿ'ಗಳು ದೊರಕಿದ್ದು ಅವರು ಉತ್ತಮ ಕಾದಂಬರಿಕಾರರು ಎನ್ನುವುದಕ್ಕೆ ಸಾಕ್ಷಿ ಎನ್ನಲಡ್ಡಿಯಿಲ್ಲ. ನಾಲ್ಕು ಪ್ರಾದೇಶಿಕ ಕಾದಂಬರಿಗಳನ್ನು ಬರೆದ ನಂತರ ಅವರಿಗೆ ಹೊಸತನದ ಕಾದಂಬರಿ ಬರೆಯಬೇಕೆನ್ನುವ ಅಪಾರ ತುಡಿತವುಂಟಾಗಿತ್ತು. ಹಲವು ದಿನಗಳಿಂದ ಮನಸ್ಸಿನಲ್ಲಿ ರೂಪುಗೊಳ್ಳಲು ಹವಣಿಸುತ್ತಿದ್ದ ವಸ್ತುವನ್ನು ಉಪಯೋಗಿಸಿ ಕೇವಲ ಹದಿನೈದು ದಿನಗಳಲ್ಲಿ ಬರೆದು ಮುಗಿಸಿದ ಕಾದಂಬರಿಯೇ 'ಕಲ್ಲು ಕಂಬವೇರಿದ ಹುಂಬ'. ತರಂಗ ವಾರಪತ್ರಿಕೆಯ ಮಿನಿ ಕಾದಂಬರಿ ಸ್ಪರ್ಧೆಯಲ್ಲಿ(2017) ಪ್ರಥಮ

ಬಹುಮಾನ ಪಡೆದ ಈ ಕಾದಂಬರಿಯು ಮುಂದೆ ತರಂಗ ವಾರಪತ್ರಿಕೆಯಲ್ಲಿ ಹತ್ತು ಕಂತುಗಳಲ್ಲಿ (27–4–2017 ರಿಂದ 29–6–2017) ಪ್ರಕಟಗೊಂಡು ಓದುಗರ ಮೆಚ್ಚುಗೆಯನ್ನು ಪಡೆದಿದೆ. ಇದೀಗ ಅಂಕಿತ ಪ್ರಕಾಶನ, ಬೆಂಗಳೂರು(2018) ಈ ಕಾದಂಬರಿಯನ್ನು ಪ್ರಕಟ ಮಾಡಿದೆ.

ದಕ್ಷಿಣಕನ್ನಡ ಜಿಲ್ಲೆಯಲ್ಲಿ ಪ್ರಚಲಿತವಿರುವ ಆಚಾರ–ವಿಚಾರಗಳು, ನಂಬಿಕೆಗಳು, ಆರಾಧನಾ ಪದ್ಧತಿಗಳು ಡಾ.ಜನಾರ್ದನ ಭಟ್ಟರ ಆಸಕ್ತಿಯ ಕೇಂದ್ರ. ಈ ನಂಬಿಕೆಗಳ ಹಿನ್ನಲೆಯನ್ನು ಪುರಾಣಗಳಲ್ಲಿ, ಐತಿಹ್ಯಗಳಲ್ಲಿ, ಐತಿಹಾಸಿಕ ದಾಖಲೆಗಳಲ್ಲಿ ಶೋಧಿಸುವ ಪ್ರಯತ್ನದಲ್ಲಿ ಇವರು ಸದಾ ನಿರತರು. ಆ ಪ್ರಾಂತದ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಹಾಗೂ ಆರ್ಥಿಕ ಸ್ಥಿತಿಗತಿಗಳನ್ನು ಅರಿತುಕೊಳ್ಳಲು, ತಮ್ಮನ್ನು ಕಾಡುವ ವಿಷಯಗಳ ಸತ್ಯಾ ಸತ್ಯತೆಯನ್ನು ಪರಿಶೀಲಿಸಲು ಆಯಾಯ ಕಾಲದ ಐತಿಹ್ಯಗಳನ್ನು, ಕೈಫಿಯತ್ತುಗಳನ್ನು, ಪ್ರಾದೇಶಿಕ ಸಾಹಿತ್ಯವನ್ನು ಪರಿಶೀಲಿಸುವುದು ಅವರ ಹವ್ಯಾಸಗಳಲ್ಲಿ ಒಂದು. ಅದರಿಂದಾಗಿಯೇ ಇಂದು ದಕ್ಷಿಣ ಕನ್ನಡದ ಐತಿಹಾಸಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ವಿಷಯಗಳ ಕುರಿತು ಅಧಿಕೃತವಾಗಿ ಮಾತನಾಡಬಲ್ಲ ವಿದ್ವಾಂಸರೆಂದೇ ಗುರುತಿಸಿಕೊಳ್ಳುತ್ತಾರೆ.

ಡಾ.ಜನಾರ್ದನ ಭಟ್ಟರು ದಕ್ಷಿಣ ಕನ್ನಡ ಜಿಲ್ಲೆಯಎಲ್ಲ ಸಮುದಾಯದ ಜನರು ನಂಬಿದ ದೇವರು–ದೈವಗಳು, ಮೂಢನಂಬಿಕೆಗಳು, ಆಚರಣೆಗಳನ್ನೆಲ್ಲಾ ಅತ್ಯಂತ ಸೂಕ್ಷ್ಮವಾಗಿ ಬಹಳ ಹತ್ತಿರದಿಂದ ಗಮನಿಸುತ್ತ ಬಂದವರು. ಇವೆಲ್ಲವುಗಳು ಯಾವರೀತಿಯಲ್ಲಿ ಕರಾವಳಿಯ ಜನರ ದೈನಂದಿನ ಬದುಕಿನ ಅವಿಭಾಜ್ಯ ಸಂಗತಿಗಳಾಗಿವೆ ಎನ್ನುವುದನ್ನು ಅರ್ಥೈಸಿ ಕೊಂಡವರು. ಆದುದರಿಂದಲೇ ಬದಲಾಗುತ್ತಿರುವ ಸಾಮಾಜಿಕ ಹಾಗೂ ಧಾರ್ಮಿಕ ಸ್ಥಿತ್ಯಂತರಗಳ ಹಿನ್ನೆಲೆಯಲ್ಲಿ ಸ್ಥಿತಿವಂತರೆನಿಸಿಕೊಂಡವರ, ವಿದ್ವಾಂಸರೆನಿಸಿಕೊಂಡವರ ನಡಾವಳಿಗಳು ಸಾಮಾನ್ಯ ಜನರ ನಂಬಿಕೆ ಹಾಗೂ ಆಚರಣೆಗಳ ಮೇಲೆ ಮಾಡುತ್ತಿರುವ ಅನಾಹುತಗಳನ್ನು ಅತ್ಯಂತ ವಾಸ್ತವಿಕವಾಗಿ ಅಷ್ಟೆ ನಿರ್ಲಿಪ್ತತೆಯೊಂದಿಗೆ ಪ್ರಸ್ತುತ ಕಾದಂಬರಿಯ ವಸ್ತುವನ್ನಾಗಿಸಿದ್ದಾರೆ. ಅವರು ಬರೆದಂತಹ ಎಲ್ಲಾ ಕಾದಂಬರಿಗಳ ವಸ್ತುಗಳು ಅನುಭವಜನ್ಯವಾಗಿದ್ದು ಅವರ ಅಧ್ಯಯನ ಶೀಲತೆಯನ್ನು ಪ್ರತಿಬಿಂಬಿಸುತ್ತವೆ. ಪ್ರಸ್ತುತ ಕಾದಂಬರಿಯು ಕೂಡ ಒಂದು ಸಮುದಾಯದ ಜನರ ನಂಬಿಕೆಯನ್ನಾಧರಿಸಿದ ಅತ್ಯಂತ ಸಂಕೀರ್ಣವಾದ ವಸ್ತು. ಇದನ್ನು ವಿಡಂಬನಾತ್ಮಕವಾಗಿ ಅನಾವರಣಗೊಳಿಸುತ್ತಾ, ಕುತೂಹಲ ಹುಟ್ಟಿಸುವ ರೀತಿಯಲ್ಲಿ ನಿರೂಪಿಸುತ್ತಾ ಯಾವುದೇ ಸಮುದಾಯದವರ ಭಾವನೆಗಳಿಗೆ ಧಕ್ಕೆ ತಗಲದಂತೆ ಅತ್ಯಂತ ವಸ್ತುನಿಷ್ಠವಾಗಿ ಅಷ್ಟೇ ನಾಜೂಕಾಗಿ ಕಟ್ಟಿಕೊಟ್ಟ ರೀತಿ ನಿಜಕ್ಕೂ ಶ್ಲಾಘನೀಯವಾದುದು.

ಕಾದಂಬರಿಯುದ್ದಕ್ಕೂ ನಮಗೆ ಎದುರಾಗುವವರೆಲ್ಲ ನಮ್ಮ ಸುತ್ತಮುತ್ತ ಕಾಣಬರುವ ಪಾತ್ರಗಳು, ಪರಿಚಿತ ಸನ್ನಿವೇಶಗಳು. ಆದರೂ ಮುನ್ನುಡಿಯಲ್ಲಿ ಲೇಖಕರೇ ಸ್ಪಷ್ಟ ಪಡಿಸಿರುವ ಸಂಗತಿಯೆಂದರೆ ಈ ಕಥಾನಕದ ಕೇಂದ್ರದಲ್ಲಿರುವ ಆರಾಧನಾ ಪದ್ಧತಿಯು ತುಳುನಾಡಿಗೆ ಮಾತ್ರ ಸೀಮಿತವಾಗಿರದೆ ನಮ್ಮ ನೆರೆ ರಾಜ್ಯಗಳಾದ ತಮಿಳುನಾಡು ಮತ್ತು ಮಹಾರಾಷ್ಟ್ರದಲ್ಲಿಯೂ ಕಾಣಸಿಗುತ್ತಿದ್ದು, ಅದರ ಸುತ್ತಮುತ್ತ ಸಮಾಜದಲ್ಲಿ ರಾರಾಜಿಸುತ್ತಿರುವ ಅನೇಕ ಸಣ್ಣತನಗಳನ್ನು ವಿಡಂಬಿಸುವ ನಿಟ್ಟಿನಲ್ಲಿ ಸೃಷ್ಟಿಸಿಕೊಂಡಂತಹ ಕಾಲ್ಪನಿಕ ಸನ್ನಿವೇಶಗಳನ್ನೇ ಕಾದಂಬರಿಯನ್ನಾಗಿಸಲಾಗಿದೆ. 'ಕಲ್ಲು ಕಂಬವೇರಿದ ಹುಂಬ' ಕಾದಂಬರಿಯ

ಶೀರ್ಷಿಕೆಯಲ್ಲಿಯೇ ವಿಡಂಬನೆಯ ಮೊದಲ ಸುಳಿವು ಸಿಗುತ್ತದೆ. 'ಹುಂಬ' ಅಂದರೆ ಅಸಂಸ್ಕೃತ, ಅವಿವೇಕಿ, ಅಥವಾ ದಡ್ಡ ಎಂದರ್ಥ. ಅದು ಹೇಗೆ ಓರ್ವ ಹುಂಬ ಇಲ್ಲಿಯ ಜನರ ಆರಾಧ್ಯ ದೈವವಾದ; ಆ ಹುಂಬ ಯಾರಾಗಿರಬಹುದು ಎನ್ನುವ ಪ್ರಶ್ನೆಗಳು ಓದುಗರ ಮನಸ್ಸಿನಲ್ಲಿ ಏಳುವುದು ಸಹಜವೇ ತಾನೆ?.. ಆ ಪ್ರಶ್ನೆಗೆ ಉತ್ತರ ಬೇಕಿದ್ದರೆ ಈ ಕಾದಂಬರಿಯನ್ನು ಓದಲೇ ಬೇಕು.

ಮಹಾಲಿಂಗೇಶ್ವರ ದೇವಸ್ಥಾನದ ಮುಂಬದಿಯಲ್ಲಿ ಇರಬೇಕಾದ ಧ್ವಜಸ್ತಂಭದ ಬದಲಿಗೆ ಇರುವ ಕಲ್ಲಿನ ಕಂಬದ ಕಥೆಯೇ ಬಹಳ ನಿಗೂಢವಾದುದು. ನೋಡುವವರಲ್ಲಿ ಕುತೂಹಲ ಮೂಡಿಸುವ, ವಿಚಾರವಂತರನ್ನು ಚಿಂತನೆಗೆ ಒಳಗಾಗಿಸುವ, ಸಾಮಾನ್ಯರನ್ನು ಆಕರ್ಷಿಸುವ ಈ ಕಲ್ಲುಕಂಬದ ಕುರಿತಾಗಿ ಸಂಶೋಧನಾ ಪ್ರಬಂಧಗಳನ್ನು ಮಂಡಿಸಿದ ಇಬ್ಬರು ವಿದ್ವಾಂಸರು ಬೇರೆ ಬೇರೆ ವಿಶ್ವವಿದ್ಯಾಲಯಗಳಿಂದ ಪಿಎಚ್.ಡಿ. ಪದವಿಯನ್ನು ಪಡೆದಿದ್ದಾರೆ. ಒಂದಕ್ಕೊಂದು ಹೊಂದಾಣಿಕೆ ಕಾಣದ ವಾದಗಳಿರುವ ಈ ಎರಡೂ ಸಂಶೋಧನೆಗಳನ್ನು ಮೀರಿದ ಮೂರನೆಯ ವಾದವೊಂದನ್ನು ಜಾನಪದ ತಜ್ಞನೋರ್ವನು ಹೂಡಿದ್ದೇ, ಆ ಇಬ್ಬರು ವಿದ್ವಾಂಸರನ್ನೊಳಗೊಂಡಂತೆ ಇಡಿಯ ಸಮಾಜದ ಮಾನಸಿಕ ಸ್ವಾಸ್ಥ್ಯವೇ ಹದಗೆಡುವುದಕ್ಕೆ ನಾಂದಿ ಹಾಡಿದಂತಾಯಿತು. 'ಶತಮಾನಗಳ ಹಿಂದೆ... ಅಂದೊಂದು ದಿನ ಮಹಾಲಿಂಗೇಶ್ವರ ದೇವಸ್ಥಾನದ ಎದುರಿನ ಇದೇ ಕಲ್ಲಿನ ಕಂಬದ ಮೇಲೆ ಹುಂಬನೊಬ್ಬ ಪವಾಡ ಪುರುಷನಂತೆ ನಿಂತು ಸಾರಿ ಹೇಳಿದ್ದ: "ಈ ನಗರದಲ್ಲಿ ದೇವರ ಪ್ರವಾದಿಯೂ ಧರ್ಮ ಪ್ರವರ್ತಕನೂ ಜನಿಸುವನು."(ಪುಟ14) ಎನ್ನುತ್ತಾ ಪ್ರಾಚೀನ ಗ್ರಂಥವನ್ನು ಉಲ್ಲೇಖಿಸುತ್ತಾ, ಈ ಘಟನೆ ನಡೆದ ಸ್ಥಳದಿಂದ ಎರಡು ಮೈಲಿ ಅಂತರದಲ್ಲಿರುವ ಕಲ್ಲಪಾಡಿ ಹಳ್ಳಿಯಲ್ಲಿ ಪೂಜಿಸಲ್ಪಡುವ ಗೊಡ್ಡಣ್ಣ ದೈವವೇ ಈ ಹುಂಬ ಎನ್ನುವ ಕುರಿತಾಗಿ ಬಿ.ಎನ್. ವಿಡಂಗನೆಂಬ ಜಾನಪದ ವಿದ್ವಾಂಸನೊಬ್ಬ ಬರೆದ ಲೇಖನದಿಂದಾಗಿ ಅಪಾರ ಪ್ರಚಾರ ಸಿಕ್ಕಿ ಕಲ್ಲಪಾಡಿಯ ಗುಡಿಯ ಜೀರ್ಣೋದ್ಧಾರಕ್ಕಾಗಿ ಧನಸಂಗ್ರಹವು ಸುಲಭ ಸಾಧ್ಯವಾಗಿತ್ತು; ಮಾತ್ರವಲ್ಲ ನವೀಕೃತ ಗುಡಿಯ ಬ್ರಹ್ಮಕಲಶೋತ್ಸವವೂ ಬಹಳ ವಿಜೃಂಭಣೆಯಿಂದ ನಡೆಯುವ ತಯಾರಿಯೂ ಸಾಗಿತ್ತು. ವಿಷಯ ತಿಳಿದು ಕುತೂಹಲ ಕೆರಳಿದ ಕಾರಣ ಎಲ್ಲಾ ಕಡೆಯಿಂದ ಜನರು ಕಲ್ಲಪಾಡಿಗೆ ಬರಲಾರಂಭಿಸಿದರು.

ಕಥೆಯ ಮುಖ್ಯ ಕ್ಷೇತ್ರ ಕಲ್ಲಪಾಡಿಯ ಗೊಡ್ಡಣ್ಣ ದೈವದ ಗುಡಿಯಲ್ಲ; ಬದಲಿಗೆ ಕಲ್ಲುಪಾಡಿಯಿಂದ ಐವತ್ತು ಮೈಲು ದೂರದಲ್ಲಿರುವ ಲ್ಯಾಲೊಟ್ಟು ಪಿಂಟಾಡಿಯಲ್ಲಿರುವ ಗೋವಿನ ಜಾತಿಯವರಿಗೆ ಸಂಬಂಧಿಸಿದ ಗೊಡ್ಡಣ್ಣ ದೈವದ ಗುಡಿ. ಕಲ್ಲಪಾಡಿಯ ಗುಡಿಯು ಕೂಡ ಗೋವಿನ ಜಾತಿಯವರಿಗೇ ಸೇರಿದೆಯಾದರೂ ಆ ದೇವಸ್ಥಾನದ ಉಸ್ತುವಾರಿ ಮೇಲ್ಜಾತಿಯವರಿಗೆ ಸೇರಿದ್ದ ಕಾರಣ, ಹಾಗೂ ಈ ಮೊದಲೇ ವಿವರಿಸಿದಂತೆ ವಿಡಂಗನ ಪತ್ರಿಕಾ ಲೇಖನದಿಂದಾಗಿ ಗುಡಿಯ ಜೀರ್ಣೋದ್ಧಾರಕ್ಕೆ ಧನ ಸಂಗ್ರಹ ಸಮಸ್ಯೆಯಾಗಲಿಲ್ಲ. ಇದರಿಂದ ಸ್ಫೂರ್ತಿ ಪಡೆದು ಲ್ಯಾಲೊಟ್ಟು ಪಿಂಟಾಡಿಯಲ್ಲಿರುವ ಜನರು ಕೂಡ ತಮ್ಮ ದೈವದ ಕಾರ್ಣಿಕವನ್ನು ಜಗತ್ತಿಗೆ ಸಾರುವ ಪ್ರಯತ್ನಕ್ಕೆ ತೊಡಗುತ್ತಾರೆ. ಲ್ಯಾಲೊಟ್ಟು ಪಿಂಟಾಡಿಯ ಗೊಡ್ಡಣ್ಣ ದೈವದ ಕುರಿತಾಗಿ ಬೋಲಪದವು ಸುರೇಶ ತಂತ್ರಿಯವರು ಬರೆದು ಪ್ರಕಟಿಸಿದ ಪೌರಾಣಿಕ ಹಿನ್ನೆಲೆಯನ್ನು ನೀಡುವ ಲೇಖನವು ಅಷ್ಟು ಗಟ್ಟಿಯಾಗಿರಲಿಲ್ಲ. ತಾವು ಕೂಡ ಜಾತಿಯ ಮಿತಿಯನ್ನು ಮೀರಿ ಯೋಚನೆ ಮಾಡಬಲ್ಲ ದೂರ ದೃಷ್ಟಿಯುಳ್ಳ ವ್ಯಕ್ತಿಯ ಕೈಯಲ್ಲಿ ತಮ್ಮೂರಿನ ಗುಡಿಯ ಜೀರ್ಣೋದ್ಧಾರದ

ಮುಂದಾಳತ್ವನವನ್ನು ನೀಡಬೇಕೆಂದು ನಿಶ್ಚಯಿಸಲಾಗುತ್ತದೆ. ಲ್ಯಾಲೊಟ್ಟು ಕುಟ್ಟಪ್ಪ ಬೊಂಬಾಯಿಯಲ್ಲಿರುವ ಸ್ವಜಾತಿಯ ಸಿರಿವಂತರ, ಉದ್ಯಮಿಗಳ ಮನವೊಲಿಸಿ ಧನಸಂಗ್ರಹಕ್ಕೆ ಆರಂಭಿಸುತ್ತಾನೆ. ತಮ್ಮ ದೈವಕ್ಕೆ ಹೆಚ್ಚು ಪ್ರಚಾರಸಿಕ್ಕಿ ಧನ ಸಂಗ್ರಹಕ್ಕೆ ಚಾಲನೆ ನೀಡಲು ವಿಡಂಗನಿಂದಲೇ ಲೇಖನ ಬರೆಸಿಕೊಳ್ಳಬೇಕೆಂಬ ತೀರ್ಮಾನವಾಗುತ್ತದೆ. ಅಂತೆಯೇ, ಲ್ಯಾಲೊಟ್ಟು ಕುಟ್ಟಪ್ಪ ವಿಡಂಗನನ್ನು ಸಂಪರ್ಕಿಸಿ, ಅವನನ್ನು ಪಿಂಟಾಡಿಗೆ ಆಹ್ವಾನಿಸಿ ತಮ್ಮ ದೈವದ ಕುರಿತಾದ ಕೆಲವು ಸಂಗತಿಗಳನ್ನು ತಿಳಿಸಿ ಅವನ ಸಂಶೋಧನಾ ಬುದ್ಧಿಗೆ ಗ್ರಾಸ ನೀಡುತ್ತಾನೆ.

ಇದೇ ಸಂದರ್ಭದಲ್ಲಿ ವೈಧಿಕ ವಿರೋಧಿ ಚಿಂತನೆಯ ಹರಿಕಾರ ಜಾನಪದ ತಜ್ಞ ದೂಮಪ್ಪ ಸುಕ್ರಂಬೈಲರು ಪತ್ರಿಕಾಗೋಷ್ಠಿಯಲ್ಲಿ ನೀಡಿದ ಹೇಳಿಕೆಯು ದೈವದ ಪ್ರಕರಣಕ್ಕೆ ಜಾತೀಯತೆಯ ಮೆರಗು ನೀಡುತ್ತದೆ. ಅವರ ಪ್ರಕಾರ ಆ ಹುಂಬ ಗೊಡ್ಡಣ್ಣ ಎನ್ನುವ ಶೂದ್ರ. ತಿರುಪತಿಯ ವೆಂಕಟರಮಣನ ಅನುಗ್ರಹದಿಂದ ಜನಮನ್ನಣೆಯನ್ನು ಗಳಿಸಿದ ಆತನ ಬದುಕು ಇಂದು ಐತಿಹ್ಯವಾಗಿದೆ. ಕಸಾರವೇ(ಕರಾವಳಿ ಸಾಂಸ್ಕೃತಿಕ ರಕ್ಷಣಾ ವೇದಿಕೆ)ಯ ಮೂಲಕ ಗೊಡ್ಡಣ್ಣನನ್ನು ಹಿಂದುಳಿದವರ ಘನತೆಯ ಸಂಕೇತವನ್ನಾಗಿಸುವ ಸಂಘಟನೆಯನ್ನು ದೂಮಪ್ಪ ಸುಕ್ರಂಬೈಲರು ಮಾಡುವ ಸುದ್ಧಿ ತಿಳಿದ ವಿಡಂಗ ಆತಂಕಕ್ಕೊಳಗಾಗುತ್ತಾನೆ. ಗೊಡ್ಡಣ್ಣ ದೈವದ ಕುರಿತಾಗಿ ತಾನೊಂದು ಪೋಸ್ಟ್ ಡಾಕ್ಟೊರಲ್ ಥೀಸಿಸ್ ಬರೆದು ಫಿನ್ಲೆಂಡಿನ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕೆಂಬ ಉತ್ಸಾಹದಲ್ಲಿದ್ದ ಆತನು ತನ್ನ ಕಾರ್ಯ ಸಾಧಿಸಲು ತನ್ನದೇ ಪರಿಯಲ್ಲಿ ಗೊಡ್ಡಣ್ಣನ ವಿಷಯವನ್ನು ಶೋಧಿಸಲು ತೊಡಗುತ್ತಾನೆ.

ಲ್ಯಾಲೊಟ್ಟು ಕುಟ್ಟಪ್ಪನ ಒಡಗೂಡಿ ಹತ್ತು ವರ್ಷದ ಹಿಂದೆ ಪಿಂಟಾಡಿಯಲ್ಲಿ ನಡೆದ ಗೊಡ್ಡಣ್ಣ ದೈವದ ಕೋಲದಲ್ಲಿ ಪಾಡ್ದನ ಹಾಡಿದನೆನ್ನುವ ಪೊರ್ಕಳದ ವಿಟ್ಟುವನ್ನು ಹುಡುಕುತ್ತಾರೆ. ಅವನಿಂದ ಗುಡ್ಡಣ್ಣನ ಮೂಲದ ಕುರಿತಾದ ಅತ್ಯಂತ ರೋಚಕವಾದ ಗುಟ್ಟು ತಿಳಿಯುತ್ತದೆ. ಗೊಡ್ಡಣ್ಣನಿಗೂ ಕಲ್ಯಾಣಪ್ಪನ ಕಾಟುಕಾಯಿಗೂ ಇರುವ ಸಂಬಂಧದ ಮೂಲಕ ಗೊಡ್ಡಣ್ಣ ತಮ್ಮ ಜಾತಿಗೆ ಸೇರಿದವನೇ ಅಲ್ಲ ಎನ್ನುವುದನ್ನು ತಿಳಿದ ಕುಟ್ಟಪ್ಪನ ಕಾಲ ಕೆಳಗಿನ ಭೂಮಿಯೇ ಕುಸಿದಂತಾಗುತ್ತದೆ. ತಾವು ಗೋವಿನ ಜಾತಿಯವರು ಸಂಘಟನೆಯ ಮೂಲಕ ಸರಕಾರದ ಮುಂದೆ ತಮ್ಮ ಜಾತಿಯನ್ನು ಪರಿಶಿಷ್ಟ ಜಾತಿಯಾಗಿಸ ಬೇಕೆನ್ನುವ ಬೇಡಿಕೆಯನ್ನು ಮಂಡಿಸಲು ಮಾಡುತ್ತಿದ್ದ ಸಿದ್ಧತೆ ಮಣ್ಣು ಪಾಲಾಗುತ್ತದೆ ಎನ್ನುವ ಆತಂಕದಲ್ಲಿ ಆತ ಮಂಕಾದರೆ, ಈ ಹೊಸ ಸುಳಿವಿನಿಂದಾಗಿ ವಿಡಂಗನಲ್ಲಿ ಹೊಸ ಉತ್ಸಾಹ ಉಕ್ಕುತ್ತದೆ. ಆತ ಮದ್ರಾಸಿಗೆ ತೆರಳಿ ಕಲ್ಯಾಣಪ್ಪನ ಕಾಟುಕಾಯಿಯ ಕುರಿತು ಇನ್ನಷ್ಟು ಐತಿಹಾಸಿಕ ದಾಖಲೆಗಳನ್ನು ಜಾಲಾಡಿಸಲು ಗೊಡ್ಡಣ್ಣನ ಕುರಿತಾಗಿ ಅತ್ಯಂತ ಸ್ವಾರಸ್ಯಕರವಾದ ಸಂಗತಿಗಳು ತಿಳಿದು ಬರುತ್ತದೆ. ತಾನು ಕಂಡುಕೊಂಡ ವಿಷಯವನ್ನು ದಾಖಲಿಸಬೇಕೆಂಬ ಉತ್ಸಾಹದಲ್ಲಿದ್ದ ವಿಡಂಗನ್ನು ಕುಟ್ಟಪ್ಪ ಭೇಟಿಯಾಗಿ ಗುಟ್ಟನ್ನು ಬಯಲು ಮಾಡದಂತೆ ಕಳಕಳಿಯಿಂದ ಬೇಡಿಕೊಳ್ಳುತ್ತಾನೆ. ಗೋವಿನ ಜಾತಿಯವರ ಆರಾಧ್ಯ ದೈವವಾದ ಗೊಡ್ಡಣ್ಣ ವಿಡಂಗನ ಸಂಶೋಧನೆಯಿಂದಾಗಿ ಅವರ ಜಾತಿಯುವನೇ ಅಲ್ಲ ಎನ್ನುವುದು ಬಹಿರಂಗವಾದರೆ ತಮ್ಮ ಜಾತಿಯವರಿಗೆ ದೈವವೇ ಇಲ್ಲದಂತಾಗುತ್ತದೆ. ಸಮಗ್ರ ಗೋವಿನ ಜಾತಿಯವರ ಅಸ್ಮಿತೆಯ ಪ್ರಶ್ನೆ ನಿರ್ಮಾಣವಾಗುತ್ತದೆ. ಗೋವಿನ ಸಮಾಜದವರಿಗೆ ಗೊಡ್ಡಣ್ಣ ದೈವದ ಕುರಿತಾದ ನಂಬಿಕೆಗೆ ಧಕ್ಕೆ ಬಂದರೆ ಅವರ ಅಸ್ತಿತ್ವಕ್ಕೆ ಕೊಡಲಿ ಪೆಟ್ಟು ಬೀಳಿದಂತಾಗುತ್ತದೆ. ಇದರಿಂದಾಗಿ 'ಗೋವಿನ ಜನಾಂಗದವರ ಅಸ್ಮಿತೆಯ ಸಂಕೇತವನ್ನು

ಜಾನಪದ ಸಂಶೋಧನೆಗಳಿಂದ ಛಿದ್ರಗೊಳಿಸುವುದು ತಾತ್ವಿಕವಾಗಿ ಸರಿಯಾದರೂ, ಮಾನವೀಯ ನೆಲೆಗಳಿಂದ ನೋಡಿದರೆ ಸರಿಯಲ್ಲ' ಎನ್ನುವುದನ್ನು ವಿಡಂಗ ಗ್ರಹಿಸುತ್ತಾನೆ. ವಿಡಂಗನೊಡಗೂಡಿ ಎಲ್ಲಾ ವಿದ್ವಾಂಸರುಗಳು ಗೊಡ್ಡಣ್ಣ ದೈವದ ಕುರಿತಾದ ಪ್ರಸ್ತುತ ಸಂಶೋಧನೆಯನ್ನು ಪ್ರಕಟಿಸಬಾರದು; ಹಾಗು ಇನ್ನು ಮುಂದೆ ಯಾವುದೇ ಪ್ರಕಾರದ ಅಧ್ಯಯನವನ್ನು ಮಾಡಬಾರದು ಎನ್ನುವ ನಿರ್ಧಾರ ಮಾಡಿ ಅಂತೆಯೇ ಎಲ್ಲರೂ ಸಾರ್ವಜನಿಕವಾಗಿ ಪ್ರಮಾಣ ಮಾಡುವ ಮೂಲಕ ಕಾದಂಬರಿಯು ಮುಕ್ತಾಯಗೊಳ್ಳುತ್ತದೆ.

ತುಳುನಾಡಿನ ಜನರು ಪ್ರಾಚೀನ ಕಾಲದಿಂದಲೂ ನಂಬಿಕೊಂಡು ಬಂದಂತಹ ದೈವ ದೇವತೆಗಳಿಗೆ ಅದರದೇ ಆದ ಐತಿಹ್ಯ, ಆಚರಣೆ, ಆರಾಧನಾ ಪದ್ಧತಿಗಳಿವೆ. ಕರಾವಳಿಯುದ್ದಕ್ಕೂ ವ್ಯಾಪಕವಾಗಿ ಕಾಣಸಿಗುವ ಜೀರ್ಣಾವಸ್ಥೆಯಲ್ಲಿರುವ ಈ ಆರಾಧನಾ ಸ್ಥಾನಗಳು ಇಲ್ಲಿಯ ಗ್ರಾಮೀಣ ಜೀವನದ ಅವಿಭಾಜ್ಯ ಸಂಗತಿಗಳು. ಹಳ್ಳಿಬಿಟ್ಟು ಪಟ್ಟಣ ಸೇರಿ ತಮ್ಮ ಜಾತಿಯನ್ನು ಮರೆಮಾಚಿ ಅಪಾರ ಶ್ರೀಮಂತಿಕೆಯನ್ನು ಗಳಿಸಿರುವ ಜನರು ತಮ್ಮ ಪ್ರತಿಷ್ಠೆಯನ್ನು ಸ್ಥಾಪಿಸಲು ತಮ್ಮೂರಿನ ಪುಟ್ಟ ಗುಡಿಗಳ ಜೀರ್ಣೋದ್ಧಾರವನ್ನು ನಡೆಸುತ್ತಿರುವ ಸಂಗತಿ ಇಂದು ಸಾರ್ವತ್ರಿಕವಾಗುತ್ತಿರುವುದು ಎಷ್ಟು ಸಮಂಜಸ ಎನ್ನುವುದು ವಿಚಾರ ಮಾಡಬೇಕಾದ ಸಂಗತಿ ಎನ್ನುವತ್ತ ಬೊಟ್ಟು ಮಾಡಲಾಗಿದೆ. ಆಧುನಿಕತೆಯ ಸೋಗಿನಲ್ಲಿ ಕ್ರಮೇಣ ಈ ನಂಬಿಕೆಗಳನ್ನು ಆಚರಣೆಗಳನ್ನು ವೈದಿಕ ಸಂಸ್ಕೃತಿಯು ಕಬಳಿಸುತ್ತಿರುವುದನ್ನು ಈ ಕಾದಂಬರಿಯು ಅತ್ಯಂತ ಸೂಕ್ಷ್ಮವಾಗಿ ಅನಾವರಣ ಗೊಳಿಸುತ್ತದೆ. ಸಮಾಜದಲ್ಲಿ ಗಣ್ಯರೆನಿಸಿಕೊಳ್ಳುವವರ, ಸಂಸ್ಕೃತಿಯ ಹರಿಕಾರರೆಂದು ಬೀಗುತ್ತಿರುವವರ, ವಿದ್ವಾಂಸರುಗಳ, ಸಂಶೋಧಕರೆಂದು ಗುರುತಿಸಿ ಕೊಳ್ಳುವಂತಹ ಅನೇಕರ ಮುಖವಾಡಗಳನ್ನು ಇಲ್ಲಿ ಅನಾವರಣಗೊಳಿಸಲಾಗಿದೆ. ಜನರ ಬದುಕಿನ ಒಳಪದರುಗಳನ್ನು ವಿಶ್ಲೇಷಿಸುವಾಗ ಸಾಮಾನ್ಯ ಜನರ ಭಾವನಾತ್ಮಕ ವಿಚಾರಗಳನ್ನು ಬಹಳ ಜಾಗರೂಕತೆಯಿಂದ ನಿರ್ವಹಿಸಲಾಗಿದೆ. ಅವರ ರೂಢಿಮೂಲ ವಿಶ್ವಾಸಕ್ಕೆ, ನಂಬಿಕೊಂಡು ಬಂದಂತಹ ಸಂಪ್ರದಾಯಗಳಿಗೆ ಧಕ್ಕೆ ಬಾರದಂತೆ ಕಾಳಜಿ ವಹಿಸುವ ಅಗತ್ಯವಿದೆ ಎನ್ನುವ ಮಾನವೀಯ ಮೌಲ್ಯವನ್ನು ಇಲ್ಲಿ ಎತ್ತಿ ಹಿಡಿಯಲಾಗಿದೆ. ಬೌದ್ಧಿಕ ವಲಯದಲ್ಲಿ ಕಾಣಿಸುವ ಮಾತ್ಸರ್ಯ, ಟೊಳ್ಳು ಪಾಂಡಿತ್ಯ ಪ್ರದರ್ಶನ, ಸಮಾಜದಲ್ಲಿ ಬಲಗೊಳ್ಳುತ್ತಿರುವ ಸ್ವಪ್ರತಿಷ್ಠೆ, ಜಾತೀಯ ಪ್ರಶ್ನೆಗಳನ್ನು, ಕ್ಷುಲ್ಲಕ ರಾಜಕಾರಣಗಳನ್ನು ಬಹಳ ನಾಜೂಕಾಗಿ ತೆರೆದಿಡುತ್ತಾ ಓದುಗರನ್ನು ಚಿಂತಿಸುವಂತೆ ಮಾಡುವ ಈ ಪುಟ್ಟ ಕಾದಂಬರಿಯು ಚೋಟಾ ಪ್ಯಾಕೆಟ್ ಬಡಾ ಧಮಾಕಾ ಎಂದರೆ ತಪ್ಪಾಗಲಾರದು.

ಅತ್ಯಂತ ಸಹಜತೆಯೊಂದಿಗೆ ಲವಲವಿಕೆಯಲ್ಲಿ ಕಥೆಯನ್ನು ನಿರೂಪಿಸುವ, ಸರಳ ಮಾತುಗಳಿಂದಲೇ ಕಥೆಯನ್ನು ಬೆಳೆಸುವ ಕಲಾತ್ಮಕ ಶೈಲಿಯಲ್ಲಿ ಡಾ. ಜನಾರ್ದನ್ ಭಟ್ ಅವರದ್ದು ಎತ್ತಿದ ಕೈ. ಅಮಾಯಕರ ಮೌಢ್ಯತೆಯನ್ನು ಶೋಷಿಸುವವರ ಕುರಿತು ಅವರಿಗಿರುವ ಅಸಹನೆ, ಸಿಟ್ಟು, ಎಲ್ಲವೂ ಅತ್ಯಂತ ನಿರ್ಲಿಪ್ತತೆಯಿಂದ ವಿಡಂಬನಾತ್ಮಕವಾಗಿ ಪ್ರಸ್ತುತ ಕಾದಂಬರಿಯಲ್ಲಿ ಅನಾವರಣಗೊಳ್ಳುತ್ತವೆ. ಅವರ ಇತರ ಕಾದಂಬರಿಗಳಲ್ಲಿ ಕಾಣಿಸುವ ಕಥೆಯೊಳಗಿಂದ ಉಪಕಥೆ ಮೂಡುವ ಅವಕಾಶವು ಇರದ ಕಾರಣ ಹೆಚ್ಚಿನ ವರ್ಣನೆಗೆ ಇಲ್ಲಿ ಅವಕಾಶವಿಲ್ಲ. ವಾಸ್ತವಿಕ ಚಿತ್ರಣವೇ ಇಲ್ಲಿ ಪ್ರಾಮುಖ್ಯತೆಯನ್ನು ಪಡೆದಿದ್ದು ಓದುಗರನ್ನು ಚಿಂತನೆಗೆ ಹಚ್ಚುತ್ತದೆ. ಬಿ.ಎನ್.ವಿಡಂಗ, ಲ್ಯಾಲೊಟ್ಟು ಕುಟ್ಟಪ್ಪ, ಜಾನಪದ ತಜ್ಞ ದೂಮಪ್ಪ ಸುಕ್ರಂಬೈಲ, ವಾದಿರಾಜ್ ಆಚಾರ್ಯ, ಉದ್ಯಮಿ ರಾಜಸುಂದರ

ಪಿ.ಎಲ್, ಪೊರ್ಕಳದ ವಿಟ್ಟು ಮುಂತಾದ ಬಹಳ ವಿಶಿಷ್ಟವಾದ ಜೀವಂತ ಪಾತ್ರಗಳನ್ನು ಕಾದಂಬರಿಯು ಪರಿಚಯಿಸುತ್ತದೆ.

ಬಹಳ ಹಿಂದಿನಿಂದಲೂ ನಂಬಿಕೊಂಡು ಬಂದಂತಹ ದೈವದೇವರ, ಆಚಾರ ವಿಚಾರಗಳ, ಮೂಢನಂಬಿಕೆಗಳನ್ನು ಸಂಶೋಧನೆಯ ಹೆಸರಿನಲ್ಲಿ ವೈಜ್ಞಾನಿಕವಾಗಿ, ತರ್ಕಬದ್ಧವಾಗಿ ಶೋಧಿಸುವ ಹಾಗೂ ವಿಶ್ಲೇಷಿಸುವ ಪ್ರಕ್ರಿಯೆಯಿಂದ ಒಂದು ಸಮುದಾಯದ ಜನರ ಭಾವನೆಗಳಿಗೆ ಧಕ್ಕೆ ತಗಲುವ ಸಾಧ್ಯತೆ ಇದೆಯೆನ್ನುವ ಎಚ್ಚರಿಕೆಯನ್ನು ಇಲ್ಲಿ ನೀಡಲಾಗಿದೆ. ಮುಖ್ಯ ಕಥಾನಕವನ್ನು ವಿವರಿಸುವುದರೊಂದಿಗೆ ಸಾಮಾನ್ಯ ಜನರ ಬಾಯಲ್ಲಿ ಐತಿಹ್ಯವಾಗಿರುವ ಘಟನೆಗಳ ಮೂಲವನ್ನು ಹುಡುಕುತ್ತಾ, ಲಿಖಿತ ದಾಖಲೆಗಳನ್ನು ತಾಳೆಹಾಕಿ ಸತ್ಯಾಸತ್ಯತೆಗಳನ್ನು ಬಯಲಿಗೆಳೆಯುವಲ್ಲಿ ಸಂಶೋಧಕನಿಗಿರಬೇಕಾದ ಸಾಮಾಜಿಕ ಜವಬ್ದಾರಿಯೂ ಅಷ್ಟೇ ಮುಖ್ಯವಾದುದು ಎನ್ನುವುದನ್ನು ಡಾ. ಜನಾರ್ದನ್ ಭಟ್ ಅವರು ತಮ್ಮ ಪ್ರಸ್ತುತ ಕಾದಂಬರಿಯಲ್ಲಿ ಬಹಳ ಗಂಭೀರವಾಗಿ ಪ್ರತಿಪಾದಿಸುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯನ್ನು ಹಿನ್ನೆಲೆಯಲ್ಲಿಟ್ಟು ಬರೆದ ಕಾದಂಬರಿಯಾದರೂ ಇದರ ವಸ್ತು ತುಂಬಾ ಪ್ರಸ್ತುತ ಹಾಗೂ ಸಾರ್ವತ್ರಿಕವಾದುದು. ಓದುಗರನ್ನು ಚಿಂತನೆಯತ್ತ ಮುಖ ಮಾಡಲು ಪ್ರೇರೇಪಿಸುವಂತಹದ್ದು. ಕನ್ನಡ ಸಾರಸ್ವತ ಲೋಕಕ್ಕೆ ಮತ್ತೊಂದು ಒಳ್ಳೆಯ ಕಾದಂಬರಿಯನ್ನು ನೀಡಿರುವ ಡಾ. ಜನಾರ್ದನ ಭಟ್ ಅವರು ಅಭಿನಂದನಾರ್ಹರು.

❖❖❖

ಮಯನರಮನೆಯಲ್ಲಿ
ಎಲ್ಲವೂ ಅಯೋಮಯ
ನೀರು ನೆಲವಾಯಿತೆ?
ನೆಲ ನೀರಾಯಿತೆ?
ನೀರು–ನೆಲ ತಿಳಿಯದ
ಬರಿಯಾಸೆಯ ಪದ ತಪ್ಪಿತೆ?

ಪ್ರಬುದ್ಧ ಸಂಬಂಧಗಳ ಅನ್ವೇಷಣೆ : ಧಾತು
ಧಾತು (ಕಾದಂಬರಿ)

ಡಾ. ಬಿ. ಜನಾರ್ದನ ಭಟ್
ಬೆಳ್ಮಣ್ಣು

ಲೇ.: ಡಾ. ನಾ. ಮೊಗಸಾಲೆ
ಪ್ರ.: ಮನೋಹರ ಗ್ರಂಥಮಾಲೆ, ಧಾರವಾಡ
ಪುಟಗಳು : 192; ಮೊದಲನೆಯ ಮುದ್ರಣ: 2016; ಬೆಲೆ: ರೂ. 180.

ಡಾ. ನಾ.ಮೊಗಸಾಲೆಯವರು ತಮ್ಮ ಎರಡು ಬೃಹತ್ ಕಾದಂಬರಿಗಳ ಬಳಿಕ ಪ್ರಾದೇಶಿಕ ವಸ್ತುಗಳಿಂದ ಹೊರಳಿ 'ಮೈ ಮನಗಳ ಸುಳಿಯನ್ನು' ಪರಿಶೀಲಿಸುವ 'ಧಾತು' ಎಂಬ ಸಣ್ಣ ಗಾತ್ರದ ಹೊಸ ಕಾದಂಬರಿಯೊಂದನ್ನು ನೀಡಿದ್ದಾರೆ. ಈ ಹೊರಳುವಿಕೆಯ ಮಹತ್ತ್ವವನ್ನು ಸೂಚಿಸಬಲ್ಲ ಮಾತೊಂದು 'ಧಾತು' ಕಾದಂಬರಿಯಲ್ಲಿದೆ: "ನಾನು ಹೇಳಲು ಹೊರಟಿರುವುದು ಊರಿನ ಬಗ್ಗೆ ಅಲ್ಲ. ಊರು ಅಂದರೆ ಪ್ರಕೃತಿ ತಾನೇ? ಅದರ ವರ್ಣನೆ ನಮ್ಮ ಸಾಹಿತ್ಯದಲ್ಲಿ ಧಾರಾಳವಾಗಿ ಆಗಿದೆ. ಹಾಗಾಗಿ ನಾನು ಹೇಳಲು ಹೊರಟಿರುವುದು ಮನುಷ್ಯರ ಬಗ್ಗೆ. ಅದು ಯಾವತ್ತೂ ಮುಗಿಯುವಂಥದಲ್ಲ."

ವೈದ್ಯರಾದ ಡಾ.ನಾ.ಮೊಗಸಾಲೆಯವರು ಮನುಷ್ಯನ ಲೈಂಗಿಕತೆಯ ಬಗ್ಗೆ ಮೊದಲಿನಿಂದಲೂ ವೈಜ್ಞಾನಿಕ ದೃಷ್ಟಿಕೋನವನ್ನು ಇಟ್ಟುಕೊಂಡಿದ್ದವರು. ಜನ ಸಾಮಾನ್ಯರಿಗೆ ಲೈಂಗಿಕ ವಿಜ್ಞಾನದ ಅರಿವನ್ನು ನೀಡುವ ಅಂಕಣವೊಂದನ್ನೂ ಬರೆಯುತ್ತಿದ್ದವರು.

'ಧಾತು' ಕಾದಂಬರಿ ಅರುವತ್ತೊಂದರ ಹರೆಯದ ವಿಧುರ ನಾರಾಯಣ ಮೋಂಟುಗುಡ್ಡೆ (ನಾಮೋ) ಎಂಬ ವಕೀಲನ ಪಾತ್ರದ ಮೂಲಕ ಗಂಡು ಹೆಣ್ಣಿನ ನಡುವಿನ ಪ್ರೇಮ ಮತ್ತು ಕಾಮಗಳ ವಿವಿಧ ಮಾದರಿಗಳನ್ನು ಅನ್ವೇಷಿಸುತ್ತದೆ. ಕಾದಂಬರಿಯಲ್ಲಿ ಮೂರು ಭಾಗಗಳಿವೆ: ಮೊದಲನೆಯ ಭಾಗದ ಕಥಾನಕ ಮರು ಮದುವೆಯಾಗಲೋ ಬೇಡವೋ ಎಂಬ ತಾಕಲಾಟದಲ್ಲಿದ್ದ ನಾಮೋಗೆ ಅವರ ಮನಶ್ಶಾಸ್ತ್ರಜ್ಞ ಮಿತ್ರ ಡಾ. ಪ್ರದೀಪ ಅವರ ಉದ್ದೇಶವನ್ನು ಕುರಿತು ಪ್ರಶ್ನಿಸುವುದರಿಂದ ಪ್ರಾರಂಭವಾಗುತ್ತದೆ. ಸಂಗಾತಿಯ ಅಗತ್ಯ ಕಾಮಕ್ಕಾಗಿಯೋ, ಪ್ರೇಮಕ್ಕಾಗಿಯೋ ಇತ್ಯಾದಿ ಪ್ರಶ್ನೆಗಳು, ಲೈಂಗಿಕ ಸಾಹಚರ್ಯದ ಔನ್ನತ್ಯ ಮತ್ತು ಅದರ ಕುರಿತಾದ ಅಜ್ಞಾನ ಇತ್ಯಾದಿ ವಿಷಯಗಳ ಬಗ್ಗೆ ನಾಮೋನನ್ನು ಜಾಗೃತಗೊಳಿಸುವ ಈ ಪ್ರಶ್ನೆ ಕಾದಂಬರಿಯ ಮುಂದಿನ ಶೋಧಕ್ಕೆ ಒಂದು ವೇದಿಕೆಯನ್ನು ಸಿದ್ಧಗೊಳಿಸಿಕೊಡುತ್ತದೆ.

ನಾಯಕ(ನಾಮೋ) ಮತ್ತು ಡಾ.ಪ್ರದೀಪರು ಕಾರ್ಯಕ್ರಮವೊಂದಕ್ಕಾಗಿ ಊರಿಗೆ ಹೋದಾಗ ನಿವೃತ್ತ ಶಿಕ್ಷಕ ರಂಗಪ್ಪಯ್ಯ ಮತ್ತು ಯುವತಿಯಾದ ಯಶೋದಾ ಟೀಚರ್ ನಡುವಿನ ಆತ್ಮೀಯ ಸಾಹಚರ್ಯವನ್ನು ಕಂಡು, ಅದು ಊರವರ ಮಾತಿಗೂ ಗ್ರಾಸವಾದುದನ್ನು ತಿಳಿದು ನಾಯಕ ಅವರ ನಡುವಿನ ಸಂಬಂಧದ ಸ್ವರೂಪ ಏನಿದ್ದೀತೆಂದು ಚಿಂತಿಸತೊಡಗುತ್ತಾನೆ. ಅದರಿಂದ ಪ್ರೇರಿತನಾಗಿ 'ಮನದ ಮುಂದಿನ ಮಾಯೆ' ಎಂಬ ಕತೆಯನ್ನು ಬರೆಯುತ್ತಾನೆ.

ಈ ಕತೆಯ ನಾಯಕ ಸುಮಾರು ಎಪ್ಪತ್ತರ ಹರೆಯದ ಸದಾನಂದರಾಯರು

ಡಿಪಾರ್ಟ್‌ಮೆಂಟಲ್ ಸ್ಟೋರಿನ ಮಾಲಕ. ತಮ್ಮಲ್ಲಿ ಉದ್ಯೋಗಿಯಾಗಿರುವ ತನ್ನ ಮೊಮ್ಮಗಳ ಪ್ರಾಯದ ಗೀತಾ ಎನ್ನುವ ಅವಿವಾಹಿತ ಯುವತಿಯತ್ತ ಆಕರ್ಷಿತರಾಗಿ ಅವಳನ್ನು ಅಪ್ಪಿ ಮುದ್ದಾಡಬೇಕು ಎಂದು ಬಯಸುತ್ತಾರೆ. ಅದಕ್ಕೆ ಅವಕಾಶ ಕೇಳಿದಾಗ ಗೀತಾ ನಿರಾಕರಿಸುತ್ತಾಳೆ. ರಾಯರು 'ಪರಿಣಾಮ' ಎನ್ನುವ ಕತೆಯನ್ನು ಬರೆದು ಅದರಲ್ಲಿಯೂ ಇದೇ ರೀತಿಯ ತೊಳಲಾಟವುಳ್ಳ ನಾಯಕನನ್ನು ಚಿತ್ರಿಸಿ, ಅದರ ನಾಯಕಿ ತಾನು ರಾಯರನ್ನು ತಪ್ಪು ತಿಳಿದಿರುವೆನೆಂಬ ಅರಿವಿನಿಂದ, ರಾಯರು ತನ್ನನ್ನು ಅಪ್ಪಿ ಮುದ್ದಾಡಬಹುದೆಂದು ಎಸ್‌ಎಮ್‌ಎಸ್ ಕಲುಹಿಸುತ್ತಾಳೆ. ಆದರೆ ಅದು ತಲುಪುವ ಮೊದಲೇ ರಾಯರು ಹೃದಯಾಘಾತಕ್ಕೆ ತುತ್ತಾಗಿ ಸಾಯುತ್ತಾರೆ. ನಾಯಕಿಯ ತುಟಿಗಳು ಕತಾನಾಯಕನನ್ನು ಸದಾ ನೆನಪಿಸಿಕೊಂಡು ಸ್ಫುರಿಸುತ್ತಲೇ ಇವೆ–ಎಂದು ಕತೆ ಮುಕ್ತಾಯವಾಗಿರುತ್ತದೆ.

ಈ ಕತೆಯನ್ನು ಓದಿದಾಗ ಗೀತಾ ರಾಯರಿಗೆ, "ನೀವು ನನ್ನ ದೇಹದ ಯಾವ ಭಾಗವನ್ನಾದರೂ ಚುಂಬಿಸಬಹುದು ಸರ್. 'ವಾಹ್!' ಎಂದು ಅದನ್ನು ನಾನು ಒಪ್ಪಿಕೊಳ್ಳುತ್ತೇನೆ" ಎಂದು ಎಸ್.ಎಂ.ಎಸ್. ಮಾಡುತ್ತಾಳೆ. ರಾಯರು ಅದಕ್ಕೆ ತಕ್ಷಣ ಪ್ರತಿಕ್ರಿಯಿಸದೆ ಕೊನೆಗೆ, "ನಾನು ನಿನ್ನನ್ನು ಹೂವು ಎಂದು ಭ್ರಮಿಸಿದ್ದೆ. ಆದರೆ ನೀನು ಹೂವಲ್ಲ ಹೆಣ್ಣು ಎನ್ನುವುದು ನನಗೆ ಈಗ ತಿಳಿಯಿತು. ನಾನು ಈಗ ಹೆಣ್ಣನ್ನು ಆಘ್ರಾಣಿಸುವ ಸ್ಥಿತಿಯಲ್ಲಿಲ್ಲ ಕ್ಷಮಿಸು." ಎಂದು ಎಸ್‌ಎಮ್‌ಎಸ್ ಮಾಡುತ್ತಾರೆ.

ಇದು ಕಾದಂಬರಿಯೊಳಗಿರುವ ಕತೆ.(ಇದು ನಿಜವಾಗಿಯೂ 'ಪ್ರಜಾವಾಣಿ'ಯಲ್ಲಿ ಪ್ರಕಟವಾದ ಡಾ. ನಾ. ಮೊಗಸಾಲೆಯವರ ಕತೆಯಾಗಿದೆ). ಈ ಕತೆಯೊಳಗೆ ಮತ್ತೊಂದು ಕತೆಯಿರುವುದು ಒಂದು ವಿಶೇಷ ತಂತ್ರವಾಗಿದೆ.

ಇದು ಅಸಂಖ್ಯ ಓದುಗರಿಗೆ ಇಷ್ಟವಾಗಿ ಪ್ರತಿಕ್ರಿಯೆಗಳ ಮಹಾಪೂರವೇ ಬರುತ್ತದೆ. ಹಾಗೆ ಪ್ರತಿಕ್ರಿಯೆಯ ಮೂಲಕ ಪರಿಚಯವಾದ ಶಶಿ ಉಡುಪ(ರಾಧೆ/ ಕುದುರೆ ಎಂದು ನಾಯಕ ಅವಳನ್ನು ಕರೆಯುವುದು) ಎಂಬ ಅವಿವಾಹಿತೆ, ಸುಮಾರು ನಾಯಕನಷ್ಟೇ ವಯಸ್ಸಿನ ಸ್ವತಃ ಹವ್ಯಾಸೀ ಲೇಖಕಿಯೂ ಪ್ರಬುದ್ಧ ಮಹಿಳೆಯ ಜತೆಗೆ ನಾಯಕನ ಸ್ನೇಹ ಗಂಡು ಹೆಣ್ಣಿನ ನಡುವಿನ ಅತ್ಯುನ್ನತ ಮಟ್ಟದ ಸಂಬಂಧದ ಸಾಕ್ಷಾತ್ಕಾರವಾಗಿ ಕೊನೆಗೊಳ್ಳುವುದು ಮುಂದಿನೆರಡು ಭಾಗಗಳಲ್ಲಿದೆ.

ಎರಡನೆಯ ಭಾಗ ಶಶಿಯ ಬದುಕಿನ ಕತೆಯ ಮೂಲಕ ಹೆಣ್ಣು ಹೇಗೆ ತನ್ನ ದೇಹವನ್ನು ಗಂಡಿನ ಉಪಭೋಗಕ್ಕಾಗಿ ಇರುವ ವಸ್ತುವಲ್ಲ ಎನ್ನುವಂತೆ ಬದುಕಬಲ್ಲಲು ಎಂದು ಕಾಣಿಸುತ್ತದೆ. ಮೂರನೆಯ ಭಾಗದಲ್ಲಿ ನಾಯಕ ಮತ್ತು ನಾಯಕಿ ದೈಹಿಕ ಕಾಮನೆಯನ್ನು ಮೀರಿ ಇಬ್ಬರಿಗೂ ಸಮಾನ ಸ್ವಾತಂತ್ರ್ಯ ಇರುವ ಸ್ನೇಹ ಸಂಬಂಧವೊಂದನ್ನು ಸ್ಥಾಪಿಸಿಕೊಳ್ಳುತ್ತಾರೆ.

'ಗಂಡು ಹೆಣ್ಣಿನ ಇಳಿವಯಸ್ಸಿನ ಪಕ್ವತೆಯಲ್ಲಿ ವ್ಯಕ್ತವಾಗುವ ಕಾಮದ ಪರಿಯನ್ನು, ಅದು ನೀಡುವ ಸ್ವಾರ್ಥ ರಹಿತವಾದ ನಿರ್ಮಲ ನಿರಪೇಕ್ಷ ಆನಂದವನ್ನು ಮತ್ತು ತನ್ಮೂಲಕ ಉಂಟಾಗುವ ಹೊಸ ಚೈತನ್ಯವನ್ನು ನಿರೂಪಿಸುವ ಈ ಕಾದಂಬರಿ ಕನ್ನಡ ಕಾದಂಬರಿ ಲೋಕಕ್ಕೆ ಹೊಸತನವನ್ನು ನೀಡಿದೆ' ಎಂದು ಬೆನ್ನುಡಿ ಬರೆದಿರುವ ಸುಬ್ರಾಯ ಚೊಕ್ಕಾಡಿ ಅಭಿಪ್ರಾಯಪಟ್ಟರೆ, ಮುನ್ನುಡಿ ಬರೆದಿರುವ ಡಾ. ಎಂ.ಎಸ್. ಆಶಾ ದೇವಿಯವರು ಈ ಸ್ತ್ರೀ ಸಂವೇದನೆಯ ಕಾದಂಬರಿ ಹೆಣ್ಣನ್ನು ಆರಾಧನೆಯ ಸ್ವರ್ಗ ಮತ್ತು ಪ್ರಾಣಿತ್ವದ ನರಕಗಳಿಂದ ಏಕಕಾಲಕ್ಕೆ ಬಿಡುಗಡೆಗೊಳಿಸಿ ಅವಳನ್ನು ಮನುಷ್ಯತ್ವದ ನೆಲೆಯಲ್ಲಿ ನೋಡುತ್ತದೆ ಎಂದು ಶ್ಲಾಘಿಸಿದ್ದಾರೆ.

ಈ ಸಮೀಕ್ಷೆಯ ಪ್ರಾರಂಭದಲ್ಲಿ ಶಿವರಾಮ ಕಾರಂತರನ್ನು ನೆನಪಿಸಿಕೊಂಡದ್ದು ಉದ್ದೇಶವಿಲ್ಲದೆ ಅಲ್ಲ. ಮೊಗಸಾಲೆಯವರ ಈ ಕಾದಂಬರಿ ಕಾರಂತರ ಕಾದಂಬರಿಗಳಂತೆ ಒಂದು ವಸ್ತುವನ್ನು ಪರಿಶೀಲಿಸಲು ಒಂದು ವಿನ್ಯಾಸವನ್ನು ಮಾಡಿಕೊಳ್ಳುತ್ತದೆ. ಕಾರಂತರ ಕಾದಂಬರಿಗಳಲ್ಲಿ ಹೀಗೆ ಸಿಂಟಗ್ಮಾಟಿಕ್ ಅಥವಾ ಪಾರಡಿಗ್ಮಾಟಿಕ್ ವಿನ್ಯಾಸಗಳು ಇರುವುದನ್ನು ಗಮನಿಸಬಹುದು. ಹೀಗೆ ಪರಿಶೀಲಿಸಿದಾಗ 'ಧಾತು' ಕಾದಂಬರಿಯ ವಿನ್ಯಾಸ ಬಹಳ ಸೂಕ್ಷ್ಮವಾಗಿ ಈ ವಸ್ತುವನ್ನು ನಾಲ್ಕು ನೆಲೆಗಳಲ್ಲಿ ಶೋಧಿಸುತ್ತಿರುವುದು ಕಂಡು ಬರುತ್ತದೆ. ಅಲ್ಲದೆ ಕಾದಂಬರಿಯ ವಿನ್ಯಾಸ ಬೇಂದ್ರೆಯವರ ನಾಲ್ಕು ತಂತಿಯ ವಿನ್ಯಾಸದಂತೆ ಇರುವುದು ಕಂಡುಬರುತ್ತದೆ.

ಈ ನಾಲ್ಕು ಕೋನಗಳ ಫ್ಲೆಕ್ಸಿಬ್ಲ್ ಚೌಕದ ಒಂದು ಕೋನದಲ್ಲಿ ಡಾ. ಪ್ರದೀಪ್, ಅದರ ಎದುರಿನ ಕೋನದಲ್ಲಿ ರಂಗಪ್ಪಯ್ಯ–ಯಶೋದಾ, ಮತ್ತೆರಡು ಕೋನಗಳಲ್ಲಿ ಪತ್ನೀ ಸಹಿತ ನಾಮೋ ಮತ್ತು ಶಶಿಪ್ರಿಯ ನಾಮೋ ಇದ್ದಾರೆ. ಈ ನಾಲ್ಕು ಬಗೆಯ ಸಾಧ್ಯತೆಗಳ ನಡುವೆ ಬಲೆಯಲ್ಲಿ ಸಿಕ್ಕಿ ಬಿದ್ದಿರುವುದು ನಾಮೋ ಬರೆದ ಕತೆಯಲ್ಲಿರುವ ಆದರ್ಶ! ನಾಮೋನ ಮಗ ಮತ್ತು ಸೊಸೆಯ ಸಂಬಂಧವೂ ಉದಾಹರಣೆಯಾಗಿ ಬರುತ್ತದೆ. ಅದು ಬದಲಾಗುವಂಥದ್ದು, ಸರಿಯಾಗುವಂಥದ್ದು. ಆದ ಕಾರಣ ಅದನ್ನೊಂದು ಕೊನವನ್ನಾಗಿ ಮಾಡಿಲ್ಲ. ಹೀಗೆ ಇನ್ನೂ ಹಲವು ಬಗೆಯ ಸಂಬಂಧಗಳು, ಸಮಸ್ಯೆಗಳು ಇರುವ ಸಾಧ್ಯತೆ ಇದೆ. ಟಾಲ್‌ಸ್ಟಾಯ್‌ನ ಅನ್ನಾ ಕರೆನಿನಾ ಕಾದಂಬರಿಯ ಪ್ರಾರಂಭದಲ್ಲಿ ಹೇಳಿದ ಹಾಗೆ, "ಎಲ್ಲಾ ತೃಪ್ತ ಸಂಸಾರಗಳು ಒಂದೇ ರೀತಿ ಕಾಣಿಸುತ್ತವೆ; ಆದರೆ ಪ್ರತಿಯೊಂದು ಅತೃಪ್ತ ಸಂಸಾರ ತನ್ನದೇ ಆದ ರೀತಿಯಲ್ಲಿ ಅತೃಪ್ತವಾಗಿದೆ." ಮೊಗಸಾಲೆಯವರ ಈ ಕಾದಂಬರಿಯಲ್ಲಿ ಡಾ. ಪ್ರದೀಪ ಹೇಳುತ್ತಾನೆ: "ಸೆಕ್ಸ್ ಎನ್ನುವುದು ವಕ್ತಿಯಿಂದ ವ್ಯಕ್ತಿಗೆ ಭಿನ್ನ ಸ್ವರೂಪದಲ್ಲಿ ಇರುವಂಥಾ ವಿಷಯ ಕಣೋ."

ಹೀಗಿರುವುದರಿಂದ ನಾಲ್ಕು ಸ್ಥೂಲ ವಿಭಾಗಗಳಡಿಯಲ್ಲಿ ಗಂಡು ಹೆಣ್ಣಿನ ಸಂಬಂಧದ ಸಾಧ್ಯತೆ ಸ್ವರೂಪಗಳನ್ನು ಅನ್ವೇಷಿಸಲು ಡಾ. ಮೊಗಸಾಲೆಯವರು ಪ್ರಯತ್ನಿಸಿದ್ದಾರೆ.

ಕಾದಂಬರಿಯ ಮೊದಲನೆಯ ಓದಿಗೆ ಅಥವಾ ಮೇಲ್ನೋಟಕ್ಕೆ ಕಾದಂಬರಿ ಇಳಿವಯಸ್ಸಿನ ಗಂಡು ಹೆಣ್ಣಿನ ಆರೋಗ್ಯಕರ ಸಂಬಂಧದ ಅನ್ವೇಷಣೆಯಾಗಿ ಸಾಗುತ್ತದೆ. ಕಾದಂಬರಿಯ ನಾಯಕ ತಾನು ಪತ್ನಿಯ ಜತೆಗೆ ಬದುಕುತ್ತಿದ್ದಾಗ ಆಕೆಯ ಭಾವನೆಗಳಿಗೆ ಬೆಲೆಕೊಡದೆ ನಡೆಸಿಕೊಂಡೆ ಎಂಬ ಪಶ್ಚಾತ್ತಾಪವನ್ನು ಹೊಂದಿದ ಕಾರಣ ಶಶಿಯ ಜತೆಗೆ ಪ್ರಬುದ್ಧತೆಯಿಂದ ನಡೆದುಕೊಳ್ಳುತ್ತಾನೆ. ಶಶಿಯೂ ಅಂತಹದೇ ಪ್ಲೇಟೋನಿಕ್ ಸಂಬಂಧದ ಖುಷಿಯ ಅನ್ವೇಷಣೆಯಲ್ಲಿರುತ್ತಾಳಾದ ಕಾರಣ ಅವರಿಬ್ಬರ ಈಗಿನ ನಿಲುವುಗಳು ಒಂದಕ್ಕೊಂದು ಹೊಂದಿಕೆಯಾಗುತ್ತವೆ. ಒಂದು ವೇಳೆ ನಾಯಕನಲ್ಲಿ ಲೈಂಗಿಕ ವಾಸನೆ ಉಳಿದಿದ್ದರೆ ಅಥವಾ ಶಶಿಗೆ ಅದು ಬೇಕಿದ್ದರೆ, ಮುಖ್ಯವಾಗಿ ಒಬ್ಬರಿಗೆ ಬೇಕು ಇನ್ನೊಬ್ಬರಿಗೆ ಬೇಡ ಎನ್ನುವ ಸ್ಥಿತಿಯ ಪರಿಶೀಲನೆ ಇದೆಯೆ?

ಅದಕ್ಕಾಗಿ ಓದುಗ ಹಿಮ್ಮುಖವಾಗಿ ಪ್ರಯಾಣ ಹೊರಡಬೇಕು. ನಡುವಿನ ಆದರ್ಶ ಕತೆಯ ಕಟ್ಟೆಯಲ್ಲಿ ಒಂದು ಕ್ಷಣ ನಿಂತು ನೇರ ದಾರಿಯಲ್ಲಿ ಹೋಗಿ ನಾಮೋನ ಇನ್ನೊಂದು ತುದಿಯನ್ನು ತಲುಪದೆ ಅಡ್ಡ ದಾರಿಯಲ್ಲಿ ಹೋಗಿ ರಂಗ ಯಶೋದಾರ ಸಂಬಂಧಕ್ಕೆ ತಲುಪಬೇಕು. ಅದರ ಸ್ವರೂಪ ಇದಕ್ಕೆ ಉತ್ತರ ಕೊಡುತ್ತದೆ. ಅದರಲ್ಲಿ ಲೇಖಕರು ಸಂದಿಗ್ಧತೆಯನ್ನು ಉಳಿಸಿರುವುದೇ ಈ ರೀತಿಯ ಮುಕ್ತ ಪರಿಶೀಲನೆಗೆ. ನಿವೃತ್ತ ಶಾಲಾ

ಅಧ್ಯಾಪಕರಾದ ಅರುವತ್ತು ವರ್ಷದ ರಂಗಪ್ಪಯ್ಯ ಹದಿನೆಂಟು ವರ್ಷದ ಅವಿವಾಹಿತ ಯುವತಿ ಯಶೋದಾಳಿಗೆ ಅಂಗನವಾಡಿಯಲ್ಲಿ ಕೆಲಸ ಕೊಡಿಸಿ ಅವಳ ಜತೆಗೆ ಓಡಾಡುವುದು, ಅವರಿಬ್ಬರೂ ಒಟ್ಟಿಗೇ ಇರುವುದನ್ನು ನೋಡಿದ ಮಂದಿ ಅವರಿಬ್ಬರಿಗೂ ಸಂಬಂಧ ಇದೆ ಎಂದು ನಂಬುತ್ತಾರೆ. ನಂಬದಿರುವವರೂ ಇದ್ದಾರೆ. ರಂಗಪ್ಪಯ್ಯ ಊರಿನಲ್ಲಿ ಸಮಾಜ ಮಂದಿರವನ್ನು ಕಟ್ಟಿಸಲು ಓಡಾಡಿ ಯಶಸ್ವಿಯಾಗುತ್ತಾರೆ. ಈ ವಯಸ್ಸಿನಲ್ಲಿಯೂ ಅವರ ಉತ್ಸಾಹವನ್ನು ನೋಡಿದರೆ ಅವರಿಗೆ ಯಶೋದಾಳ ಜತೆಗೆ ಸ್ನೇಹವಿರುವುದು ಕೂಡ ಸಾಧ್ಯ, ಅದು ಅವರ ಜೀವನೋತ್ಸಾಹದ ಒಂದು ಭಾಗ ಎಂದು ಅನಿಸುವುದು.

ಲೈಂಗಿಕತೆಯನ್ನು ಸನ್ಯಾಸಿಗಳು ಗೆದ್ದು, ಆ ಫೋರ್ಸ್ ಅನ್ನು ಲೋಕ ಕಲ್ಯಾಣಕ್ಕೆ ಬಳಸುತ್ತಾರೆ. ಅದಕ್ಕೆ ಉದಾಹರಣೆಯಾಗಿ ಡಾ.ಪ್ರದೀಪ್ ಇದ್ದಾರೆ. ಈ ರೀತಿ ಸೃಜನಶೀಲವಾದ ಬೇರೆ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದರಲ್ಲಿಯೂ ಲೈಂಗಿಕತೆಯ ಅಭಿವ್ಯಕ್ತಿಯಿದೆ ಎಂದು ಸಿಗ್ಮಂಡ್ ಫ್ರಾಯ್ಡ್ ಹೇಳಿರುವುದಿದೆ. (ಈ ಸಿದ್ಧಾಂತದ ಗ್ರಹಿಕೆ ಹೇಗೆ, ಅದು ಎಷ್ಟು ಸಮಂಜಸ ಎನ್ನುವುದು ಬೇರೆ ವಿಚಾರ). ಆದರೆ ಉದಾತ್ತವಾದ ಈ ಒಂದು ಮುಖ ಸಮಾಜದಲ್ಲಿ ಅಪೂರ್ವವಾಗಿಯಾದರೂ ಕಾಣುತ್ತಿದೆ. ಸಮಾಜ ಇಂತಹವರ ಕೊಡುಗೆಯನ್ನು ಮರುಭೂಮಿಯಲ್ಲಿ ಓಯಸಿಸ್‌ನಂತೆ ಕೃತಜ್ಞತೆಯಿಂದ ಗುರುತಿಸುತ್ತದೆ.

ಒಂದು ಅರ್ಥದಲ್ಲಿ ಈ ಕಾದಂಬರಿಯ ನಾಯಕ ಡಾ. ಪ್ರದೀಪನೇ ಅನ್ನಬಹುದು. ಯಾಕೆಂದರೆ ಅದು ಒಂದು ಆದರ್ಶ. ಅದನ್ನು ಕಾದಂಬರಿಯಲ್ಲಿ ಮೊಗಸಾಲೆಯವರು ಉದ್ದಕ್ಕೂ ದಾಖಲಿಸುತ್ತಾ ಹೋಗಿದ್ದಾರೆ. ತನ್ನ ಊರಿನಲ್ಲಿ ಸಮಾಜ ಮಂದಿರ ಕಟ್ಟಲು ಹತ್ತುಲಕ್ಷ ದಾನ ನೀಡುವ ಡಾ ಪ್ರದೀಪ ಅದರಲ್ಲಿ ತನ್ನ ಅಪ್ಪ ಅಮ್ಮನ ಹೆಸರನ್ನು ಹಾಕುವುದು ಮುಂತಾದ ಯಾವ ಪ್ರತಿಫಲವನ್ನು ಕೂಡ ಬಯಸುವುದಿಲ್ಲ. ಇದು ಗೊತ್ತಾದಾಗ ನಾಯಕ ನಾಮೋ ಯೋಚಿಸುವುದು ಹೀಗೆ: “ರಾಯರಿಗೆ ಈ ಪ್ರದೀಪ ಸನ್ಯಾಸಿಯ ಥರ ಇದ್ದಾನೆ ಎನ್ನುವ ವಿಷಯ ಗೊತ್ತಾದದ್ದು ಈಗಲೇ. ಆ ಖುಶಿ ಹಾಗೂ ಸಂಭ್ರಮದ ಜೊತೆ ಸ್ವಲ್ಪ ಮುಜುಗರವೂ ಆದಂತೆ ಆಗಿ ರಾಯರು...” (ಪುಟ 23).

ಸಮಾಜ ಮಂದಿರದ ಉದ್ಘಾಟನೆಯ ದಿನ ಡಾ.ಪ್ರದೀಪ ಆಡಿದ ಮಾತುಗಳಲ್ಲಿ ಬರುವ ಈ ಸಂಗತಿಯನ್ನು ಗಮನಿಸಿ: “ಪ್ರಕೃತಿಯ ದೃಷ್ಟಿಯಲ್ಲಿ ಪ್ರಾಣಿಗಳಿಗೂ ನಮಗೂ ವ್ಯತ್ಯಾಸ ಇಲ್ಲ. ಆದರೆ ಇದೆ ಎಂಬ ವ್ಯತ್ಯಾಸವನ್ನು ಸೃಷ್ಟಿಸಿಕೊಂಡದ್ದು ನಾವು ನಮ್ಮ ಬುದ್ಧಿ ಮತ್ತು ವಿವೇಕದಿಂದ.” ಇದು ಲೈಂಗಿಕತೆಯ ಬಗ್ಗೆ ಅಡಿದ ಮಾತಲ್ಲವಾದರೂ ಕಾದಂಬರಿಯ ಹಿನ್ನೆಲೆಯಲ್ಲಿ ಅದಕ್ಕೆ ಅನ್ವಯ ಮಾಡಿಕೊಂಡಾಗ ಡಾ. ಪ್ರದೀಪರ ಆಯ್ಕೆ ಬುದ್ಧಿ ಮತ್ತು ವಿವೇಕದಿಂದ ಮಾಡಿಕೊಂಡದ್ದು ಎನ್ನುವುದು ಹೊಳೆಯುತ್ತದೆ. ಆ ಆಯ್ಕೆ ಸನ್ಯಾಸಿಯಂತೆ ಸಮಾಜಕ್ಕೆ ಬೇಕಾಗಿ ಬದುಕುವುದು, ಸಮಾಜದ ಹಿತದಲ್ಲಿ ಖುಶಿಯಲ್ಲಿ ಕಾಣುವುದು. ಅಲ್ಲದೆ ಡಾ.ಪ್ರದೀಪನೇ ಹೇಳುವಂತೆ ಎಲ್ಲರಿಗೂ ಸೆಕ್ಸ್ ಅಗತ್ಯವೂ, ಅನಿವಾರ್ಯವೂ ಆಗಿರುವುದಿಲ್ಲ. ಅಂತಹ ಒಂದು ಮಾದರಿಯಾಗಿ ಈ ಕಾದಂಬರಿಯಲ್ಲಿ ಡಾ.ಪ್ರದೀಪ್ ಇದ್ದಾನೆ.

ಹೀಗೆ ವಿಶಿಷ್ಟವಾದ ವಿನ್ಯಾಸದ ಮೂಲಕ ಆಕರ್ಷಕವಾಗಿ ಓದಿಸಿಕೊಳ್ಳುವ ಜತೆಗೆ ಮರು ಓದಿಗೆ ಪ್ರೇರೇಪಿಸಿ ಚಿಂತನೆಗೆ ತೊಡಗಿಸುವ ‘ಧಾತು’ ಕಾದಂಬರಿ ಮೊಗಸಾಲೆಯವರ ಯಶಸ್ವೀ ಕಾದಂಬರಿಗಳಲ್ಲಿ ಒಂದಾಗಿದೆ. ಕಾರಂತರ ‘ಮೈಮನಗಳ ಸುಳಿಯಲ್ಲಿ’ ಕಾದಂಬರಿಯಂತೆ ವಿಶೇಷ ಗಮನಕ್ಕೆ, ಅಧ್ಯಯನಕ್ಕೆ ಅರ್ಹವಾಗಿದೆ.

❖❖❖

ಕಾಸರಗೋಡು ಪರಿಸರದ ಕನ್ನಡ ಸ್ಥಳನಾಮಗಳು

ಡಾ. ಮೋಹನ ಕುಂಟಾರ್
ಪ್ರಾಧ್ಯಾಪಕರು, ಕನ್ನಡ ವಿಶ್ವವಿದ್ಯಾಲಯ, ಹಂಪಿ,
ವಿದ್ಯಾರಣ್ಯ–583276, ಬಳ್ಳಾರಿ ಜಿಲ್ಲೆ.

ಸ್ಥಳನಾಮಗಳು ನಾಡಿನ ಇತಿಹಾಸವನ್ನು ಹಾಗೂ ಭೌಗೋಳಿಕ ಸ್ಥಿತಿಗತಿಗಳನ್ನು ತಿಳಿಯಲು ಬಹುಮುಖ್ಯ ಆಕರಗಳಾಗಿವೆ ಸ್ಥಳನಾಮಗಳು. ನೆಲವಾಚಕಗಳಾಗಿ, ಜಲವಾಚಕಗಳಾಗಿ, ಸಸ್ಯವಾಚಕಗಳಾಗಿ ಒಂದು ನಾಡಿನ ಭೌಗೋಳಿಕ ಸ್ವರೂಪವನ್ನು ತಿಳಿಯಲು ಸ್ಥಳನಾಮಗಳು ಅನುಕೂಲ ಮಾಡಿಕೊಡುತ್ತವೆ. ಹಾಗೆಯೇ ಜನವಾಚಕಗಳಾಗಿ, ಜಾತಿವಾಚಕಗಳಾಗಿ ನಾಡಿನ ಸಾಂಸ್ಕೃತಿಕ ವಿವರಗಳನ್ನು ತಿಳಿಯಲು ನೆರವಾಗುತ್ತದೆ. ಕಾಸರಗೋಡಿನ ಸ್ಥಳನಾಮಗಳ ಸಂದರ್ಭದಲ್ಲಿಯೂ ಈ ಸ್ವಭಾವವನ್ನು ಕಾಣಬಹುದು. ತುಳು, ಮಲಯಾಳಂ ನಡುವೆ ಕನ್ನಡ ಸ್ಥಳನಾಮಗಳು ಆ ಪ್ರದೇಶವನ್ನು ಕನ್ನಡದ ನೆಲವೆಂದು ಸಾಬೀತು ಪಡಿಸುತ್ತಿವೆ. ಸ್ಥಳನಾಮಗಳು ಈ ಪ್ರದೇಶದ ಅಳಿದು ಹೋದ ಸಂಸ್ಕೃತಿಯನ್ನು, ಸಸ್ಯ ಸಂಪತ್ತು, ನೀರಿನ ಇರವನ್ನು, ಪ್ರಾಣಿ ಪಕ್ಷಿಗಳ ಸಂಕುಲವನ್ನು ತಮ್ಮ ಒಡಲೊಳಗೆ ಇರಿಸಿಕೊಂಡಿವೆ. ಒಳಹೊಕ್ಕು ಪದ ವ್ಯುತ್ಪತ್ತಿ ಮೂಲಕ ಶೋಧಿಸಿದರೆ ಸ್ಥಳದ ಇತಿಹಾಸವನ್ನು ಪುನರ್‌ರಚಿಸಲು ಇವುಗಳು ನೆರವಾಗಬಲ್ಲವು.

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಒಂದು ಅಂಶವೆಂದರೆ ಕನ್ನಡ ಹಾಗೂ ತುಳು ಸ್ಥಳನಾಮಗಳು ಇಂದಿಗೂ ಈ ಪ್ರದೇಶದಲ್ಲಿ ಹಾಗೆಯೇ ಉಳಿದುಕೊಂಡಿವೆ. ಮಲಯಾಳಂ ನಲ್ಲಿ ಅವುಗಳ ಭಾಷಾಂತರವಾಗಿ ಬಳಕೆಯಾಗುತ್ತಿವೆ. ಆದರೆ ಯಾವುದೇ ಮಲಯಾಳಂ ಸ್ಥಳನಾಮಗಳು ಕನ್ನಡಕ್ಕೆ ಭಾಷಾಂತರವಾಗಿ ಬಳಸಿರುವುದನ್ನು ಕಾಣುವುದಿಲ್ಲ. ಇದು ತುಳು ಹಾಗೂ ಕನ್ನಡಿಗರು ಈ ಪ್ರದೇಶದ ಪ್ರಾಚೀನ ನಿವಾಸಿಗಳು ಎಂಬುದನ್ನು ತಿಳಿಸುತ್ತದೆ. ಇಲ್ಲಿನ ಕೆಲವೊಂದು ಕನ್ನಡ ಸ್ಥಳನಾಮಗಳು ಹಾಗೂ ಅವುಗಳು ರೂಪುಗೊಂಡ ಬಗೆಯನ್ನು ಮುಂದೆ ಪರಿಶೀಲಿಸಬಹುದು.

ಸಸ್ಯವಾಚಿ ಸ್ಥಳನಾಮಗಳು

ಅಟ್ಟೆಗೋಳಿ: ತಲೆಯಿಲ್ಲದ ಗೋಳಿ(ಆಲ) ಮರವನ್ನು ಈ ಪದ ಸೂಚಿಸುತ್ತಿದೆ. ಹಿಂದೆ ಈ ಪ್ರದೇಶದಲ್ಲಿ ತಲೆಯಿಲ್ಲದ ಗೋಳಿ ಮರವೊಂದು ವರ್ಷಗಳ ಕಾಲ ನಿಂತಿದ್ದಿರಬಹುದು. ಇದರಿಂದ 'ಅಟ್ಟೆಗೋಳಿ' ಎಂಬ ಹೆಸರು ಊರಿಗೆ ಬಂದಿರಬಹುದು. ಸತ್ತಗೋಳಿ ಸೀತಾಂಗೋಳಿ ಅಗಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಅಂದರೆ ಗೋಳಿ ಮರಗಳು ಯಥೇಚ್ಛವಾಗಿ ಇದ್ದ ಪ್ರದೇಶ ಇದೆಂಬುದು ಇತ್ತೀಚೆಗೂ ಅವುಗಳ ಸಂತತಿ ಧಾರಾಳವಾಗಿ ಈ ಪ್ರದೇಶದಲ್ಲಿರುವುದರಿಂದ ಸ್ಪಷ್ಟವಾಗುತ್ತದೆ.

ಕಾಸರಗೋಡು ಸ್ಥಳನಾಮದ ಬಗೆಗೆ ಅನೇಕ ವಿದ್ವಾಂಸರ ಅಭಿಪ್ರಾಯಗಳು ವಿಭಿನ್ನವಾಗಿವೆ. ಬೇಕಲ ರಾಮನಾಯಕರು ಕಾಸಾರ+ಕೋಡ–ಕಾಸರಗೋಡು ಆಗಿರಬೇಕೆಂದು

ಅಭಿಪ್ರಾಯಪಟ್ಟಿದ್ದಾರೆ. ಕಾಸರವೆಂಬ ಸಂಸ್ಕೃತ ಪದಕ್ಕೆ ಕೊಳ ಎಂದು ಸಾಮಾನ್ಯ ಅರ್ಥವಿದೆ. ಆದರೆ ತಾವರೆಗಳುಳ್ಳ ಕೊಳವೆಂಬ ವಿಶೇಷಾರ್ಥವೂ ಇರುವುದರಿಂದ ಕಾಸಾರ ಕ್ರೋಡವೇ ಕಾಸರಗೋಡಾಯಿತೆಂಬುದು ಅವರ ಅಭಿಪ್ರಾಯ(ಬಿನ್ನವತ್ತಳೆ, ಪು.68). ಕಾಸರ (ಕಾಡುಕೋಣ) ಕಾಡು–ಕಾಸರಗಾಡು–ಕಾಸರಗೋಡು ಎಂದೂ ಅವರ ಇನ್ನೊಂದು ಅಭಿಪ್ರಾಯವೂ ಇದೆ. ಎನ್.ಎ.ಶೀನಪ್ಪ ಹೆಗಡೆಯವರ ಪ್ರಕಾರ ಕಾಸರಗೋಡು–ಕಾಂಗೋಡು–ಎರಡು ಕೋಡಿರುವ ಪ್ರದೇಶ ಎಂದು ಹೇಳಿದ್ದಾರೆ. ಶ್ರೀಧರ ಕಕ್ಕಿಲ್ಲಾಯರು ಕಾಸರಗೋಡು–ಕಾಂಞಿಲೋಟು ಎಂಬ ಮಲಯಾಳಂ ಪದದ ಕನ್ನಡ ರೂಪ ಎಂದಿದ್ದಾರೆ.

ಕಾಸರಗೋಡು ಎಂಬುದು ಪ್ರಕೃತಿವಾಚಕ ಸ್ಥಳನಾಮವೆಂದು ಕೆ.ಸುಬ್ರಮಣ್ಯ ಭಟ್ಟರ ಅಭಿಪ್ರಾಯ(ಗಡಿನಾಡಿನ ಕಿಡಿ, ಪು.29). ಅವರೇ ಹೇಳುವಂತೆ ಪೂರ್ವಪದ ಪ್ರಕೃತಿ ವಾಚಕ ಪರಪದ ಭೂ ವಿವರವನ್ನು ಸೂಚಿಸುತ್ತದೆ. ಕಾಸರ ಎಂಬುದು ಕಾಸರಕನ ಮರವನ್ನು, ಕೋಡು ಎನ್ನುವುದು ಗೋಡು ಆಗಿದ್ದು ಇದು ಎತ್ತರದ ಪ್ರದೇಶ ಎಂಬ ಅರ್ಥವನ್ನು ಹೊಂದಿರುವುದಾಗಿ ಹೇಳಿದ್ದಾರೆ.

'ಕೋಶರ್' ಎಂಬ ಜನವರ್ಗದವರು ಇರುವ ಪ್ರದೇಶವನ್ನು ಕಾಸರಗೋಡು ಎಂಬ ಹೆಸರಿನಿಂದ ಗುರುತಿಸಿರಬಹುದು ಎಂಬ ಅಭಿಪ್ರಾಯವಿದೆ. 'ಕೋಶರ್' ಪದವು 'ಕೊಸರು' ಎಂಬ ರೂಪಾಂತರ ಪಡೆದು ಕಾಸರು ಆಗಿರಬೇಕು. 'ಕೋಡು' ಮತ್ತು 'ಗೋಡು' ಇವುಗಳಿಗೆ ರೇವು ಅಥವಾ ಕೆನೆ ಮಣ್ಣಿನ ನೆಲ ಎಂಬಿತ್ಯಾದಿ ಅರ್ಥಗಳಿವೆ. ಹಾಗಾಗಿ ಕೋಶರ್‌ಕೋಡು–ಕಾಸರಗೋಡು ಆಗಿರಬಹುದು ಎಂಬುದನ್ನು ಷ. ಶೆಟ್ಟರ್ ವಿವರಿಸಲು ಯತ್ನಿಸಿದ್ದಾರೆ(ಶಂಗಂ ತಮಿಳಗಂ ಮತ್ತು ಕನ್ನಡ ನಾಡು ನುಡಿ, ಪು.177) ಸಂಗಮ್ ಸಾಹಿತ್ಯದಲ್ಲಿ ಉಲ್ಲೇಖವಾದ ಕೋಶರ್ ಜನರು ಈ ಪ್ರದೇಶದಲ್ಲಿಯೇ ನೆಲೆಸಿದ್ದರು ಎಂಬುದರಿಂದ ಈ ಪ್ರದೇಶದ ಪ್ರಾಚೀನತೆಯನ್ನು ತಿಳಿಯಬಹುದಾಗಿದೆ.

ಈ ಎಲ್ಲಾ ಅಭಿಪ್ರಾಯಗಳಿದ್ದರೂ ಸಹ ಇಲ್ಲಿನ ಭೂ ಪ್ರಕೃತಿ ಹಾಗೂ ಇತರೇ ಸ್ಥಳ ನಾಮಗಳ ನೆಲೆಯಿಂದ ಇದನ್ನು ವಿವರಿಸಬಹುದೆನಿಸುತ್ತದೆ. ಇದು ಸಸ್ಯವಾಚಿ ಪದ. ಕಾಸರಕನ ಮರಗಳ(ಕಾಂಜರ ಅಥವಾ ಕಾಂಜೀರಮರ) ಕಾಡು ಎಂಬುದೇ ಇದರ ಅರ್ಥ. ಕಾಸರ + ಕಾಡು=ಕಾಸರಕಾಡು–ಕಾಸರಗಾಡು–ಕಾಸರಗೋಡು ಆಗಿರಬಹುದು. ಸಮೀಪದಲ್ಲಿಯೇ 'ಕರಂಡಕಾಡು' ಎಂಬ ಊರಿದೆ. ಕರಂಡ ಗಿಡಗಳ ಕಾಡು ಎಂಬುದು ಇದರರ್ಥ. 'ಕೋಡು' ಎಂದರೆ ಎತ್ತರದ ಪ್ರದೇಶ ಎಂಬರ್ಥದಲ್ಲಿ ಉತ್ತರ ಪದವು ಬಂದಿರುವ ಸಾಧ್ಯತೆ ಕಡಿಮೆ. ಏಕೆಂದರೆ ಇಲ್ಲಿ 'ಕುಂಜೆ' ಎನ್ನುವ ತುಳು ಪದ ಇದೇ ಅರ್ಥದಲ್ಲಿ ಸ್ಥಳನಾಮಗಳಲ್ಲಿ ಬಳಕೆಯಾಗಿದೆ. 'ನೆಲ್ಲಿ ಕುಂಜೆ' ಎಂಬುದು ನೆಲ್ಲಿಮರಗಳಿರುವ ಗುಡ್ಡ ಎಂಬರ್ಥದಲ್ಲಿ ರೂಪುಗೊಂಡಿದೆ. ಹಾಗಾಗಿ 'ಗೋಡು' ಎಂಬುದು 'ಕಾಡು' ಪದದಿಂದ ಜನಿತವಾಗಿರುವ ಸಾಧ್ಯತೆಯೇ ಹೆಚ್ಚು. ಕಾಸರಗೋಡನ್ನು ಮಲಯಾಳಂನಲ್ಲಿ ಕಾಞಿರಾರೋಟ್ ಎಂದೇ ಹೇಳಲಾಗುತ್ತದೆ. ಕಾಞಿರ್ ಎಂದರೂ ಕಾಸರಕನ ಮರ ಎಂದೇ ಅರ್ಥ. ಕಾಸರಕನ ಮರಗಳು ಈ ಪ್ರದೇಶದಲ್ಲಿ ಯಥೇಚ್ಛವಾಗಿವೆ. ಈ ಮರಗಳನ್ನೇ ಆಧರಿಸಿ ಬೇರೆ ಬೇರೆ ಊರುಗಳ ಹೆಸರುಗಳು ಇತರೇ ಭಾಷೆಗಳಲ್ಲೂ ಇವೆ. ಮಲಯಾಳಂನ 'ಕಾಞಂಗಾಡ್' ಕಾಸರಗೋಡಿನ ಸಮೀಪದಲ್ಲಿದೆ. ಕಾಞಿರ್+ಕಾಡ್–ಕಾಞಂಗಾಡ್(ಕಾಸರಕನ ಮರಗಳ ಕಾಡು) ಆಗಿದೆ. ಹಾಗೆಯೇ ಕಾಯರ್ ಪದವು ತುಳು ಭಾಷೆಯ ಹೆಸರಿನ ಇನ್ನೊಂದು ಊರು ಕಾಸರಗೋಡಿನ ಸಮೀಪವಿದೆ. ಕಾಯರ್ ಎಂದರೆ ತುಳುವಿನಲ್ಲಿ ಕಾಸರಕನ ಮರ

ಎಂದರ್ಥ. ಪದವು ಎಂದರೆ ತಪ್ಪಲು ಇಳಿಜಾರು ಪ್ರದೇಶ. ಹೀಗೆ ಕಾಸರಕನ ಮರಗಳು ಇರುವ ತಪ್ಪಲು ಪ್ರದೇಶ ಎಂಬ ಅರ್ಥ ಬರುತ್ತದೆ.

ಮಲಯಾಳಂ ಭಾಷೆಯಲ್ಲಿ ಕಾಞಿರಂ, ಕಾಞಿರಪಳ್ಳಿ ಮೊದಲಾದ ಊರುಗಳ ಹೆಸರುಗಳಿವೆ. ಅಲ್ಲದೆ ತುಳುಭಾಷೆಯಲ್ಲಿಯೂ ಕಾಯರ್‌ಕಟ್ಟೆ, ಕಾಯರ್‌ಮೂಲೆ, ಕಾಯರ್‌ಪಾಡಿ, ಕಾಯರ್‌ತ್ತಡ್ಕ ಎಂಬತ್ಯಾದಿ ಹೆಸರಿನ ಊರುಗಳಿವೆ. ಉತ್ತರ ಕನ್ನಡದಲ್ಲಿ ಕಾಸರಕೋಡು, ಬೆಂಗಳೂರಿನ ಸಮೀಪ ಕಾಚಿರಪಳ್ಳಿ ಎಂಬಿತ್ಯಾದಿಗಳನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ತೆಲುಗಿನಲ್ಲಿ ಕಸುರು, ಕಸಿರಿ ಎಂದರೆ ಕಹಿ ಎಂದರ್ಥ. ಕಸುರಾಗಿರುವ ಅಂದರೆ ಕಹಿ ಯಾಗಿರುವ ಮರವೇ ಕಾಸರಕನ ಮರ. ಈ ಮರದ ಎಲ್ಲಾ ಭಾಗವು ಕಹಿಯೇ. ಇದರ ಕಾಂಡದಿಂದ ನೇಗಿಲು ಮಾಡುವುದು, ಇದರ ಕೋಲಿ(ಹೂಟೆ ಕೋಲು)ನಿಂದ ಉಳುವಾಗ ಎತ್ತುಗಳಿಗೆ ಹೊಡೆಯಲು ಬಳಸುವುದು, ನಾಟಿಯ ಬಳಿಕ ಗದ್ದೆಯಲ್ಲಿ ಕಾಪು ಊರುವುದಕ್ಕೆ ಇದರ ಕವಲನ್ನು ಬಳಸುವುದು ಹೀಗೆ ಕೃಷಿ ಸಂಬಂಧಿಯಾಗಿ ವಿಭಿನ್ನ ರೀತಿಯಲ್ಲಿ ಬಳಕೆಯಾಗುವ ಮರವಿದು. ಇದರ ತುಂಡನ್ನು 'ಸುಟ್ಟಿಡಲು'(ಬರೆಹಾಕು), ಬೀಜವನ್ನು ಔಷಧಿಗೆ, ಇದರ ಎಲೆಯನ್ನು ಕ್ರಿಮಿನಾಶಕವಾಗಿ ಹೀಗೆ ಬಹುಪಯೋಗಿಯಾದ ಮರವಿದು. ಇದರಿಂದ ಅನೇಕ ಸ್ಥಳನಾಮಗಳು ಹುಟ್ಟಿಕೊಂಡಿರುವುದರಲ್ಲಿ ಅಚ್ಚರಿ ಪಡಬೇಕಾಗಿಲ್ಲ.

ಸಸಿಹಿತ್ಲು: ಸಸಿಗಳ ಹತ್ತಿಲು(ತೆಂಗಿನ ತೋಟ) ತೆಂಗಿನ ಗಿಡಗಳಿಗೆ ಸಾಮಾನ್ಯವಾಗಿ ಸಸಿ ಎಂದು ಹೇಳಲಾಗುತ್ತದೆ. ಈಗ ಅಡಿಕೆ ಗಿಡಗಳಿಗೂ ಸಸಿ ಎಂದೇ ಹೇಳಲಾಗುವುದು. ಹಿಂದೆ ಅಡಿಕೆ ತೋಟಗಳ ಕಲ್ಪನೆ ಇರಲಿಲ್ಲ. ತೆಂಗಿನ ಸಸಿಗಳನ್ನು ನೆಟ್ಟ ಹಿತ್ತಿಲುಗಳನ್ನು ಸಸಿಹಿತ್ಲು ಎಂದು ಹೇಳಲಾಗುತ್ತಿತ್ತು. ತೋಟ ಎಂದು ತೆಂಗಿನ ಸಸಿಗಳ ಸಂದರ್ಭದಲ್ಲಿ ಬಳಸುತ್ತಿರಲಿಲ್ಲ. ನೆಲ್ಲಿ ಕಟ್ಟೆ, ನೆಲ್ಲಿತಟ್ಟು, ಮಾವಿನ ಕಟ್ಟೆ, ಗೋಳಿಯಡಿ(ಗೋಳಿಮರ ಎಂದರೆ ಆಲದ ಮರ), ಹುಳಿಯಡಿ, ಬಾಳೆಗದ್ದೆ, ಮಲ್ಲಿಗೆ ಮಾಡು ಈ ಎಲ್ಲಾ ಸಮಸ್ತ ಪದಗಳು ಸಸ್ಯವಾಚಕಗಳಾಗಿವೆ. ಇವುಗಳಲ್ಲಿ ಪೂರ್ವಪದ ನಿರ್ದಿಷ್ಟ ಸಸ್ಯಗಳನ್ನು ಹೇಳುತ್ತಿದ್ದು ಉತ್ತರ ಪದವು ಆ ಸ್ಥಳವು ಸಸ್ಯಕ್ಕೆ ಸಂಬಂಧಿಸಿದಂತೆ ಭೌಗೋಳಿಕ ವಿವರವನ್ನು ಹೇಳುತ್ತದೆ.

ಅತ್ತಿತ್ತ ಮೂಲೆ: ಅತ್ತಿ ಹಾಗೂ ಇತ್ತಿ ಮರಗಳು ಇರುವ ಮೂಲೆಯನ್ನು ಹೀಗೆ ಕರೆದಿರಬಹುದು.

ಆಲೂರು : ಆಲದ ಮರ ಇರುವ ಊರು

ನೆಲ್ಲಿಕಟ್ಟೆ : ನೆಲ್ಲಿ ಮರಕ್ಕೆ ಕಟ್ಟಿದ ಕಟ್ಟೆ

ನೆಲ್ಲಿ ತಟ್ಟು : ನೆಲ್ಲಿ ಮರವಿರುವ ಸಮತಟ್ಟು ಪ್ರದೇಶ

ಗೋಳಿಯಡಿ : ಗೋಳಿ(ಆಲ) ಮರದ ಅಡಿ, ಗೋಳಿಮರ ಆವರಿಸಿರುವ ಪ್ರದೇಶ

ತೌಡುಗೋಳಿ : ತೌಡು ಬಣ್ಣದ ಹಣ್ಣು ಬಿಡುವ ಗೋಳಿ ಮರ ಇರುವ ಊರು

ಮಲ್ಲಿಗೆ ಮಾಡು : ಮಾಡಿಗೆ ಮಲ್ಲಿಗೆಯ ಬಳ್ಳಿ ಹಬ್ಬಿಸಿದ ಮನೆಯಿರುವ ಊರು ಎಂಬರ್ಥದಲ್ಲಿರಬಹುದು.

ಬಾಳೆಗದ್ದೆ : ಒಂದು ಕಾಲದಲ್ಲಿ ಬತ್ತದ ಬೆಳೆ ಮಾಡುತ್ತಿದ್ದು ಉಳಿಕ ಬಾಳೆ ನೆಟ್ಟಿರುವ ಗದ್ದೆ

ಸೀತಂಗೋಳಿ: ಸತ್ತ ಗೋಳಿಮರ ಇರುವ ಊರು ಎಂಬುದರಿಂದ ಬಂದಿರುವ ಸಾಧ್ಯತೆಯಿದೆ.

ಪನಸಮೂಲೆ ಹಲಸಿನ ಮರಗಳೇ ಇರುವ ಜಾಗವನ್ನು ಈ ಹೆಸರಿನಿಂದ ಕರೆಯಲಾಗಿದೆ.

ಹೀಗೆ ಪ್ರತಿಯೊಂದು ಕನ್ನಡದ ಸ್ಥಳನಾಮ ಪದಗಳಾಗಿವೆ. ಯಾವುದೋ ಒಂದು ಕಾಲದಲ್ಲಿ ಸಸ್ಯ ಸಂಬಂಧಿ ಪ್ರದೇಶಗಳಾಗಿದ್ದ ಕಾರಣಕ್ಕೆ ಸ್ಥಳನಾಮಗಳು ರೂಪು ಪಡೆದಿರುತ್ತವೆ. ಕಾಲಾನಂತರದಲ್ಲಿ ಸಸ್ಯಗಳು ಇಲ್ಲವಾದರೂ ಹೆಸರಿನ ಮೂಲಕ ಅವು ಉಳಿದುಕೊಂಡಿವೆ.

ಭೌಗೋಳಿಕ ಸ್ಥಳನಾಮಗಳು

ಜೇಡಿಗುಳಿ: ಜೇಡಿಮಣ್ಣಿರುವ ಹೊಂಡ ಎಂಬರ್ಥದಲ್ಲಿ ಜೇಡಿಗುಳಿ ಎಂಬ ಹೆಸರು ಬಂದಿದೆ. ಇದು ಸ್ಥಳೀಯವಾಗಿ ಭೂಮಿಯ ಮಣ್ಣಿನ ಸ್ವರೂಪವನ್ನು ತಿಳಿಸುತ್ತದೆ.

ಜೋಡುಕಲ್ಲು: ಈ ಪ್ರದೇಶದಲ್ಲಿ ಬೃಹತ್ತಾದ ಎರಡು ಬಂಡೆ ಕಲ್ಲುಗಳು ಜೊತೆಯಾಗಿದ್ದುವಂತೆ. ಇದರಿಂದಾಗಿ ಈ ಊರಿಗೆ ಜೋಡುಕಲ್ಲು ಎಂದು ಹೆಸರಾಯಿತು.

ಗಾಳಿಮುಖ: ಗಾಳಿಗೋಪುರ. ಗಾಳಿ ಚೆನ್ನಾಗಿ ಬೀಸುವ ದಕ್ಷಿಣ ದಿಕ್ಕಿಗೆ ತಗ್ಗು ಇರುವ ಎತ್ತರ ಪ್ರದೇಶವೊಂದನ್ನು ಈ ಹೆಸರಿನಿಂದ ಕರೆಯಲಾಗುತ್ತದೆ. ಗಾಳಿಗೆ ಮುಖವೊಡ್ಡಿ ನಿಂತ ಭೂ ಪ್ರದೇಶ ಎಂಬರ್ಥದಲ್ಲಿ ಈ ಹೆಸರು ಬಂದಿರಬಹುದು. ಗಾಳಿ ಚೆನ್ನಾಗಿ ಬೀಸುವ ಗೋಪುರದಂತಹ ಎತ್ತರವಾದ ಗುಡ್ಡ ಪ್ರದೇಶವನ್ನು ಈ ಹೆಸರಿನಿಂದ ಕರೆಯಲಾಗಿದೆ. ಭೌಗೋಳಿಕದ ಹಿನ್ನೆಲೆಯಿಂದ ಇಂತಹ ಹೆಸರುಗಳನ್ನು ಸ್ಥಳಗಳಿಗೆ ಇರಿಸಿದಂತೆ ತೋರುತ್ತದೆ.

ಸೂರಂಬೈಲು: ಸೂರ್ಯನ ಬಯಲು. ಸೂರಂಬೈಲು ಆಗಿರಬಹುದು. ಸೂರ್ಯನ ಬಿಸಿಲು ನೇರವಾಗಿ ಬೀಳುವ ಬಯಲು ಪ್ರದೇಶವೊಂದನ್ನು ಈ ಹೆಸರಿನಿಂದ ಕರೆಯಲಾಗಿದೆ. ಸಮತಟ್ಟಾಗಿದ್ದು ಬಂಡೆಗಳಿಂದ ತುಂಬಿದ ಈ ಪ್ರದೇಶದ ನೆಲಕ್ಕೆ ಸೂರ್ಯನ ಬಿಸಿಲು ನೇರವಾಗಿ ಬೀಳುತ್ತದೆ. ಸೂರ್ಯನ ಬಿಸಿಲನ್ನು ತಡೆಯಲು ಮರಗಿಡಗಳೂ ಬೆಳೆಯದಂತಹ ಬಂಡೆಕಲ್ಲುಗಳ ಬಯಲು ಪ್ರದೇಶವಿದು. ಈ ಹೆಸರಿನಿಂದ ಭೌಗೋಳಿಕ ಸ್ವರೂಪವನ್ನು ಅರ್ಥೈಸಬಹುದು.

ಕೋಮಣ ಗದ್ದೆ: ಕೋಮಣ ಎಂದರೆ ಲಂಗೋಟಿ ಎಂದರ್ಥ. ಹೊಳೆಯ ಬದಿಯಲ್ಲಿ ಕೋಮಣದಂತೆ ಸಪೂರವಾದ ಉದ್ದವಾದ ಗದ್ದೆಯಿರುವ ಜಾಗವನ್ನು ಈ ಹೆಸರಿನಿಂದ ಕರೆಯಲಾಗಿದೆ.

ಜಲಸಂಬಂಧಿ ಸ್ಥಳನಾಮಗಳು

ಸ್ಥಳನಾಮಗಳಲ್ಲಿ ಬಹಳ ಮುಖ್ಯವಾದ ಪಾತ್ರ ಜಲಸಂಬಂಧಿವಾಚಕಗಳದು. ಇದಕ್ಕೆ ಕಾಸರಗೋಡಿನ ಪ್ರದೇಶವೂ ಹೊರತಲ್ಲ. ಇಲ್ಲಿನ ಸಮಸ್ತ ಪದಗಳಲ್ಲಿ ಪೂರ್ವಾರ್ಧವೂ ನೀರಿನ ಇರುವಿಕೆಯ ಸ್ವಭಾವವನ್ನು ತಿಳಿಸುತ್ತದೆ. ಉತ್ತರ ಪದವು ನೀರಿನ ಸ್ವರೂಪವನ್ನು ಸೂಚಿಸುತ್ತದೆ.

ಕುಂಟಾರು: ಕುಂಟುವ ಆರು ಕುಂಟಾರು. ಕುಂಟುತ್ತಾ ಸಾಗುವ ನೀರಿನ ಹರಿವು. ಆರು ಎಂದರೆ ನೀರ ಹರಿವು ಅಥವಾ ಹೊಳೆ ಎಂಬ ಅಭಿಪ್ರಾಯವೊಂದಿದೆ. ಆದರೆ ಭೂ ಪ್ರದೇಶವನ್ನು ನೋಡಿದರೆ ಕುನ್ರ್+ಆರ್–ಕುನ್ರಾರ್–ಕುನ್ರಾರು–ಕುಂಟಾರು ಆಗಿರಬೇಕು ಎಂದು ಅನಿಸುತ್ತದೆ. ಕುನ್ರ್ ಎಂದರೆ ಗುಡ್ಡ ಎಂದರ್ಥ. ಆರು ಎಂದರೆ ನೀರ ಹರಿವು ಎಂದರ್ಥ. ಹೀಗೆ ಬೆಟ್ಟ ಗುಡ್ಡಗಳಿದ್ದು ನೀರ ಹರಿವು ಇರುವ ಪ್ರದೇಶ ಎಂಬ ಕಾರಣಕ್ಕೆ ಈ ಹೆಸರು ಬಂದಿರಬಹುದು.

ಎಡನೀರು : ನಿರ್ದಿಷ್ಟ ಪ್ರದೇಶ ಎಂದರೆ ಮುಖ್ಯ ದೇವಸ್ಥಾನದ ಎಡಗಡೆಯಿಂದ ಹರಿದು ಮುಂದೆ ಸಾಗುವ ನೀರು.

ಬಾವಿಕೆರೆ : ಬಾವಿ ಮತ್ತು ಕೆರೆ ಎರಡೂ ನೀರಿನ ಇರುವಿಕೆಯನ್ನು ತಿಳಿಸುವ ಪದಗಳು. ಆದರೆ ಇಲ್ಲಿ ಕೆರೆ ಎಂಬುದು ವಿಶಾಲ ಮತ್ತು ಹೆಚ್ಚಾಗಿರುವ ನೀರಿನ ಪ್ರಮಾಣವನ್ನು ತಿಳಿಸುತ್ತದೆ. ಬಾವಿ ಎಂಬ ವಿಶೇಷಣದ ಮೂಲಕ ಕೆರೆಯ ಆಳವನ್ನು ನಿರ್ದೇಶಿಸುತ್ತದೆ. ಅಂದರೆ ಬಾವಿಯ ಹಾಗಿರುವ ಕೆರೆ ಎಂದೇ ಅರ್ಥ.

ಪಾರೆತೋಡು : ಪಾರೆ ಎಂದರೆ ಬಂಡೆ. ತೋಡು ಎಂದರೆ ನೀರು ಹರಿಯುವ ಚಿಕ್ಕ ತೊರೆ ಅಥವಾ ಹಳ್ಳ. ಅದು ಬಂಡೆಯ ಮೇಲೆಯೇ ಹರಿಯುವುದನ್ನು ಸೂಚಿಸುತ್ತದೆ. ಆಡುನುಡಿಯಲ್ಲಿ ಪಾರೆತೋಡು ಎಂದಾಗಿದೆ. ತಳಂಗೆರೆ ಶಾಸನದ 'ಕರಿಯಕಲ್ಲ ಮೋರದಿಂ' ಎಂಬ ಕವಿಮಾತನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಹುದು.

ಪೆರ್ಲ: ಪೆರು+ಹಳ್ಳ=ಪೆರುಳ್ಳ-ಪೆರುಳ-ಪೆರುಲ-ಪೆರ್‌ಲ-ಪೆರ್ಲ ಆಗಿರಬಹುದು. ಈ ಪ್ರದೇಶದಲ್ಲಿ ಹಿಂದೆ ದೊಡ್ಡದಾದ ಹಳ್ಳವೊಂದಿದ್ದಿರಬಹುದು. ಅದರಿಂದಲೇ ಊರಿಗೆ ಪೆರ್ಲ ಎಂದು ಹೆಸರಾಗಿರಬಹುದು.

ವ್ಯಕ್ತಿ ಹಾಗೂ ಸಮುದಾಯ ಸಂಬಂಧ ಸ್ಥಳನಾಮಗಳು

ಕೆಲವೊಂದು ಹೆಸರುಗಳು ವ್ಯಕ್ತಿಯನ್ನು ಉದ್ದೇಶಿಸಿ ಮತ್ತು ಕೆಲವು ನಿರ್ದಿಷ್ಟ ಜಾತಿ ಸಮುದಾಯಗಳ ನೆಲೆಯನ್ನು ಸೂಚಿಸುತ್ತವೆ. ಇವು ಒಂದು ಪ್ರದೇಶದ ಸಾಮಾಜಿಕ ಹಾಗೂ ಸಾಂಸ್ಕೃತಿಕ ವಿವರಗಳನ್ನು ಕೊಡುತ್ತವೆ.

ಮುನಿಯಂಗಳ: ಮುನಿಗಳು ವಾಸವಿದ್ದ ಜಾಗ ಇರಬಹುದು

ಜೋಗಿ ಮೂಲೆ: ಜೋಗಿ ವ್ಯಕ್ತಿ ಅಥವಾ ಜೋಗಿ ಸಮುದಾಯದ ಜನರು ನೆಲೆಸಿದ್ದ ಜಾಗವಿರಬಹುದು. ಅಥವಾ ನಾಥಪಂಥದ ಜೋಗಿಗಳು ನೆಲೆಸಿದ ಜಾಗವನ್ನು ನೆನಪಿಸುತ್ತಿರಬಹುದು

ಸಿದ್ಧನಕೆರೆ: ಸಿದ್ಧನ ಹೆಸರಿನ ಕೆರೆ. ಈ ಕೆರೆ ಇಂದಿಗೂ ಪವಿತ್ರವಾದುದು ಎಂಬ ನಂಬಿಕೆಯಿದೆ

ಮಾಸ್ತಿಗುಂಡಿ: ಮಹಾಸತಿಯೊಬ್ಬಳು ಪ್ರಾಣತ್ಯಾಗ ಮಾಡಿದ ಗುಂಡಿ ಅಥವಾ ಹೊಂಡ

ಇಲ್ಲಿನ ಸಮಸ್ತ ಪದಗಳಲ್ಲಿ ಪೂರ್ವಪದವು ನಿರ್ದಿಷ್ಟ ವ್ಯಕ್ತಿಯನ್ನು ಹೇಳಿದರೆ ಉತ್ತರ ಪದವು ಭೌಗೋಳಿಕತೆಯನ್ನು ತಿಳಿಸುವುದರೊಡನೆ ಆ ವ್ಯಕ್ತಿಗೆ ಉತ್ತರ ಪದದ ರಚನೆಯ ಸಂಬಂಧದ ವಿವರವನ್ನು ತಿಳಿಸುತ್ತದೆ

ಕೋಟೆಕಣಿ: ಕೋಟೆಯ ಸುತ್ತಲೂ ಇರುವ ಕಣಿವೆ, ಕೋಟೆ ಸಮುದಾಯದ ಜನರು ವಾಸ ಮಾಡುವ ಕಣಿವೆಗೂ ಈ ಹೆಸರಿದೆ.

ಅಗಸರಹೊಳೆ: ಅಗಸ ಸಮುದಾಯದ ಜನರು ಬಟ್ಟೆ ತೊಳೆಯುವ ಹೊಳೆ ನಾಯರುಮೂಲೆ, ನಾಯ್ಮಾರು ಮೂಲೆ, ನಾಯ್ಮಾರ ಜಾತಿಯ ಅಥವಾ ನಾಯರ್ ಜಾತಿಯ ಜನರು ನೆಲೆಸಿರುವ ಸ್ಥಳ. ಬೋಯಿಕಾನ ಬೋಯಿ ಜನರು (ದೇವರ ಪಲ್ಲಕ್ಕಿ ಹೊರುವ ಜನರು) ನೆಲೆಸಿರುವ ಕಾಡು ಪ್ರದೇಶ ಅಥವಾ ಎತ್ತರದ ಪ್ರದೇಶ. ದಂಡಿಗೆ ಹೊರುವ ಜನರನ್ನು ಮಲೆನಾಡಿನಲ್ಲಿ ಬೋವೇರು ಎಂದು ಕರೆಯಲಾಗುತ್ತದೆ. ಹಾಗೆಯೇ ಬಂಡಿ ಹೊಡೆಯುವವರು ಎಂಬ ಅರ್ಥವೂ ಇದೆ.

ಮಾಯಿಲ ಕೋಟೆ: ಮಾಯಿಲ ಜನರ ಕೋಟೆ

ಕಲ್ಲುಕುಟ್ಟಿ ಮೂಲೆ: ಕಲ್ಲು ಕುಟಿಗರು ವಾಸ ಮಾಡುವ ಜಾಗ

ಪುಂಡೂರು: ಪುಂಡರು ಇದ್ದ ಊರು

ಮೊಗೆರು: ಮೊಗೆರು ಎಂಬ ಜನ ಸಮುದಾಯದವರು ವಾಸ ಮಾಡುವ ಜಾಗ. ಇಲ್ಲಿನ ಮೊಗೆರು ಎಂಬ ಸ್ಥಳನಾಮವು ಈ ಪ್ರದೇಶದಲ್ಲಿ ಹೆಚ್ಚಾಗಿ ಕಾಣಿಸುತ್ತದೆ. ಮೊಗೆರರು ಎಂಬ ತಳ ಸಮುದಾಯದ ಜನವಾಸವಿದ್ದ ಸ್ಥಳ ಎಂಬುದರಿಂದ ಈ ಹೆಸರು ಬಂದಿರುವ ಸಾಧ್ಯತೆಯಿದೆ. ಅಂಗಡಿ ಮೊಗರು, ಮೊಗರಾಲ್ ಪುತ್ತೂರು(ಮೊಗೆರರು ಹೊಸದಾಗಿ ವಾಸಮಾಡಲು ಆರಂಭಿಸಿದ ಹೊಸ ಊರು) ಎಂಬಿತ್ಯಾದಿಗಳಲ್ಲಿಯೂ ಮೊಗೆರು ಎಂಬ ಪದ ಬಳಕೆ ಕಾಣಿಸುತ್ತದೆ. ಮೊಗರು ಎಂಬುದಕ್ಕೆ ಸಣ್ಣ ಬೆಟ್ಟ ಅಥವಾ ಮೊರಡಿ ಎಂಬ ಅರ್ಥವೂ ಇದೆ. ಭೌಗೋಳಿಕ ವಾಚಕವಾಗಿಯೂ ಇದನ್ನು ಅರ್ಥೈಸಬಹುದು.

ಹೀಗೆ ಇಲ್ಲಿನ ಸಮಸ್ತ ಪದಗಳ ಪೂರ್ವಪದಗಳು ನಿರ್ದಿಷ್ಟವಾದ ಜನರ ಜಾತಿ, ಸ್ವಭಾವಗಳನ್ನು ತಿಳಿಸುತ್ತವೆ. ಉತ್ತರ ಪದವು ವಾಸ ಮಾಡುವ ಜಾಗದ ಭೌಗೋಳಿಕ ವಿವರವನ್ನು ನೀಡುತ್ತದೆ. ಮೂಲೆ ಎಂದರೆ ಸುತ್ತಲೂ ಮೂರು ದಿಕ್ಕುಗಳಲ್ಲಿ ಗುಡ್ಡ, ಬೆಟ್ಟಗಳಿಂದಾವೃತವಾದ ಜಾಗ ಎಂಬುದನ್ನು ತಿಳಿಸುತ್ತದೆ.

ದಿಶಾ ಸಂಬಂಧಿ ಸ್ಥಳನಾಮಗಳು

ಕೆಲವೊಂದು ಊರಿನ ಹೆಸರುಗಳು ಮುಖ್ಯ ಜನವಸತಿ ಇರುವ ನೆಲೆಯಿಂದ ನಿರ್ದಿಷ್ಟ ದಿಕ್ಕನ್ನು ಸೂಚಿಸುತ್ತದೆ. ಈ ಕೆಳಗೆ ಹೆಸರಿಸಿರುವ ಸ್ಥಳನಾಮಗಳು ಕನ್ನಡ ಸಮಸ್ತ ಪದಗಳಾಗಿದ್ದು ಪೂರ್ವಪದವು ನಿರ್ದಿಷ್ಟ ದಿಕ್ಕನ್ನು ಸೂಚಿಸುತ್ತದೆ. ಉತ್ತರ ಪದವು ಭೌಗೋಳಿಕ ಸ್ಥಿತಿಯನ್ನು ನಿರ್ದೇಶಿಸುತ್ತದೆ.

ಪಡುಮೂಲೆ : ಪಡು (ಪಶ್ಚಿಮ) ದಿಕ್ಕಿಗೆ ಇರುವ ಮೂಲೆ

ತೆಂಕಮೂಲೆ : ತೆಂಕು(ದಕ್ಷಿಣ) ದಿಕ್ಕಿಗೆ ಇರುವ ಮೂಲೆ

ಬಡಗು ಮೂಲೆ : ಬಡಗು (ಉತ್ತರ) ದಿಕ್ಕಿಗೆ ಇರುವ ಮೂಲೆ

ಎಡನಾಡು: ಎಡಗಡೆಗೆ ಇರುವ ನಾಡೊಂದನ್ನು ಸೂಚಿಸುತ್ತದೆ.

ಬಡಗುಪಾರೆ: ಬಡಗು ದಿಕ್ಕಿಗೆ ಇರುವ ಪಾರೆ (ಬಂಡೆಕಲ್ಲು)

ನಡುಬೈಲು: ನಡು ಭಾಗದಲ್ಲಿರುವ ಬಯಲು ಪ್ರದೇಶ

ಮೂಲೆ ಗದ್ದೆ: ಮೂಲೆಯಲ್ಲಿರುವ ಗದ್ದೆ

ಪ್ರಾಣಿ ಸಂಬಂಧಿ ಸ್ಥಳನಾಮಗಳು

ಸ್ಥಳನಾಮಗಳಲ್ಲಿ ಪ್ರಾಣಿ ವಾಚಕಗಳು ನಿರ್ದಿಷ್ಟವಾಗಿ ಕಾಣಿಸುತ್ತವೆ. ಅವು ಪ್ರಾಣಿಗಳ ಇರುವಿಕೆಯನ್ನು ಸೂಚಿಸುತ್ತವೆ.

ಸರ್ಪಮೂಲೆ : ಸರ್ಪಗಳಿರುವ ಮೂಲೆ

ಸರ್ಪಂಗಳ : ಸರ್ಪಗಳ ಅಂಗಳ. ಸರ್ಪಗಳು ವಿಹರಿಸುವ ಜಾಗ

ಕೋಳ್ಯೂರು : ಕೋಳಿಯೂರು

ನರಿಮೊಗರು : ನರಿಗಳು ಇರುವ ಮೊರಡಿ ಅಥವಾ ಬೆಟ್ಟ

ಕುದುರೆಕೂಡ್ಲು : ಕುದುರೆಗಳು ಕೂಡುತ್ತಿದ್ದ ಜಾಗ

ಕೋಳಿಕಾಲು : ಕೋಳಿಯ ಕಾಲಿನಂತೆ ಇರುವ ಭೂ ಪ್ರದೇಶವನ್ನು ಸೂಚಿಸುತ್ತಿರಬಹುದು.

ಆನೆಬಾಗಿಲು : ಆನೆಗಳು ಬರುವ ಬಾಗಿಲು ಎಂದರ್ಥವಿರಬಹುದು. ಅಥವಾ ನಿರ್ದಿಷ್ಟ ಜಾಗಕ್ಕೆ ಪ್ರವೇಶದ್ವಾರವಿದ್ದು ಅದನ್ನು ಮಹಾದ್ವಾರ ಎಂಬರ್ಥದಲ್ಲಿಯೂ ಆನೆಬಾಗಿಲು ಎಂಬ ಹೆಸರು ಬಂದಿರಬಹುದು. ಎತ್ತರವಾದ ಬೆಟ್ಟ ಪ್ರದೇಶಗಳ ನಡುವೆ ಬಾಗಿಲಿನಾಕಾರದ ಜಾಗಕ್ಕೆ ಈ ಹೆಸರು ಬಂದಿದೆ.

ನಾಯಿಕಾಪು : ನಾಯಿ ಕಾವಲಿರುವ ಜಾಗ.

ಇಲ್ಲಿನ ಸಮಸ್ತ ಪದಗಳಲ್ಲಿ ಪೂರ್ವಪದವು ಪ್ರಾಣಿವಾಚಕಗಳಾಗಿವೆ. ಉತ್ತರಪದ ಭೌಗೋಳಿಕ ಸ್ವರೂಪವನ್ನು ಸೂಚಿಸುತ್ತವೆ.

ದೈವಸಂಬಂಧಿ ಸ್ಥಳನಾಮಗಳು

ಸ್ಥಳನಾಮಗಳು ದೇವ ಸಂಬಂಧಿಯಾಗಿ ಹುಟ್ಟಿಕೊಳ್ಳುತ್ತವೆ. ಆಯಾ ಪ್ರದೇಶದ ಮುಖ್ಯ ದೈವ–ದೇವರುಗಳಿಂದಲೇ ಊರಿನ ಹೆಸರು ರೂಪುಗೊಳ್ಳುವುದು ಇದೆ.

ಕಾವೇರಿಕಾನ : ಕಾವೇರಿ ದೇವತೆ, ಕಾವೇರಿಯಮ್ಮ ಇರುವ ಕಾಡು

ಚಾಮುಂಡಿ ಗುಡ್ಡೆ: ಚಾಮುಂಡಿ ದೇವತೆ ಇರುವ ಗುಡ್ಡ ಪ್ರದೇಶ

ಅನಂತಪುರ : ಅನಂತ (ವಿಷ್ಣು) ಇರುವ ಪುರ

ಐತಿಹಾಸಿಕ ಸ್ಥಳನಾಮಗಳು

ಕೆಲವೊಂದು ಸ್ಥಳನಾಮಗಳಿಗೆ ಐತಿಹಾಸಿಕ ಘಟನೆಗಳೇ ಕಾರಣವಾಗಿರುತ್ತವೆ. ಇತಿಹಾಸಿಕ ಕಾಲ ಘಟ್ಟದಲ್ಲಿನ ಕೆಲವೊಂದು ಸನ್ನಿವೇಶಗಳನ್ನು ಇದರ ಮೂಲಕ ಕಂಡುಕೊಳ್ಳುವುದು ಸಾಧ್ಯವಿದೆ. ಈ ಪ್ರದೇಶದಲ್ಲಿ ಆಳರಸರು ನಿರ್ಮಿಸಿದ ಅನೇಕ ಕೋಟೆಗಳಿವೆ. ಹಾಗಾಗಿ ಆಗಲೇ ಪ್ರಚಲಿತವಿದ್ದ ಸ್ಥಳನಾಮಗಳಿಗೆ ಕೋಟೆ ಎಂಬ ಉತ್ತರಪದ ಸೇರಿ ಆ ಜಾಗವನ್ನು ಹೆಸರಿಸಲಾಗುತ್ತದೆ. ಉದಾಹರಣೆಗೆ ಮಾಯಿಲಕೋಟೆ, ಪೊಳಲಿಕೋಟೆ, ಕುಂಬಳೆ ಕೋಟೆ, ಕಾಸರಗೋಡು ಕೋಟೆ, ಚಂದ್ರಗಿರಿ ಕೋಟೆ, ಬಂದಡ್ಕ ಕೋಟೆ ಹೀಗೆ. ಇದಕ್ಕೆ ಕೋಟೆ ನಿರ್ಮಿಸಿದ ರಾಜ ಮಹಾರಾಜರುಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿರುತ್ತಾರೆ.

ಕೆಲವೊಂದು ಇತಿಹಾಸದ ಘಟನೆಗಳು ಊರಿಗೆ ಹೆಸರಿಡುವಲ್ಲಿ ಕಾರಣವಾಗುವುದನ್ನು ಕಾಣಬಹುದು.

ಕೂಡ್ಲು: ಕೂಡ್ಲು ಎಂದರೆ ಕೂಡಿದ ಸ್ಥಳ. ಕುಂಬಳೆಸೀಮೆಯ ಪ್ರಸಿದ್ಧ ಅರಸನಾದ ಜಯಸಿಂಹನ ನೇತೃತ್ವದಲ್ಲಿ ಪಂಡಿತರು, ವಿದ್ವಾಂಸರು ಒಂದುಗೂಡಿ ಧರ್ಮತತ್ವಗಳನ್ನು ಚರ್ಚೆ ಮಾಡಿದ ಸ್ಥಳ. ಶೈವ ಮತ್ತು ಮಾಧ್ವ ಮತಗಳ ನಡುವಿನ ಸಂಘರ್ಷವನ್ನು ಕೊನೆಗೊಳಿಸಿ ಸ್ನೇಹದಿಂದ ಒಂದು ಗೂಡಿದ ಸ್ಥಳ. ಇದರ ಸಂಕೇತವಾಗಿ ವಿಜಯಸ್ತಂಭವನ್ನು ಈ ಜಾಗದಲ್ಲಿ ನೆಡಲಾಗಿದೆ. ಇಂದಿಗೂ ಆ ಸ್ಥಳದಲ್ಲಿ ಕಬ್ಬಿಣದ ಕೊಂಡಿಯ ಭಗ್ನಾವಶೇಷ ಮಾತ್ರವಿದೆ. ಶೈವ ವೈಷ್ಣವ ಸಂಪ್ರದಾಯದ ಸಮ್ಮಿಳನದಿಂದ ಉಂಟಾದ ಭಾಗವತ ಸಂಪ್ರದಾಯಕ್ಕೆ ನಾಂದಿ ಹಾಡಿದ ನೆಲ ಎಂಬ ಐತಿಹಾಸಿಕ ಘಟನೆಯ ಮೂಲಕ ಈ ಊರಿಗೆ ಕೂಡಲು ಎಂದು ಹೆಸರಾಯಿತು ಎಂಬುದು ಪ್ರತೀತಿ. ನದಿಯೊಂದು ಸಮುದ್ರಕ್ಕೆ ಸೇರುವ ಕಾರಣಕ್ಕೆ ಈ ಜಾಗಕ್ಕೆ ಕೂಡಲು ಎಂದು ಹೆಸರಾಯಿತು ಎಂಬುದೊಂದು ಅಭಿಪ್ರಾಯವೂ ಇದೆ.

ಮಠದ ಓಣಿ: ಮಠವಿರುವ ಕಣಿವೆ ಎಂಬರ್ಥದಲ್ಲಿ ಈ ಹೆಸರು ಬಂದಿರಬಹುದು. ಯಾವುದೋ ಒಂದು ಶೈವ ಮಠ ಪ್ರಾಚೀನ ಕಾಲದಲ್ಲಿ ಈ ಪ್ರದೇಶದಲ್ಲಿತ್ತು ಎಂಬುದನ್ನು ಹಿರಿಯರು ನೆನಪಿನಿಂದ ಹೇಳುತ್ತಾರೆ.

ಮಲ್ಲಾವರ: ಮಲ್ಲವರು(ಮಾಳವರು) ನೆಲೆಸಿದ್ದ ಜಾಗವೇ ಇರಬಹುದು. ಶೈವ ಮಲ್ಲವರು ಕಾಸರಗೋಡು ಪ್ರದೇಶಕ್ಕೆ ಇಕ್ಕೇರಿ ನಾಯಕರ ಕಾಲದಲ್ಲಿ ಬಂದಿದ್ದರು ಎಂದು ಇತಿಹಾಸದಿಂದ ತಿಳಿದುಬರುತ್ತದೆ.

ಮಲ್ಲ: ಇಕ್ಕೇರಿ ನಾಯಕರ ಸೈನ್ಯದಲ್ಲಿದ್ದ ಮಲ್ಲಯುದ್ಧ ಪ್ರವೀಣರು ನೆಲೆಸಿದ ಸ್ಥಳವಾದ್ದರಿಂದ ಇದಕ್ಕೆ ಮಲ್ಲ ಎಂಬ ಹೆಸರು ಬಂದಿರಬೇಕು. ಶಿವಮೊಗ್ಗ ಮೂಲದ ಮಲ್ಲವರ ಕೆಲವೊಂದು ಮನೆಗಳು ಈ ಪ್ರದೇಶದಲ್ಲಿ ಹಿಂದೆ ಇದ್ದವು ಈ ಜನರನ್ನು ಮುಟುಕರು ಎಂಬ ಹೆಸರಿನಿಂದಲೂ ಕರೆಯುತ್ತಿದ್ದರಂತೆ. ಈಗ ಮಲ್ಲರ ಮನೆಗಳು ಈ ಪ್ರದೇಶದಲ್ಲಿ ಒಂದೆರಡು ಮಾತ್ರ ಇವೆ.

ಸಡಂಗರಬಳ್ಳಿ, ಚಡಂಗ್ರಬಳ್ಳಿ: ಸಡಂಗರಬಳ್ಳಿ–ಚಡಗರ+ಉಂಬಳಿ–ಚಡಗರುಂಬಳಿ ಚಡಂಗರಬಳ್ಳಿ–ಸಡಂಗರಬಳ್ಳಿ. 'ಚಡಗ' ಎಂಬ ಬ್ರಾಹ್ಮಣ ಮನೆತನಕ್ಕೆ ಉಂಬಳಿಯಾಗಿ ನೀಡಿದ ಜಾಗ ಎಂಬುದರಿಂದ ಈ ಹೆಸರು ಹುಟ್ಟಿಕೊಂಡಿದೆ. ಕಾಲಕ್ರಮದಲ್ಲಿ ಚ–ಸ ಬದಲಾವಣೆಯಾಗಿರುವುದನ್ನು ಗಮನಿಸಬಹುದು.

ಐತಿಹ್ಯದ ಹಿನ್ನೆಲೆಯ ಸ್ಥಳನಾಮಗಳು

ಕೆಲವೊಂದು ಸ್ಥಳಗಳ ಹೆಸರುಗಳಿಗೆ ಐತಿಹ್ಯಗಳೇ ಕಾರಣವಾಗಿರಬಹುದು. ಯಾವುದೇ ದಂತಕತೆಗಳು ಇಂತಹ ಸ್ಥಳನಾಮಗಳ ಹಿಂದೆ ಪರಂಪರಾಗತವಾಗಿ ಉಳಿದುಕೊಂಡು ಬಂದಿರುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಇರಬಹುದಾದ ಭೌಗೋಳಿಕ ಕುರುಹುಗಳನ್ನೇ ಆಧಾರವಾಗಿಟ್ಟು ಐತಿಹ್ಯಗಳು ಪ್ರಚಲಿತದಲ್ಲಿರುತ್ತವೆ.

ಚಂದ್ರಬಿದ್ದಪಾರೆ: ಇದಕ್ಕೆ ಚಂದ್ರಂಪಾರ, ಚಂದ್ರಪಾರೆ ಎಂಬ ಹೆಸರುಗಳು ಈಗ ಪ್ರಚಲಿತದಲ್ಲಿವೆ. ಈ ಪ್ರದೇಶದಲ್ಲಿ ಒಂದು ಬಯಲು ಬಂಡೆಯಲ್ಲಿ ಅರ್ಧಚಂದ್ರಾಕೃತಿಯ ಗುಳಿಯೊಂದಿದೆ. ಪಕ್ಕದಲ್ಲಿಯೇ ಎರಡು ಬೇರೆ ಗುಳಿಗಳೂ ಇವೆ. ಈ ಕುರುಹುಗಳ ಕಾರಣಕ್ಕೆ ಚಂದ್ರಬಿದ್ದಪಾರೆ ಎಂಬ ಹೆಸರು ಈ ಊರಿಗೆ ಬಂದಿದೆಯಂತೆ.

ಐತಿಹ್ಯದ ಪ್ರಕಾರ ಹಿಂದೊಮ್ಮೆ ಹೊಲತಿಯೊಬ್ಬಳು ಬ್ರಾಹ್ಮಣರ ಮನೆಗೆ ಕೂಲಿ ಕೆಲಸಕ್ಕೆ ಹೋಗಿ ಸಂಜೆ ಹಿಂತಿರುಗಿ ಮನೆಗೆ ಮರುಳುವ ದಾರಿಯಲ್ಲಿ ಚಂದ್ರಬಿದ್ದಿದ್ದನ್ನು ಕಂಡಳಂತೆ. ಆಕಾಶದ ಚಂದ್ರ ನೆಲದಲ್ಲಿ ಬಿದ್ದಿರುವುದನ್ನು ಕಂಡು ಆಕೆ ಕನಿಕರಗೊಂಡಳು. ಅವನನ್ನು ಎತ್ತಿಕೊಳ್ಳಲು ಮನ ಮಾಡಿದಳಂತೆ. ಅದಕ್ಕಾಗಿ ಆಕೆ ಮೊಣಕಾಲೂರಿ ಕುಳಿತು ತಲೆಗೆ ಹಾಕಿಕೊಂಡಿದ್ದ ಮೊಟ್ಟಾಳೆ(ಹಾಳೆ ಟೋಪಿ)ಯನ್ನು ತೆಗೆದು ನೆಲದಲ್ಲಿ ಇಟ್ಟಳಂತೆ. ಚಂದ್ರನನ್ನು ಎರಡೂ ಕೈಗಳಿಂದ ಬಾಚಿ ಮೊಟ್ಟಾಳೆಯಲ್ಲಿ ತುಂಬಿಸಲು ಯತ್ನಿಸಿದಳಂತೆ. ಆಗ ಆಕೆ ಮಾಯವಾದಳು ಎಂಬುದೇ ಐತಿಹ್ಯ. ಆಕೆ ಎರಡು ಮೊಣಕಾಲುಗಳನ್ನು ಊರಿದ ಜಾಗ ಹಾಗೂ ಮೊಟ್ಟಾಳೆಯನ್ನು ನೆಲದ ಮೇಲೆ ಇರಿಸಿದ ಜಾಗ ಹಾಗೂ ಚಂದ್ರ ಬಿದ್ದಿದ್ದ ಜಾಗ ಎಲ್ಲವೂ ಬಂಡೆಯ ಮೇಲೆ ಗುಳಿಗಳ ರೂಪದಲ್ಲಿ ಗುರುತನ್ನು ಉಳಿಸಿವೆ. ಐತಿಹ್ಯದ ಪಾಠಾಂತರವೂ ಒಂದಿದೆ. ಬ್ರಾಹ್ಮಣರ ಮನೆಗೆ ಬತ್ತ ಕುಟ್ಟಲು ಹೋಗಿ ಮರುಳುತ್ತಿದ್ದ ಹೊಲತಿಯ ಮೊಟ್ಟಾಳೆಯಲ್ಲಿ ಕೂಲಿಯಾಗಿ ಸಿಕ್ಕಿದ ಕಡಿಯಕ್ಕಿಯೂ

ಇದ್ದಿತ್ತಂತೆ. ಅವಳದನ್ನು ಅಲ್ಲಿಯೇ ಚೆಲ್ಲಿ ಮೊಟ್ಟಾಳೆಯಲ್ಲಿ ಚಂದ್ರನನ್ನು ತುಂಬಿಕೊಂಡು ಒಯ್ಯಲು ಪ್ರಯತ್ನಿಸಿದಳಂತೆ ಪಕ್ಕದಲ್ಲಿಯೇ ಅಕ್ಕಿ ಚೆಲ್ಲಿ ಬಿದ್ದಂತಹ ಪುಟ್ಟ ಗುಳಿಗಳೂ ಇರುವುದನ್ನ ಗಮನಿಸಿ ಈ ಪಾಠಾಂತರ ಹುಟ್ಟಿಕೊಂಡಿರಬಹುದು.

ಇಲ್ಲಿ ಭೌಗೋಳಿಕವಾಗಿ ಇರುವ ಕುರುಹುಗಳು ಮಾನವ ನಿರ್ಮಿತವೇ ಆಗಿರಬಹುದು. ಆದರೆ ಅವುಗಳು ಕೇವಲ ಐತಿಹ್ಯಗಳೆಂದು ಸಾರಾಸಗಟಾಗಿ ನಂಬಿ ಬಿಡುವಂತಿಲ್ಲ. ಅದಕ್ಕೂ ಆಚೆಗೆ ಹೊಲತಿ ಹೆಣ್ಣು ಮಗಳೊಬ್ಬಳು ಬ್ರಾಹ್ಮಣರ ಮನೆಗೆ ಕೆಲಸಕ್ಕೆ ಹೋಗಿ ಮರಳಿ ಮನೆ ಸೇರದೆ ಕಾಣೆಯಾದಳು ಎಂಬ ವಾಸ್ತವವನ್ನು ಜನರು ಐತಿಹ್ಯ ರೂಪದಲ್ಲಿ ದಾಖಲಿಸಿರಬಹುದು.

ದುಡಿಯುವ ವರ್ಗದ ಹಾಗೂ ಯಜಮಾನ್ಯ ವರ್ಗದ ನಿರ್ದಿಷ್ಟ ಜಾತಿಯನ್ನು ಇದು ಖಚಿತ ಪಡಿಸುವುದರಿಂದ ನಾಡಿನ ಸಾಮಾಜಿಕ ವಿವರಗಳನ್ನು ತಿಳಿದುಕೊಳ್ಳಬಹುದು. ಹೊಲತಿ ನೆಲದಲ್ಲಿ ಬಿದ್ದ ಚಂದ್ರನನ್ನು ರಕ್ಷಿಸುವ ಪರೋಪಕಾರ ಸ್ವಭಾವವನ್ನು ಕಾಣಬಹುದು. ಪಾಠಾಂತರದಲ್ಲಿ ಹೇಳುವಂತೆ ಕೂಲಿಯಾಗಿ ದೊರೆತ ರಾತ್ರಿಯೂಟದ ಕಾಳನ್ನು ಚೆಲ್ಲಿ ಬಿದ್ದವನನ್ನು ಕಾಪಾಡುವ ಹೊಲತಿಯ ಉದಾತ್ತ ಭಾವನೆಯಲ್ಲಿ ನಾಡಿನ ಸಾಂಸ್ಕೃತಿಕ ಹಿರಿಮೆಯನ್ನು ಪ್ರಕಟಿಸುತ್ತಿರಬಹುದು.

ಮದೂರು: ಮದರು ಎಂಬ ಹೊಲತಿಗೆ ಕಾಡಿನಲ್ಲಿ ಸೊಪ್ಪು ಕಡಿಯುವಾಗ ಕಲ್ಲೊಂದಕ್ಕೆ ಕತ್ತಿತಾಗಿ ರಕ್ತ ಚಿಮ್ಮಿತಂತೆ. ಅದನ್ನು ಗಮನಿಸಿದ ಜನರೆಲ್ಲ ಬಂದು ನೋಡಿದರೆ ಅದೊಂದು ವಿಗ್ರಹ ವಾಗಿತ್ತಂತೆ. ಅದನ್ನು ಅಲ್ಲಿಯೇ ಪ್ರತಿಷ್ಠಾಪಿಸಿ ದೇವಾಲಯ ಕಟ್ಟಿಸಲಾಯಿತು ಎಂಬುದು ಐತಿಹ್ಯ. ಮದರು ಎಂಬ ಹೆಸರಿನ ಹೊಲತಿಗೆ ಸಿಕ್ಕಿದ ದೇವರು ನೆಲೆಗೊಂಡ ಊರು ಎಂಬ ಕಾರಣಕ್ಕೆ ಮದೂರು ಎಂದು ಈ ಊರಿಗೆ ಹೆಸರಾಯಿತಂತೆ. ಈ ನೆಲದ ಮೂಲ ನಿವಾಸಿಗಳ ಬಗೆಗೆ ಈ ಐತಿಹ್ಯದಲ್ಲಿ ಮಾಹಿತಿ ಇದೆ.

ಉರುಡೂರು: ಉರುಡಿದ(ಉರುಳಿದ) ಊರು. ಕಿರಾತಾರ್ಜುನೀಯ ಕತೆಯಲ್ಲಿ ಶಿವನ ಬಾಣತಾಗಿದ ಹಂದಿ ಉರುಳುತ್ತಾ ಸಾಗಿದ ಊರು ಎಂಬುದರಿಂದ ಉರುಳಿದ ಊರು ಎಂಬರ್ಥದಲ್ಲಿ ಉರುಡೂರು ಎಂಬ ಹೆಸರು ಬಂದಿದೆಯಂತೆ. (ಕಾಸರಗೋಡಿನ ಪ್ರದೇಶದಲ್ಲಿ ಉರುಳಾಡು ಎಂಬುದನ್ನು ಉರುಡಾಡು ಎಂದೇ ಬಳಸುತ್ತಾರೆ). ಪಾಶುಪತಾಸ್ತ್ರಕ್ಕಾಗಿ ಅರ್ಜುನ ತಪಸ್ಸು ಮಾಡಿದ ಇಂದ್ರಕೀಲಕ ಕತೆಯನ್ನು ನೆನಪಿಸುವ ಐತಿಹ್ಯಗಳೂ ಈ ಊರಿನ ಸುತ್ತ ಮುತ್ತಲ ಪ್ರದೇಶಗಳಿಗೆ ಇದೆ. ಭೌಗೋಳಿಕವಾಗಿ ಈ ಊರು ಇಳಿಜಾರು ಪ್ರದೇಶವಾಗಿದ್ದು ಉರುಳುವುದಕ್ಕೆ ಅನುಕೂಲವಾಗುವಂತಿದೆ.

ಪಾಂಡವರ ಕೆರೆ: ದೇವರ ಮೆಟ್ಟು ಪ್ರದೇಶದ ಊರುಗಳ ಹಿನ್ನೆಲೆಯಲ್ಲಿಯೂ ಐತಿಹ್ಯಗಳಿವೆ.

ಹೀಗೆ ಐತಿಹ್ಯಗಳ ಆಧಾರದಲ್ಲಿ ಆಯಾ ಊರುಗಳನ್ನು ಹೆಸರಿಸುವ ಸಂಪ್ರದಾಯ ಎಲ್ಲೆಡೆ ಇರುವಂತೆ ಈ ಪ್ರದೇಶದ ಕನ್ನಡಿಗರಲ್ಲಿಯೂ ಇದೆ.

ಇತರೇ ಸ್ಥಳನಾಮಗಳು

ಕೆಲವೊಂದು ಸ್ಥಳನಾಮಗಳು ನಿರ್ದಿಷ್ಟವಾಗಿ ಪ್ರಕೃತಿವಾಚಕಗಳಲ್ಲ. ಸಮಸ್ತ ಪದಗಳಲ್ಲಿ ಎರಡೂ ಪದಗಳೂ ಪ್ರಾಮುಖ್ಯವಾಗಿದ್ದು ಅವು ಮನುಷ್ಯ ಪ್ರಯತ್ನದ ಪ್ರತೀಕವಾಗಿ ರೂಪು ಪಡೆದಿರುವುದನ್ನು ಕಾಣಬಹುದು.

ಹೊಸಹಿತ್ಲು ಮನುಷ್ಯ ಪ್ರಯತ್ನದಿಂದ ಹೊಸದಾಗ ರೂಪಿಸಿದ ಹಿತ್ತಲು ಅಥವಾ ತೋಟವನ್ನು ಸೂಚಿಸುತ್ತದೆ

ಹೊಸಂಗಡಿ : ಹೊಸತಾಗಿ ನಿರ್ಮಿಸಿದ ಅಂಗಡಿ.

ಹೊಸಬೆಟ್ಟು : ಬೆಟ್ಟದಲ್ಲಿ ಹೊಸತಾಗಿ ನಿರ್ಮಿಸಿದ ಅಥವಾ ವಾಸ ಯೋಗ್ಯವಾಗಿ ಮಾಡಿದ ಜಾಗವನ್ನು ಹೀಗೆ ಕರೆದಿರಬಹುದು.

ಹೊಸದುರ್ಗ: ಹೊಸದಾಗಿ ನಿರ್ಮಿಸಿದ ಕೋಟೆ.

ಹೊಸಮೂಲೆ: ಹೊಸದಾಗಿ ನಿರ್ಮಿಸಿದ ಮೂಲೆ ಅಥವಾ ವಾಸ ಮಾಡಲು ಯೋಗ್ಯವಾಗಿ ಮಾಡಿದ ಮೂಲೆ.

ಇಲ್ಲೆಲ್ಲ ಪೂರ್ವಪದಗಳು ಹೊಸತು ಎಂಬ ವಿಶೇಷಣದಿಂದ ಪೂರಕವಾಗಿವೆ. ಹಾಗಾಗಿ ಇಲ್ಲಿ ಬರುವ ಉತ್ತರಪದದ ಅರ್ಥಗಳಲ್ಲಿ ಈಗಾಗಲೇ ಅಸ್ಥಿತ್ವದಲ್ಲಿರುವ ಅಂಗಡಿ, ಕೋಟೆ, ತೋಟ, ಮೂಲೆ, ಬೆಟ್ಟ ಇತ್ಯಾದಿಗಳಿಗೆ ಹೊರತಾಗಿ ಇನ್ನೊಂದನ್ನು ಹೊಸದಾಗಿ ನಿರ್ಮಿಸಿದರೆಂಬ ಸ್ಪಷ್ಟ ಸೂಚನೆ ಈ ಸಮಸ್ತ ಪದಗಳಲ್ಲಿವೆ.

ಕೆಲವೊಂದು ಸಮಸ್ತ ಪದಗಳಲ್ಲಿ ಎರಡೂ ಪದಗಳು ಪ್ರಮುಖ ಅರ್ಥದಲ್ಲಿ ಮನುಷ್ಯ ಪ್ರಯತ್ನದ ಭಾಗವಾಗಿ ರೂಪು ಪಡೆದಿರುವುದನ್ನು ಕಾಣಬಹುದು.

ಲಾಟಾನು ಕಂಬ : ಲಾಟಾನು ಇರುವ ಕಂಬ. ಲಾಟಾನು ಹಾಗೂ ಕಂಬ ಎರಡೂ ಮನುಷ್ಯ ನಿರ್ಮಿತ. ದಾರಿಹೋಕರಿಗೆ ಗುರುತಿಗಾಗಿ ಕಂಬವೊಂದಕ್ಕೆ ಲಾಟಾನು ಕಟ್ಟಿದ ವ್ಯವಸ್ಥೆ ಮಾಡಿದ್ದನ್ನು ಇದು ನೆನಪಿಸುತ್ತದೆ.

ಕಲ್ಲಕಟ್ಟ : ಕಲ್ಲುಗಳಿಂದ ಕಟ್ಟಿದ ಕಟ್ಟ. ಅಂದರೆ ಚಿಕ್ಕ ಆಣೆಕಟ್ಟು ಎಂದರ್ಥ

ಕೋಟೆ ಬಾಗಿಲು : ಕೋಟೆ ಮತ್ತು ಬಾಗಿಲು. ಕೋಟೆಯ ಬಾಗಿಲಿರುವ ಪ್ರದೇಶ.

ಧರ್ಮಕಟ್ಟೆ : ಉಚಿತವಾಗಿ ವಸ್ತುಗಳನ್ನು ನೀಡಲು ಕಟ್ಟಿದ ಕಟ್ಟೆ ಎಂಬರ್ಥವಿರಬಹುದು. ಧರ್ಮ ಎಂದರೆ ಉಚಿತ ಎಂದರ್ಥ. ಹಿಂದೆ ಈ ಪ್ರದೇಶದಲ್ಲಿ ದಾರಿಹೋಕರಿಗಾಗಿ ನೀರಿನ ಅರವಟ್ಟಿಗೆಗಳಿದ್ದುವಂತೆ. ನೀರಿನ ಅರವಟ್ಟಿಗೆಗಳಲ್ಲಿ ಬೆಲ್ಲ, ನೀರು ಮತ್ತೆ ಕೆಲವೊಂದೆಡೆ ಮಜ್ಜಿಗೆ ನೀರನ್ನು ದಾರಿಹೋಕರಿಗೆ ಉಚಿತವಾಗಿ ಕೊಡಲು ದಾನಿಗಳು ಧರ್ಮಕಟ್ಟೆಗಳನ್ನು ನಿರ್ಮಿಸಿ ವ್ಯವಸ್ಥೆ ಮಾಡಿರುತ್ತಿದ್ದರು. ಈ ಹಿನ್ನೆಲೆಯಲ್ಲಿ ಕಾಸರಗೋಡು ಪ್ರದೇಶದಲ್ಲಿ ರೂಪಿಸಿದ ಅನೇಕ ಧರ್ಮಕಟ್ಟೆಗಳು ಇತ್ತೀಚಿನವರೆಗೂ ಇದ್ದವು.

ಗದ್ದೆ ಮೂಲೆ : ಗದ್ದೆಗಾಗಿ ಮಾನವ ಶ್ರಮಪಟ್ಟು ನಿರ್ಮಿಸಿದ ಮೂಲೆ.

ಮೂಲೆ ಗದ್ದೆ : ಮೂಲೆಯಲ್ಲಿರುವ ಗದ್ದೆ ಎಂದರ್ಥ. ಕಾಸರಗೋಡು ಪ್ರದೇಶದಲ್ಲಿರುವ ಇಕ್ಕೇರಿ, ಹೊಸದುರ್ಗ, ಮಂಜೇಶ್ವರ, ಪೊಳಲಿ, ಪುತ್ತೂರು, ನಾಟೆಕಲ್ಲು, ಹಳೆಮನೆ, ಆಲೂರು ಮೊದಲಾದ ಹೆಸರುಗಳು ಕರ್ನಾಟಕದ ಪ್ರದೇಶದಲ್ಲಿಯೂ ಇವೆ.

ಉಪ್ಪಳ : ಉಪ್ಪಿನಹಳ್ಳ

ಕಾಪುಮೂಲೆ : ಕಾಯಲು ಕುಳಿತುಕೊಳ್ಳುವ ಮೂಲೆ

ಅಬ್ಬಿಮೂಲೆ : ಅಬ್ಬಿ (ನೀರಿನ ಪಾತ) ಇರುವ ಮೂಲೆ

ಹೀಗೆ ಅನೇಕ ಕನ್ನಡ ಸ್ಥಳನಾಮಗಳು ಈ ಪ್ರದೇಶದ ಸಂಸ್ಕೃತಿ ಹಾಗೂ ಇತಿಹಾಸವನ್ನು ಪುನರ್‌ರಚಿಸಲು ನೆರವಾಗಬಲ್ಲವು. ಆದರೆ ಇಲ್ಲಿ ವಿವರಿಸಿದ ಸ್ಥಳನಾಮಗಳ ಬಗೆಗಿನ ಮಾಹಿತಿಗಳು ಹೀಗೆಯೇ ಆಗಿರಬೇಕಾಗಿಲ್ಲ. ಪ್ರತಿಯೊಂದು ವಿವರಣೆಗಳೂ ಈ ಸ್ಥಳನಾಮಗಳಿಗೆ ಹೊಂದುತ್ತವೆ. ಜನ ಊಹಿಸಿದ ಹಾಗೂ ಪದವ್ಯುತ್ಪತ್ತಿಯ ನೆಲೆಯಿಂದ ಇವುಗಳನ್ನು ಪುನರ್ ರಚಿಸಲಾಗಿದೆ. ಇಲ್ಲಿನ ವಿವರಗನ್ನು ಮೀರಿ ಹೊಸ ಸಾಧ್ಯತೆಗಳಿಗೂ ಅವಕಾಶವಿದೆ. ಇಲ್ಲಿನ ವಿವರಗಳೇ ಅಂತಿಮ ಎಂಬ ನಿಲುವಿನಿಂದ ಇವುಗಳನ್ನು

ಉಲ್ಲೇಖಿಸಲಿಲ್ಲ. ಆದರೆ ಇವು ಒಂದು ಸಾಧ್ಯತೆಯನ್ನು ಮಾತ್ರ ಮುಂದಿಟ್ಟಿವೆ. ಹಾಗೆಯೇ ಇಲ್ಲಿ ಆಯ್ದ ಕೆಲವೊಂದು ಪದಗಳನ್ನು ಮಾತ್ರ ಗಮನದಲ್ಲಿಟ್ಟುಕೊಂಡು ಸ್ಥಳನಾಮಗಳನ್ನು ವರ್ಗೀಕರಿಸಿದೆ. ಈ ವರ್ಗೀಕರಣಕ್ಕೆ ಹೊರತಾದ ಸ್ಥಳನಾಮಗಳೂ ಸಿಗಬಹುದು. ಕಾಸರಗೋಡಿನಲ್ಲಿ ಲಭ್ಯವಿರುವ ಎಲ್ಲಾ ಕನ್ನಡ ಸ್ಥಳನಾಮಗಳನ್ನು ಇಲ್ಲಿ ಉಲ್ಲೇಖಿಸಿಲ್ಲ. ಅಧ್ಯಯನದ ಅನುಕೂಲಕ್ಕೆ ಅನುಗುಣವಾಗಿ ಸ್ಥಳನಾಮಗಳನ್ನು ಆಯ್ದುಕೊಳ್ಳಲಾಗಿದೆ. ಇವು ಈ ನಾಡಿನ ಭೌಗೋಳಿಕ ವಿವರಗಳನ್ನು, ಸಾಂಸ್ಕೃತಿಕ ಸಂಗತಿಗಳನ್ನು ಹಾಗೂ ಚರಿತ್ರೆಯ ಘಟನೆಗಳನ್ನು ಕನ್ನಡದ ಮೂಲಕ ವ್ಯಾಖ್ಯಾನಿಸಲು ನೆರವಾಗುತ್ತವೆ. ಅವೆಲ್ಲಕ್ಕೂ ಮಿಗಿಲಾಗಿ ಕನ್ನಡ ಭಾಷೆಯ ಆಧಿಪತ್ಯದ ಪ್ರಾಚೀನತೆಯನ್ನು ತಿಳಿಯಲು ಸಾಧ್ಯವಾಗುತ್ತದೆ. ಇಲ್ಲಿನ ಸ್ಥಳನಾಮಗಳು ಯಾವುದೋ ಕಾಲಘಟ್ಟದ ಕನ್ನಡ ಸಮುದಾಯಗಳ ಸೃಷ್ಟಿಯಾಗಿಯೂ ಮುಖ್ಯವಾಗುತ್ತದೆ. ಇವು ಕೂಡ ಸಮುದಾಯಗಳ ಕನ್ನಡ ಪರಂಪರೆಯ ಖಚಿತ ದಾಖಲೆಗಳಾಗಿವೆ.

ಪರಾಮರ್ಶನ ಗ್ರಂಥಗಳು

ಗೋಪಾಲಕೃಷ್ಣ ವಿ. (1987) ಸ್ಥಳನಾಮ ಅಧ್ಯಯನಗಳು, ವಿದ್ಯಾಗಿರಿ ಪ್ರಕಾಶನ, ಗೌರಿಬಿದನೂರು ತಾ, ಕೋಲಾರ ಜಿ.

ಮೋಹನ ಕುಂಟಾರ್ ಎ.(ಡಾ), (2012), ಸಮುದಾಯಗಳ ಕನ್ನಡ ಪರಂಪರೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವೈ.ಎಸ್.ವಿ. ಭಟ್, (ಸಂ), (1990), ಗಡಿನಾಡಿನ ಕಿಡಿ, ಲಲಿತಕಲಾ ಸದನ(ರಿ), ಕಾಸರಗೋಡು.

ಶೆಟ್ಟರ್ ಷ.(2007), ಶಂಗಂ ತಮಿಳಗಂ ಮತ್ತು ಕನ್ನಡ ನಾಡು ನುಡಿ, ಅಭಿನವ ಪ್ರಕಾಶನ, ಬೆಂಗಳೂರು.

❖❖❖

ರಂಗದಲ್ಲಿ ವೇಷವಾದ
ನೇಪಥ್ಯದ ಕೂಸು
ವೇಷವಾಯಿತೆ
ಮತ್ತೆ ಕೂಸಾಗಲು?

ಜರ್ಮನಿಯ ಒಳಗಿನ ದರ್ಶನ

ಡಾ.ಜಿ.ಎನ್.ಉಪಾಧ್ಯ
ಮುಖ್ಯಸ್ಥರು, ಕನ್ನಡ ವಿಭಾಗ
ಮುಂಬಯಿ ವಿಶ್ವವಿದ್ಯಾಲಯ, ವಿದ್ಯಾನಗರಿ, ಮುಂಬೈ–400098

ಪ್ರೊ.ಬಿ.ಎ.ವಿವೇಕ ರೈ ಅವರು ನಮ್ಮ ನಾಡಿನ ಶ್ರೇಷ್ಠ ವಿದ್ವಾಂಸರಲ್ಲಿ ಒಬ್ಬರು. ಅವರದು ನಾನಾ ಬಗೆಯ ವ್ಯಕ್ತಿತ್ವ. ಪ್ರಾಧ್ಯಾಪಕರಾಗಿ, ಸಂಶೋಧಕರಾಗಿ, ಲೇಖಕರಾಗಿ, ಕುಲಪತಿಯಾಗಿ, ಸಂಘಟಕರಾಗಿ ದೇಶ ವಿದೇಶಗಳಲ್ಲಿ ಹೆಸರು ಮಾಡಿದ ವಿವೇಕ ರೈ ಅವರದು ಬಹುಭಾಷಿಕ ಸಂವೇದನೆ. ತುಳು ಭಾಷೆ, ಸಾಹಿತ್ಯ, ಸಂಸ್ಕೃತಿಯ ಬಣ್ಣ ಬನಿಯನ್ನು ಗಾಢಗೊಳಿಸಿದ ಅವರ ಶ್ರಮ ಸಾಧನೆ ಯಾರನ್ನೂ ಬೆರಗುಗೊಳಿಸುತ್ತದೆ. ಮಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗವನ್ನು ಕಟ್ಟಿ ಬೆಳೆಸಿದ ಡಾ. ರೈ ಅವರು ಶಿಸ್ತಿನ ಪ್ರಾಮಾಣಿಕ ಪ್ರಾಧ್ಯಾಪಕರಾಗಿ ನಾಡಿನೆಲ್ಲೆಡೆ ಸೈ ಎನಿಸಿಕೊಂಡವರು. ತುಳು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ, ಕನ್ನಡ ವಿಶ್ವವಿದ್ಯಾಲಯದ ಕುಲಪತಿಯಾಗಿ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುಲಪತಿಯಾಗಿ, ಜರ್ಮನಿ ವ್ಯೂರ್ತ್ಸ್‌ಬರ್ಗ್ ವಿಶ್ವವಿದ್ಯಾಲಯ ಇಂಡಾಲಜಿ ವಿಭಾಗದಲ್ಲಿ ಸಂದರ್ಶನ ಪ್ರಾಧ್ಯಾಪಕರಾಗಿ, ಅವರು ಗೈದ ಸಾಹಿತ್ಯಕ, ಸಾಂಸ್ಕೃತಿಕ ಪರಿಚಾರಿಕೆ ಉಲ್ಲೇಖನೀಯವಾದುದು. ವಿಶ್ವವಿದ್ಯಾಲಯದ ಪ್ರಾಧ್ಯಾಪಕನೊಬ್ಬ ಸಮಾಜದ ಹಿತಕ್ಕೆ ಏನೆಲ್ಲ ಮಾಡಬಹುದು ಎಂಬುದನ್ನು ಅವರು ಮಾಡಿತೋರಿಸಿದ್ದಾರೆ.

ಎಪ್ಪತ್ತರ ದಶಕದಲ್ಲೇ ಗಾದೆಗಳ ಕುರಿತು ವಿಶೇಷ ಅಧ್ಯಯನ ಮಾಡಿದ ವಿವೇಕ ರೈ ಅವರು ಬಹುಶಿಸ್ತೀಯ ಅಧ್ಯಯನಕ್ಕೂ ಹೆಸರಾದವರು. 'ಆನ್ವಯಿಕ ಜಾನಪದ' ಅವರ ಮಹತ್ತ್ವದ ಶೋಧ ಕೃತಿ. ಜರ್ಮನಿಯ ತ್ಯೂಬಿಂಗನ್ ವಿಶ್ವವಿದ್ಯಾಲಯದಲ್ಲಿ ಅಲಕ್ಷ್ಯಕ್ಕೊಳಗಾಗಿ ಬಿದ್ದಿದ್ದ ತುಳು ಪಾಡ್ದನಗಳನ್ನು ಸಂಪಾದಿಸಿ ಇಂಗ್ಲಿಷ್‌ಗೆ ಅನುವಾದಿಸಿ ತುಳುವಿನ ಸಿರಿಗಂಧ ವಿಶ್ವದೆಲ್ಲೆಡೆ ಹರಡುವಂತೆ ಮಾಡಿದ್ದಾರೆ. ಡಾ.ವಿವೇಕ ರೈ ಅವರ ಇನ್ನೊಂದು ಬಹುದೊಡ್ಡ ಸಾಧನೆ ಸಿರಿ ಮಹಾಕಾವ್ಯವನ್ನು ಸಂಪಾದಿಸಿ ಪ್ರಕಟಿಸಿದ್ದು. ಫಿನ್‌ಲ್ಯಾಂಡ್ ದೇಶದ ತುರ್ಕು ವಿಶ್ವವಿದ್ಯಾಲಯದ ಪ್ರಾಧ್ಯಾಪಕ, ಅಂತಾರಾಷ್ಟ್ರೀಯ ಪ್ರಸಿದ್ಧಿಯ ಜಾನಪದ ವಿದ್ವಾಂಸ ಪೊ. ಲಒರಿ ಹಾಂಕೋ ಮಾಚಾರಿನ ಗೋಪಾಲ ನಾಯ್ಕ ಕಟ್ಟಿದ ಸಿರಿ ಮಹಾ ಕಾವ್ಯವನ್ನು ಸಂಗ್ರಹಿಸಿ ಲಿಪ್ಯಂತರ, ಅನುವಾದಗಳ ಮೂಲಕ ಆಂಗ್ಲ ಭಾಷೆಯಲ್ಲಿ ಪ್ರಕಟಿಸಿದ್ದು ತುಳು ಭಾಷೆಯ ಇತಿಹಾಸದಲ್ಲಿ ಒಂದು ಮಹತ್ತ್ವದ ಘಟನೆ. ಪಾಡ್ದನದಂಥ ಒಂದು ಮೌಖಿಕ ಕಾವ್ಯ ಪರಂಪರೆ ಇಂದು ಅಂತರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಗೊಳಗಾಗಲು ಡಾ. ರೈ ಅವರು ವಹಿಸಿದ ಆಸಕ್ತಿ, ಶ್ರಮ, ಶ್ರದ್ಧೆ ಗಮನೀಯ ಅಂಶ. ತಮ್ಮ ಸಂಶೋಧನೆಯ ಮೂಲಕ ತುಳು ಭಾಷೆ, ಸಂಸ್ಕೃತಿಗೆ ಅನನ್ಯವಾದ ಕೊಡುಗೆಯನ್ನು ನೀಡಿರುವ ಡಾ.ರೈ ಅವರ ಕನ್ನಡ ಕೈಂಕರ್ಯವೂ ಸ್ಮರಣೀಯ ಅಂಶ. ಹಿಂದಣ ಹೆಜ್ಜೆ, ಇರುಳಕಣ್ಣು, ರಂಗದೊಳಗಣ ಬಹಿರಂಗ, ಗಿಳಿಸೂವೆ, ಬಾಗಿಲನು ತೆರೆದು, ಜರ್ಮನಿಯ ಒಳಗಿನಿಂದ ಹೀಗೆ ಹತ್ತಾರು ವೈವಿಧ್ಯಮಯವಾದ

ಕೃತಿಗಳನ್ನು ಅವರು ಬರೆದು ಪ್ರಕಟಿಸಿದ್ದಾರೆ.

ಸರಳ ಸಜ್ಜನಿಕೆಗೆ ಹೆಸರಾಗಿರುವ ಡಾ.ವಿವೇಕ ರೈ ಅವರು ಸರ್ವ ಕುತೂಹಲಿ. ಮುಂಗಾರು, ಪ್ರಜಾವಾಣಿ ದೈನಿಕಗಳಿಗೆ ಅವರು ಬರೆದ ಅಂಕಣಗಳು ಬಹಳ ಜನಪ್ರಿಯತೆಯನ್ನು ತಂದುಕೊಟ್ಟಿವೆ. ಅಕಾಡೆಮಿಕ್ ವಲಯದಿಂದ ಹೊರಗೆ ಬಂದು ಸಾಂಸ್ಕೃತಿಕ ನೆಲೆಯಲ್ಲಿ ಸಾರ್ವಜನಿಕವಾಗಿ ಹೇಗೆ ಸಂವಹನ ನಡೆಸಬಹುದು ಎಂಬುದನ್ನು ಅವರು ತಮ್ಮ ಅಂಕಣ ಬರಹಗಳಲ್ಲಿ ತೋರಿಸಿ ಕೊಟ್ಟಿದ್ದಾರೆ. ತುಳುವನ್ನು, ಕನ್ನಡವನ್ನು ಜಾಗತಿಕ ಮಟ್ಟದಲ್ಲಿ ಬೆಳಗುವಂತೆ, ಬೆಳೆಯುವಂತೆ ಮಾಡಿದ ರೈ ಅವರ ಪ್ರತಿಭೆ ಪಾಂಡಿತ್ಯಕ್ಕೆ ಯಾರೂ ಬೆರಗಾಗಬೇಕು.

‘ಜರ್ಮನಿಯ ಒಳಗಿನಿಂದ’ ಇದು ಡಾ.ವಿವೇಕ ರೈ ಅವರ ಅಂಕಣ ಬರಹಗಳ ಸಂಕಲನ. ವೈವಿಧ್ಯಮಯವಾದ 39 ಲೇಖನಗಳು ಇಲ್ಲಿದ್ದು ಜರ್ಮನ್ ದೇಶದ ವಿಭಿನ್ನ ನೆಲೆಗಳ ಮೇಲೆ ಇವು ಬೆಳಕು ಹಾಯಿಸುತ್ತವೆ. ಜರ್ಮನ್ ದೇಶ ಜಗತ್ತಿನ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಒಂದು. ಜಗತ್ತಿನ ಪ್ರಮುಖ ರಾಷ್ಟ್ರಗಳಲ್ಲಿ ಜರ್ಮನಿಯೂ ಒಂದು. ಜರ್ಮನ್ ಭಾಷೆ ಭಾರತವೂ ಸೇರಿದಂತೆ ಜಗತ್ತಿನೆಲ್ಲೆಡೆ ಚಾಲ್ತಿಯಲ್ಲಿದೆ. ತನ್ನದೇ ಆದ ಭವ್ಯ ಇತಿಹಾಸ, ಸಂಸ್ಕೃತಿಯನ್ನು ಹೊಂದಿರುವ ಜರ್ಮನಿ ಜ್ಞಾನ ವಿಜ್ಞಾನ, ತಂತ್ರಜ್ಞಾನ, ಉದ್ದಿಮೆ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ರಾಷ್ಟ್ರ. ಎರಡನೆಯ ಮಹಾಯುದ್ಧದ ಹೊಡೆತವನ್ನು ಅರಗಿಸಿಕೊಂಡ ಜರ್ಮನಿ ಇಂದು ಜಗತ್ತಿನ ಮುಂದುವರಿದ ದೇಶಗಳಲ್ಲಿ ಒಂದಾಗಿ ಹೆಸರು ಮಾಡಿದೆ. ಭಾರತ–ಜರ್ಮನ್ ಸಂಬಂಧಕ್ಕೆ ಸುದೀರ್ಘವಾದ ಇತಿಹಾಸವಿದೆ. ಹಾಗೆಯೇ ಕರ್ನಾಟಕ–ಜರ್ಮನಿ ಸಂಬಂಧವೂ ಸಾಕಷ್ಟು ಘನಿಷ್ಠವಾದುದು. ಜರ್ಮನಿಯ ಪ್ರಸಿದ್ಧ ವಿಶ್ವವಿದ್ಯಾಲಯಗಳಲ್ಲಿ ವ್ಯೂರ್ತ್ಸ್‌ಬುರ್ಗ್ ವಿಶ್ವವಿದ್ಯಾಲಯವೂ ಒಂದು. ಅಲ್ಲಿನ ಇಂಡಾಲಜಿ ವಿಭಾಗದಲ್ಲಿ ಅತಿಥಿ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸುವ ಸಂದರ್ಭದಲ್ಲಿ ಡಾ. ರೈ ಅವರು ಕಂಡುಂಡ ಅನುಭವಗಳನ್ನು ಈ ಲೇಖನಮಾಲೆಯಲ್ಲಿ ಸೊಗಸಾಗಿ ಪೋಣಿಸಿದ್ದಾರೆ. “ಜರ್ಮನಿಯ ಒಳಗಿನಿಂದ’ ಹೆಸರಿಗೆ ವಿವರಣೆ ಬೇಕಿಲ್ಲ. ಇಲ್ಲಿನ ಪ್ರತಿಯೊಂದು ಲೇಖನವೂ ಜರ್ಮನಿಯ ಒಂದೊಂದು ಬದುಕನ್ನು ಕಟ್ಟಿಕೊಡುತ್ತದೆ. ಅದರಲ್ಲಿ ಮುಖ್ಯ ಅಮುಖ್ಯ ಎಂಬ ಭೇದ ಇಲ್ಲ. ಊಟ, ತಿಂಡಿ, ಹಾಡು, ಕುಣಿತ, ಒಪೆರ ನಾಟಕ, ಮ್ಯೂಸಿಯಂ, ಕೋಟೆ, ಚರ್ಚ್, ಅರಮನೆ, ನದಿಮರಗಿಡ, ಮಳೆ, ಸೂರ್ಯ, ಧರ್ಮ, ಹಬ್ಬ, ಆಚರಣೆ, ಕನ್ನಡ–ತುಳು, ಹಿಂದಿ, ಜರ್ಮನ್, ಹಳ್ಳಿ, ಸಂತೆ, ಹಣ, ಕ್ರೌರ್ಯ, ಕೊಲೆ, ಕಳ್ಳತನ, ಸಾಹಿತಿ, ವಿಜ್ಞಾನಿ ಹೀಗೆ ನನ್ನ ಒಳಗಿನಿಂದ ನಾನು ಕಾಣಲು ಸಾಧ್ಯ ಆದ ಎಲ್ಲವುಗಳ ಮುಖಾಮುಖಿಯ ಸಂಗತಿಗಳು ವಿದ್ಯಮಾನಗಳು ಇಲ್ಲಿವೆ” ಎಂಬುದಾಗಿ ಲೇಖಕರು ತಮ್ಮ ಮಾತಿನಲ್ಲಿ ಹೇಳಿಕೊಂಡಿದ್ದಾರೆ. ಹೀಗಾಗಿ ಇದೊಂದು ಪ್ರವಾಸ ಕಥನವಲ್ಲ; ಅನುಭವ ಕಥನ, ಅಧ್ಯಯನ ಪೂರ್ಣ ಕೃತಿ ಎಂದರೂ ತಪ್ಪಿಲ್ಲ. ಜರ್ಮನ್ ದೇಶದ ಬಗೆಗೆ ಕನ್ನಡದಲ್ಲಿ ಸಾಕಷ್ಟು ಪ್ರವಾಸ ಕಥನಗಳು ಬೆಳಕು ಕಂಡಿದ್ದರೂ ಡಾ. ರೈ ಅವರು ಕಂಡರಿಸಿದ ಜರ್ಮನಿಯ ಮುಖಗಳೇ ಬೇರೆ ಬಗೆಯದು. ಈ ಕೃತಿಯನ್ನು ಓದಿ ಮುಗಿಸಿದಾಗ ನಮ್ಮ ಮನಸ್ಸಿನಲ್ಲಿ ಉಳಿಯುವುದು ಜರ್ಮನ್ ದೇಶದ ಸಾಂಸ್ಕೃತಿಕ ಹಿರಿಮೆ ಗರಿಮೆ, ಅಲ್ಲಿನ ಜನರ ಗುಣ ಸ್ವಭಾವ, ಶ್ರಮ ಸಂಸ್ಕೃತಿ, ರಾಷ್ಟ್ರಾಭಿಮಾನ, ಪರಿಸರದ ಕುರಿತಾದ ಕಾಳಜಿ ಅಲ್ಲಿನ ಜನರ ಜೀವನೋತ್ಸಾಹ ಹೀಗೆ ಹತ್ತು ಹಲವು ಅಂಶಗಳು.

ವ್ಯೂರ್ತ್ಸ್‌ಬುರ್ಗ್ ನಗರದ ವಸಂತೋತ್ಸವ, ಅದು ಬಹುಭಾಷೆಗಳ ಬಹುದೇಶಗಳ ಜನರನ್ನು ಸೆಳೆಯುತ್ತಿರುವ ಬಗೆ, ಅಲ್ಲಿರುವ ಬಹುದೇಶಗಳ ಸೌಹಾರ್ದ ಸಂಘಗಳ

ಕ್ರಿಯಾಶೀಲತೆಯನ್ನು ತೆರೆದಿಡುತ್ತಲೇ ಜರ್ಮನಿಯ ಪ್ರತಿಯೊಂದು ವಿಶ್ವವಿದ್ಯಾಲಯವೂ ಜಗತ್ತಿನ ಗಮನ ಸೆಳೆಯುತ್ತಿರುವುದರ ಕಡೆಗೆ ಬೆಟ್ಟು ಮಾಡಿದ್ದಾರೆ. "ವ್ಯೂರ್ತ್ಸ್‌ಬುರ್ಗ್ ವಿಶ್ವವಿದ್ಯಾಲಯದಲ್ಲಿ ಸಂಶೋಧನೆ ಮಾಡಲು ಭಾರತದಿಂದ ಸಾಕಷ್ಟು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಬರುತ್ತಾರೆ. ಇಲ್ಲಿನ ಜೀವವಿಜ್ಞಾನ ವಿಭಾಗ ಜಗತ್ತಿನಲ್ಲೇ ತುಂಬಾ ಹೆಸರುವಾಸಿ. 'ಎಕ್ಸ್‌ರೇ'ಯನ್ನು ಮೊತ್ತ ಮೊದಲು ಕಂಡುಹಿಡಿದು ಅದಕ್ಕಾಗಿ ನೋಬೆಲ್ ಪ್ರಶಸ್ತಿ ಪಡೆದ ವಿಲ್ ಹೆಲ್ಮ್ ಕೊನ್ರಾಡ್ ರೊಂತ್‌ಗೆನ್ ವ್ಯೂರ್ತ್ಸ್‌ಬುರ್ಗ್ ವಿಶ್ವವಿದ್ಯಾಲಯದಲ್ಲಿ ಭೌತವಿಜ್ಞಾನದ ವಿಭಾಗದಲ್ಲಿ ಪ್ರೊಫೆಸರ್ ಆಗಿದ್ದವನು. ಅದು ಭೌತವಿಜ್ಞಾನದ ಮೊದಲನೆಯ ನೊಬೆಲ್ ಗೌರವ". "ನಮ್ಮ ದೇಶದ ಮಹತ್ತ್ವದ ಸಮಾಜವಾದಿ ಚಿಂತಕ ರಾಮಮನೋಹರ ಲೋಹಿಯಾ ಜರ್ಮನಿಯ ಬರ್ಲಿನ್ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ ಸಂಶೋಧನ ವಿದ್ಯಾರ್ಥಿಯಾಗಿ 1929ರಿಂದ 1938ರವರೆಗೆ ಇದ್ದರು. ಅವರು 'ಭಾರತದಲ್ಲಿ ಉಪ್ಪಿನ ತೆರಿಗೆ' ಎಂಬ ವಿಷಯದ ಕುರಿತು ಜರ್ಮನ್ ಭಾಷೆಯಲ್ಲಿ ಡಾಕ್ಟರೇಟ್ ಮಹಾ ಪ್ರಬಂಧವನ್ನು ಆ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದರು. ಲೋಹಿಯಾ ಅವರ ಡಾಕ್ಟರೇಟ್ ಮಹಾಪ್ರಬಂಧ ಈವರೆಗೂ ದೊರೆಯದಿರುವುದು ಒಂದು ದೊಡ್ಡ ದುರಂತ. ಯುವಕ ಲೋಹಿಯಾ ಅವರ ಮೇಲೆ ಬರ್ಲಿನ್ ವಿಶ್ವವಿದ್ಯಾಲಯ ಬೌದ್ಧಿಕ ಶಕ್ತಿ, ಜರ್ಮನಿಯ ಆ ಕಾಲದ ರಾಜಕೀಯ ಪರಿಸ್ಥಿತಿ ವಿಶೇಷವಾಗಿ ಪ್ರಭಾವ ಬೀರಿದವು ಎಂದು ಹೇಳಬಹುದು". "ಆ ವಿಶ್ವವಿದ್ಯಾಲಯದ ನಿಯಮದ ಪ್ರಕಾರ ಒಬ್ಬ ಅಭ್ಯರ್ಥಿಗೆ ಡಾಕ್ಟರೇಟ್ ಪದವಿಯನ್ನು ಕೊಡಬೇಕಾದರೆ ತನ್ನ ಡಾಕ್ಟರೇಟ್ ಪ್ರಬಂಧದ 150 ಪ್ರತಿಗಳನ್ನು ಮುದ್ರಿಸಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕಾಗಿತ್ತು". ಹೀಗೆ ಜರ್ಮನಿಯಲ್ಲಿನ ದಕ್ಷ ಶಿಕ್ಷಣ ವ್ಯವಸ್ಥೆಯ ಬಗೆಗೆ ಅಪೂರ್ವ ಮಾಹಿತಿಗಳು ಇಲ್ಲಿನ ಲೇಖನಗಳಲ್ಲಿ ದಾಖಲಾಗಿರುವುದು ವಿಶೇಷ.

ಜರ್ಮನ್ ದೇಶ ಜಾಗತೀಕರಣದ ನಡುವೆಯೂ ತನ್ನ ಸಾಂಸ್ಕೃತಿಕ ಅಸ್ಮಿತೆಯನ್ನು ಉಳಿಸಿಕೊಂಡು ಬಂದಿದೆ. ಜರ್ಮನಿ ನಮ್ಮ ದೇಶದಂತೆ ಗಣರಾಜ್ಯ ವ್ಯವಸ್ಥೆಯನ್ನು ನೆಚ್ಚಿಕೊಂಡ ಪ್ರಜಾಪ್ರಭುತ್ವ ರಾಷ್ಟ್ರ. ಅಲ್ಲಿನ ಆಡಳಿತ ವ್ಯವಸ್ಥೆಯಲ್ಲಿನ ಪಾರದರ್ಶಕತನ, ರಾಜಕಾರಣಿಗಳ ಕುರಿತು ಬರೆಯುತ್ತಾ "ವ್ಯೂರ್ತ್ಸ್‌ಬುರ್ಗ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ವಸಂತೋತ್ಸವದ ಉದ್ಘಾಟನೆ ಮಾಡಿದ್ದು ಅಲ್ಲಿನ ಮೇಯರ್. ನಡು ವಯಸ್ಸಿನ ಈ ತರುಣ ವರ್ಣರಂಜಿತ ಮೆರವಣಿಗೆಯಲ್ಲಿ ಬಂದರು. ಬಂದವರೇ ಮೇಯರ್ ಗೌನ್ ಕಳಚಿ ಉತ್ಸಾಹದ ಕೆಲವು ಮಾತುಗಳನ್ನು ಆಡಿದರು. ನಾವು ನೋಡುತ್ತಿದ್ದಂತೆಯೇ ಮೇಯರ್ ಚುಟುಕು ಭಾಷಣ ಮುಗಿಸಿ ಯಾವ ಶಿಷ್ಟಾಚಾರದ ಅಹಂ ಇಲ್ಲದೆ ಸಾಮಾನ್ಯರಂತೆ ವೇದಿಕೆಯಿಂದ ಕೆಳಗೆ ಜಿಗಿದು ನೆರೆದಿದ್ದ ಜನರೊಡನೆ ಮಾತನಾಡಲು ತೊಡಗಿದರು. ಬಳಿಕ ಸಾಮಾನ್ಯರಂತೆ ಬಂದು ಸಭಿಕರ ನಡುವೆ ನಿಂತುಕೊಂಡು ಸುಮಾರು ಅರ್ಧಗಂಟೆ ಕಲಾ ಕಾರ್ಯಕ್ರಮಗಳನ್ನು ವೀಕ್ಷಿಸಿದರು. ಮೇಯರ್ ನಿಂತುಕೊಂಡೇ ಬಹಳ ಹೊತ್ತು ಕಾರ್ಯಕ್ರಮ ನೋಡುತ್ತಿದ್ದುದನ್ನು ಕಂಡು ನನಗೆ ಮುಜುಗರ ಆಯಿತು. ಯಾರೂ ಎದ್ದು ನಿಂತು ಅವರನ್ನು ಅಹ್ವಾನಿಸಲಿಲ್ಲ. ಅವರಾದರೋ ಯಾವ ನಿರೀಕ್ಷೆಯೂ ಇಲ್ಲದೆ ನಿರಾಳವಾಗಿ ನಿಂತುಕೊಂಡು ನೋಡುತ್ತಿದ್ದರು. ಬಳಿಕ ಎಲ್ಲ ಮಳಿಗೆಗಳಿಗೆ ಭೇಟಿಕೊಟ್ಟು ಅಲ್ಲಿದ್ದವರನ್ನು ಮಾತನಾಡಿಸುತ್ತಾ ಒಬ್ಬಂಟಿಯಾಗಿ ಸುತ್ತಾಡುತ್ತಿದ್ದರು. ಹಿಂಬಾಲಕರೂ ಇಲ್ಲ. ಮುಂಬಾಲಕರೂ ಇಲ್ಲ. ಮೇಯರ್ ಹೊರಗೆ ಹೋಗುವಾಗ ನಾನು ಗಮನಿಸುತ್ತಾ ಇದ್ದೆ. ಸಾಕಷ್ಟು ದೂರದಲ್ಲಿ ಪಾರ್ಕ್ ಮಾಡಿದ್ದ ತಮ್ಮ ಕಾರಿನ ಬಳಿಗೆ ಒಬ್ಬರೇ ನಡೆದುಕೊಂಡು ಹೋಗಿ ತಮ್ಮ ಕಾರನ್ನು ತಾವೇ ಡ್ರೈವ್

ಮಾಡುತ್ತಾ ಹೋದರು. ಕಾರಲ್ಲಿ ಕಚೇರಿ ಸಿಬ್ಬಂದಿಯಾಗಲಿ ಸುರಕ್ಷತೆಯವರಾಗಲಿ ಯಾರೂ ಇರಲಿಲ್ಲ". ಹೀಗಾಗಿ ಜರ್ಮನ್ ದೇಶ ಜಗತ್ತಿನ ಪ್ರಬಲ ರಾಷ್ಟ್ರವಾಗಿ ರೂಪುಗೊಂಡಿದೆ. ಜರ್ಮನ್ ದೇಶದ ಸುದ್ದಿ ಮಾಧ್ಯಮಗಳ ಬಗೆಗೆ ಬರೆಯುತ್ತಾ " ಇಲ್ಲಿನ ಸ್ಥಳೀಯ ಮಾಧ್ಯಮಗಳಲ್ಲಿ ರಾಜಕೀಯದ ಸುದ್ದಿಯೇ ಇಲ್ಲ. ಜನರ ಅಗತ್ಯ, ಸಮಸ್ಯೆ, ಎಚ್ಚರ, ಇಷ್ಟೇ ಮುಖ್ಯ. ನಗರದ ಆಡಳಿತವೊಂದು ಜನರಿಗಾಗಿ ಹೇಗೆ ಕೆಲಸ ಮಾಡುತ್ತದೆ ಎಂಬುದನ್ನು ದಿನದ ಕ್ಷಣಕ್ಷಣವೂ ಕಾಣಬಹುದು.

ಜರ್ಮನಿಯಲ್ಲಿ ಗಣರಾಜ್ಯೋತ್ಸವವನ್ನು ನೆನಪಿಸಿಕೊಳ್ಳುತ್ತಾ 'ಭಾರತವೆಂದರೆ ಕರ್ನಾಟಕ' ಎಂದು ದಾಖಲಿಸಿದ್ದಾರೆ. ಜರ್ಮನಿಯೂ ಭಾರತದಂತೆ ಒಂದು ಗಣರಾಜ್ಯ. ಬವೇರಿಯವು ದಕ್ಷಿಣ ಜರ್ಮನಿಯ ದೊಡ್ಡ ರಾಜ್ಯ. ಮ್ಯೂನಿಕ್ ಅದರ ರಾಜಧಾನಿ. ಅದು ತುಂಬಾ ಶ್ರೀಮಂತ ನಗರ. ಬವೇರಿಯ ಮತ್ತು ಕರ್ನಾಟಕ ರಾಜ್ಯಗಳ ನಡುವೆ ಒಡಂಬಡಿಕೆಯಾಗಿದ್ದು ಕರ್ನಾಟಕದಲ್ಲಿ ಹೆಚ್ಚಿನ ಶಿಕ್ಷಣ ಪಡೆಯಲು ಹೋಗುವ ಜರ್ಮನ್ ವಿದ್ಯಾರ್ಥಿಗಳಿಗೆ ಜರ್ಮನಿಯ ಬವೇರಿಯ ಸರಕಾರ ಫೆಲೋಶಿಪ್ ಕೊಡುತ್ತಿದೆ. ಮ್ಯೂಸಿಕ್‌ನಲ್ಲಿ ಇಂಡಿಯನ್ ಇನ್ಸಿಟ್ಯೂಟ್ ಇದ್ದು ಭಾರತದ ಬಗೆಗಿನ ಪ್ರೀತಿ ಮತ್ತು ಗೌರವದಿಂದ ಜರ್ಮನ್‌ರು ಕಟ್ಟಿಕೊಂಡ ಈ ಸಂಸ್ಥೆಯ ಕ್ರಿಯಾಶೀಲತೆಯ ಚಿತ್ರಣವಿಲ್ಲಿದೆ.

ಕರ್ನಾಟಕವೂ ಜರ್ಮನಿಗೆ ಉನ್ನತ ಅಧ್ಯಯನಕ್ಕೆ ಬರುವ ವಿದ್ಯಾರ್ಥಿಗಳಿಗೆ ಫೆಲೋಶಿಪ್ ಕೊಡಲು ಮುಂದಾಗಬೇಕು. ಬವೇರಿಯ ಮತ್ತು ಕರ್ನಾಟಕದ ನಡುವೆ ಇರುವ ಒಡಂಬಡಿಕೆಗೆ ಕನ್ನಡ ಭಾಷೆ, ಸಾಹಿತ್ಯ, ಸಮಾಜ, ಕಲೆಗಳ ಕ್ಷೇತ್ರಗಳನ್ನು ಕೂಡಲೇ ಸೇರಿಸುವುದರಿಂದ ಜರ್ಮನ್ ಇಂಡಾಲಜಿಯನ್ನು ಕನ್ನಡಾಲಜಿಯಾಗಿ ಹೇಗೆ ಹೊಸತಾಗಿ ಕಟ್ಟಬಹುದು ಮತ್ತು ಆ ಮೂಲಕ ಕನ್ನಡವನ್ನು ಜಾಗತಿಕ ಭಾಷೆಯಾಗಿ ಬೆಳೆಸಬಹುದಾದ ಸಾಧ್ಯತೆಯತ್ತ ಸಹೃದಯರ ಗಮನ ಸೆಳೆದಿದ್ದಾರೆ.

ಜರ್ಮನಿ ಎಂದ ತಕ್ಷಣ ನಮಗೆ ನೆನಪಾಗುವುದು ಮೊಗ್ಲಿಂಗ್ ಹಾಗೂ ಕಿಟ್ಟೆಲ್. ಕನ್ನಡದ ಮೊತ್ತ ಮೊದಲ ಪತ್ರಿಕೆ 'ಮಂಗಳೂರು ಸಮಾಚಾರ' ಆರಂಭಿಸಿದ ಮೊಗ್ಲಿಂಗ್, ಕನ್ನಡದ ಅನೇಕ ಪ್ರಥಮಗಳನ್ನು ಸಾಧಿಸಿದ ಆದ್ಯರು. ಕರ್ನಾಟಕಕ್ಕೆ ಬಂದು ಕನ್ನಡ ಕಲಿತು, ಪ್ರಾಚೀನ ಕನ್ನಡ ಕಾವ್ಯಗಳ ಹಸ್ತಪ್ರತಿಗಳನ್ನು ಸಂಪಾದಿಸಿ ಮೊದಲ ಬಾರಿಗೆ ಅವುಗಳಿಗೆ ಪ್ರಕಟಣೆಯ ಭಾಗ್ಯವನ್ನು ತೋರಿಸಿದ ಮೊಗ್ಲಿಂಗ್ ಅವರ ಜೀವನ ಸಾಧನೆಯ ಬಗೆಗೆ ಎರಡು ಮಹತ್ತ್ವದ ಲೇಖನಗಳು ಈ ಕೃತಿಯಲ್ಲಿವೆ ಎಂಬುದು ಅಭಿಮಾನದ ಅಂಶ. ಮೊಗ್ಲಿಂಗ್ ಜನಿಸಿದ್ದು ಜರ್ಮನಿಯ ನೆಕ್ಕರ್ ನದಿಯ ಸಮೀಪ. ಆತ ಮಂಗಳೂರಿನಲ್ಲಿ ಕೆಲಸ ಮಾಡಿದ್ದು ನೇತ್ರಾವತಿ ನದಿಯ ಬಳಿ. ಆತ ನಡೆಸಿದ ಕನ್ನಡ ಜರ್ಮನ್ ಅನುಸಂಧಾನದ ಬಗೆಗಿನ ಒಂದು ಶೋಧ ಲೇಖನವೂ ಇಲ್ಲಿರುವುದು ವಿಶೇಷ.

ಜರ್ಮನಿ ಎಂದಾಕ್ಷಣ ಇತಿಹಾಸದ ಪುಟಗಳಲ್ಲಿ ನಾವು ಓದಿದ ಹಿಟ್ಲರ್, ಹೆಗಲ್, ಗಯತೆ, ಬ್ರೆಕ್ಟ್ ಮೊದಲಾದವರು ನೆನಪಾಗುತ್ತಾರೆ. ಆದರೆ ಇಲ್ಲಿ ರೈ ಅವರು ಅಲಕ್ಷಿತ ಸಾಹಿತಿಗಳ ನಾಟಕಕಾರರ ಬಗೆಗೂ ಸಾಂದರ್ಭಿಕವಾಗಿ ಬರೆದಿದ್ದಾರೆ. ತಾವು ನೋಡಿದ 'ಕಾರ್ಲ್ ಮೈ' ಪ್ರದರ್ಶನದ ಬಗೆಗೆ ಬರೆಯುತ್ತಾ "ಕಾರ್ಲ್ ಮೈ(1842–1912) ಆಧುನಿಕ ಜನಪ್ರಿಯ ಸಾಹಿತ್ಯದ ಜರ್ಮನ್ ಲೇಖಕರಲ್ಲಿ ಅಗ್ರಗಣ್ಯ. ಕತೆ, ಕಾದಂಬರಿ, ಪ್ರವಾಸ ಸಾಹಿತ್ಯ ಕೃತಿಗಳನ್ನು ರಚಿಸಿದ ಈತ ಬಡ ಕುಟುಂಬದ ಹಿನ್ನೆಲೆಯಿಂದ ಬಂದವನು. ಜೀವನೋಪಾಯಕ್ಕಾಗಿ ಕಳುವು ಮಾಡುತ್ತಿದ್ದ ಈತ ಜೈಲಿನಲ್ಲಿ ಬಹುಕಾಲ ಕಳೆದ. ಅಲ್ಲೇ

ಅನೇಕ ಕೃತಿಗಳನ್ನು ರಚಿಸಿದ. ಫ್ಯಾಂಟಸಿಯನ್ನು ತನ್ನ ಕಥನದ ಮೂಲ ದ್ರವ್ಯವನ್ನಾಗಿ ಸಾಹಿತ್ಯ ರಚಿಸಿ ಸೈ ಎನಿಸಿಕೊಂಡ. ಒಂದು ದಾಖಲೆಯ ಪ್ರಕಾರ ಕಾರ್ಲ್‌ಮೈನ ಪುಸ್ತಕಗಳು ಸುಮಾರು ಇಪ್ಪತ್ತು ಕೋಟಿಯಷ್ಟು ಸಂಖ್ಯೆಯ ಪ್ರತಿಗಳು ಮಾರಾಟವಾಗಿವೆ. ಅವನ ಕೃತಿಗಳು ಸಿನಿಮಾ ಆಗಿವೆ, ರಂಗಭೂಮಿಯಲ್ಲಿ ಪ್ರದರ್ಶನಗೊಂಡಿವೆ. ಶ್ರವ್ಯ ನಾಟಕಗಳಾಗಿ ರೂಪಾಂತರಗೊಂಡಿದೆ. ಕಾಮಿಕ್ಸ್ ರೂಪದಲ್ಲಿ ಜನಪ್ರಿಯವಾಗಿವೆ. ಆದರೆ ಹೊಸ ತಲೆಮಾರು ಕಾರ್ಲ್‌ಮೈನ ಕೃತಿಗಳನ್ನು ಓದುತ್ತಿಲ್ಲ ಹೀಗೆ ಕಾರ್ಲ್‌ಮೈನ ಸಾಹಸ ಗಾಥೆಯ ಅನಾವರಣ ಈ ಲೇಖನದಲ್ಲಿ ಸೊಗಸಾಗಿ ಪಡಿಮೂಡಿದೆ. ಜರ್ಮನ್ ದಲ್ಲಿ ತಾವು ನೋಡಿದ ಒಪೆರ, ನಾಟಕ, ಸಂಗೀತ, ನೃತ್ಯ, ಕಲೆ, ಉತ್ಸವಗಳ ಬಗ್ಗೆ ಬರೆಯುತ್ತ ಅನೇಕ ಒಳನೋಟಗಳನ್ನು ನೀಡುತ್ತಾ ಹೋಗುತ್ತಾರೆ. ಡಾ.ರೈ ಅವರ ಲೇಖನಗಳ ಶೈಲಿ ಲಲಿತ ಮನೋಹರವಾದುದು. ಅವರ ಬರವಣಿಗೆ ಎಲ್ಲೂ ಪಾಂಡಿತ್ಯದ ಭಾರದಿಂದ ಕುಸಿದಿಲ್ಲ. ಲಲಿತ ಪ್ರಬಂಧಗಳಂತೆ ಬಿಡದೆ ಓದಿಸಿಕೊಂಡು ಹೋಗುವ ಲೇಖನಗಳು ವಿಚಾರ ಪ್ರಧಾನವೂ ಆಗಿವೆ. ಜರ್ಮನಿಯಲ್ಲಿನ 'ಮದರ್ಸ್ ಡೇ' ಬಗೆಗೆ ಬರೆಯುತ್ತಾ " ಸಾಮಾಜಿಕತೆ, ಸಾಮುದಾಯಿಕತೆ, ಸಮಾನತೆ ಇವನ್ನು ಆಧುನಿಕ ಪ್ರಜಾಪ್ರಭುತ್ವದ ತತ್ವಗಳೆಂದು ಭಾವಿಸಲಾಗುತ್ತದೆ. ಆದರೆ ಜಗತ್ತಿನಾದ್ಯಂತ ಅಮ್ಮಂದಿರು ಇವುಗಳನ್ನು ಬದುಕಿದ್ದಾರೆ ಮತ್ತು ತಮ್ಮ ಮಕ್ಕಳಿಗೆ ಬಿಟ್ಟು ಹೋಗಿದ್ದಾರೆ. ಇದಕ್ಕೆ ಗ್ರಂಥಗಳ, ಸಂವಿಧಾನದ, ಪ್ರಣಾಳಿಕೆಗಳ, ಪ್ರವಚನಗಳ, ಸಿದ್ಧಾಂತಗಳ ಸಾಕ್ಷಿಗಳು ಇಲ್ಲ. ನಾವು ಇವತ್ತು ಹೇಳುವ ಮೌಲ್ಯಗಳು, ಆದರ್ಶಗಳು ಇವನ್ನು ತುಂಬಾ ಸಹಜವಾಗಿ ಅವರೆಲ್ಲ ಬದುಕಿದ್ದಾರೆ. ಸಕಲ ಜೀವ ರಾಶಿಗಳನ್ನು ಪ್ರೀತಿಯಿಂದ ಕಾಣುವುದು, ಯಾರಲ್ಲೂ ಭೇದ-ಭಾವ ಮಾಡದಿರುವುದು, ದ್ವೇಷ ಇಲ್ಲದೆ ಮನೆ ಊರು ಕಟ್ಟುವುದು, ತನ್ನ ಮಕ್ಕಳಂತೆ ಎಲ್ಲ ಮಕ್ಕಳನ್ನು ಕಾಣುವುದು ಇದನ್ನು ಅನೇಕ ಅಮ್ಮಂದಿರು ಸಾಧನೆ ಎಂದು ಪರಿಗಣಿಸದೆ ಇನ್ನೊಬ್ಬರೊಡನೆ ಹೆಚ್ಚುಗಾರಿಕೆ ಎಂದು ಹೇಳಿಕೊಳ್ಳದೆ ಆಗು ಮಾಡಿದ್ದಾರೆ" ಎಂಬುದಾಗಿ ಮಾರ್ಮಿಕವಾಗಿ ಅಮ್ಮಂದಿರ ಸಾಧನೆಗಳನ್ನು ಸ್ಮರಿಸಿಕೊಂಡಿದ್ದಾರೆ. ನವೀನ ವಿಚಾರ ಹಾಗೂ ಅರಿವಿನ ಸ್ಪಂದನ ಈ ಲೇಖನದಲ್ಲಿ ಎದ್ದುಕಾಣುವ ಅಂಶ. ವಿವೇಕ ರೈ ಅವರದು ಕವಿ ಮನಸ್ಸು. ಅವರು ಉತ್ತಮ ಅನುವಾದಕರು. ಜರ್ಮನ್ ಸಾಹಿತ್ಯದ ಸಾಲುಗಳನ್ನು ಇಲ್ಲಿ ಔಚಿತ್ಯ ಪೂರ್ಣವಾಗಿ ಬಳಸಿಕೊಂಡಿರುವುದು ಲೇಖನಗಳ ಮೌಲ್ಯವನ್ನು ಹೆಚ್ಚಿಸಿದೆ. ಅಂಕಣ ಸಾಹಿತ್ಯ ಸಮಯ ಸಾಹಿತ್ಯ. ಅದನ್ನು ಸಮಯಾತೀತ ಗೊಳಿಸುವ ಕಲೆಗಾರಿಕೆ ಈ ಕೃತಿಯಲ್ಲಿ ಮಿಂಚಿದೆ. ಜರ್ಮನಿಯ ಕುರಿತು ಸತತ ಆಕರ್ಷಣೆಯನ್ನು ನೀಡುವ ಸುಂದರ ಕೃತಿ ಇದಾಗಿದೆ. ಕರ್ನಾಟಕ ಜರ್ಮನಿಗಳ ನಡುವಿನ ಸಾಂಸ್ಕೃತಿಕ ರಾಯಭಾರಿಯಾಗಿ ಡಾ.ವಿವೇಕ ರೈ ಅವರು ಸೇವೆ ಸಲ್ಲಿಸುತ್ತಿರುವುದು ಅಭಿಮಾನದ ಸಂಗತಿ. ಅದರ ಪ್ರತಿಫಲ ಈ ಕೃತಿ.

❖❖❖

ನೆನೆದವರು ತನ್ನವರು
ಮರೆತವರು ಪರರು.

10ನೇ ಶತಮಾನದ ಕನ್ನಡ-ತೆಲುಗು ದ್ವಿಭಾಷಿಕ ಶಾಸನಗಳ ಸ್ವರೂಪ

ಮಂಜುನಾಥ ಟಿ.
ಹಿರಿಯ ಸಂಶೋಧನಾ ವಿದ್ಯಾರ್ಥಿ
ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-560056

ಮುನ್ನೋಟ

ಶಾಸನಗಳ ಚರಿತ್ರೆಯನ್ನು ಅವಲೋಕಿಸಿದರೆ ಮೊದಲಿಗೆ ಅಶೋಕನು ಕ್ರಿ.ಪೂ.3ನೇ ಶತಮಾನದಲ್ಲಿ ಹಾಕಿಸಿರುವ ದ್ವಿಭಾಷಾ ಶಾಸನಗಳು ಕಂಡುಬರುತ್ತವೆ. ಕ್ರಿ.ಶ.ಮೊದಲನೆಯ ಹಾಗೂ ಎರಡನೆಯ ಶತಮಾನದಲ್ಲಿ ಸಾತವಾಹನರದ್ದು ದೊರಕಿದರೆ, ನಂತರ ದಕ್ಷಿಣದಲ್ಲಿ ಪ್ರಾಕೃತ-ಸಂಸ್ಕೃತ ನುಡಿಗಳಲ್ಲಿ ಬರೆದಿರುವ ಶಾಸನಗಳು ಸಿಗುತ್ತವೆ. ಕ್ರಿ.ಶ.4-5ನೇ ಶತಮಾನದಲ್ಲಿ ಕದಂಬ ಅರಸರು ದ್ವಿಭಾಷೆಯಲ್ಲಿ ಬರೆಸಿರುವ ಶಾಸನಗಳು ದೊರಕುತ್ತವೆ. ಕ್ರಿ.ಶ.ಹತ್ತನೇ ಶತಮಾನದ ಹೊತ್ತಿಗೆ ಮೂರು ಬಗೆಯ ಭಾಷಾ ಬಳಕೆಯನ್ನು ಶಾಸನಗಳಲ್ಲಿ ಕಾಣುತ್ತೇವೆ. ಒಂದು;ಪಾಕೃತ. ಎರಡು; ಕನ್ನಡ-ಸಂಸ್ಕೃತ. ಮೂರು; ಕನ್ನಡ-ತೆಲುಗು. ಪ್ರಸ್ತುತ ಪ್ರಬಂಧದಲ್ಲಿ ಕ್ರಿ.ಶ. 8 ಮತ್ತು 9ನೇ ಶತಮಾನದಿಂದ ಉಳಿದು ಬಂದಿರುವ ಕನ್ನಡ-ತೆಲುಗು ದ್ವಿಭಾಷಾ ಶಾಸನಗಳಾದ ಕಲಕಡ[1], ವೆಲಿಗಲ್ಲು[2], ಅಕನೂರು[3], ಅರಕಟವೇಮುಲ[4] ಮತ್ತು ಕುರ್ಕ್ಯಾಲ[5] ಶಾಸನಗಳಲ್ಲಿರುವ ಕನ್ನಡ, ತೆಲುಗು ಹಾಗೂ ಅವುಗಳಲ್ಲಿರುವ ದ್ರಾವಿಡ ರೂಪಗಳ ವೈಶಿಷ್ಟ್ಯಗಳನ್ನು ಗುರುತಿಸಲಾಗಿದೆ.

1.0. ದ್ವಿಭಾಷಾ ಶಾಸನಗಳು : ಪ್ರದೇಶ ಹಾಗೂ ರಾಜಕೀಯ ಹಿನ್ನಲೆ

ದ್ವಿಭಾಷಾ ಶಾಸನಗಳ ಭಾಷಾ ಸ್ವರೂಪದೊಡನೆ, ಆ ಶಾಸನಗಳು ರಚನೆಯಾದ ರಾಜಕೀಯ ವಿವರಗಳನ್ನು ತಿಳಿದರೆ, ಆ ಕಾಲದ ಭಾಷೆಯ ಸ್ವರೂಪವನ್ನು ಅರಿಯಲು ಸಾಧ್ಯವಾಗುತ್ತದೆ. ಮೇಲೆ ತಿಳಿಸಿದ ಐದು ದ್ವಿಭಾಷಾ ಶಾಸನಗಳು ಕನ್ನಡ-ತೆಲುಗು ದ್ವಿಭಾಷಾ ಪ್ರಾಂತ್ಯಗಳಲ್ಲಿ ದೊರತಿವೆ. ಕರ್ನಾಟಕದ ಇಂದಿನ ಕೋಲಾರ ಜಿಲ್ಲೆಯು ಬಹಳ ಹಿಂದಿನಿಂದಲೂ ಬಹುಭಾಷಾ ಪ್ರದೇಶವಾಗಿದೆ. ಕೋಲಾರದ ಕೆಜಿಎಫ್, ಮಾಲೂರು ಪ್ರದೇಶಗಳಲ್ಲಿ ತಮಿಳಿನ ಪ್ರಭಾವವಿದ್ದರೆ, ಮುಳಬಾಗಿಲು, ಶ್ರೀನಿವಾಸಪುರ, ಬಾಗೇಪಲ್ಲಿ, ಗೋರಿಬಿದನೂರುಗಳಲ್ಲಿ ತೆಲುಗು ನುಡಿಯ ಪ್ರಭಾವವಿದೆ. ಕೋಲಾರಕ್ಕೆ ಅಂಟಿಕೊಂಡಿರುವ ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯು ಸಹ ದ್ವಿಭಾಷಿಕ ಪ್ರದೇಶವಾಗಿತ್ತು ಎಂಬುದಕ್ಕೆ ಅಲ್ಲಿ ದೊರತಿರುವ ದ್ವಿಭಾಷಿಕ ಶಾಸನಗಳಿಂದ ಗುರುತಿಸಬಹುದು.

'ಕಲಕಡ' ಹಾಗೂ 'ವೆಲಿಗಲ್ಲು' ಶಾಸನಗಳು ಚಿತ್ತೂರು ಜಿಲ್ಲೆಯ ಕ್ರಮವಾಗಿ ವಾಯಲಪಾಡು, ಮದನಪಲ್ಲಿ ತಾಲ್ಲೂಕುಗಳಲ್ಲಿ ಸಿಕ್ಕಿವೆ. ಇವು ಕ್ರಿ.ಶ.ಒಂಬತ್ತನೇ ಶತಮಾನಕ್ಕೆ ಸೇರಿದ 'ವೀರಗಲ್ಲು'ಶಾಸನಗಳಾಗಿವೆ. ಇವೆರಡು ಶಾಸನಗಳು ವೈದುಂಬ ಅರಸ ಗಣ್ಡ ತ್ರಿಣೇತ್ರನ ಆಳ್ವಿಕೆಯನ್ನು ಹೇಳುತ್ತವೆ. ಇವರ ದ್ವಿಭಾಷಾ ಶಾಸನಗಳಿಗೆ ವಿಶೇಷವಾದ

ಸ್ಥಾನವಿದೆ. 'ಅಕನೂರು' ಶಾಸನವು ವಾರಂಗಲ್ ಜಿಲ್ಲೆಯ ಜನಗಾಂ ತಾಲ್ಲೂಕಿನಲ್ಲಿದೆ. ಇದನ್ನು ಕೊಳ್ಳಿಪಾಕೆನಾಡು-2000 ಅನ್ನು ಆಳುತ್ತಿದ್ದ ಮಹಾಸಾಮಂತ ಅರಸ ಸಂಕರಗಂಡರಸನ ಸಾಮಂತನಾದ ಇಂದು ಪಯ್ಯನ ಆಳ್ವಿಕೆಯಲ್ಲಿ ಹಾಕಿಸಲಾಗಿದೆ. ಇದು ಕೊಳ್ಳಿಪಾಕೆಯ ಪಿರಿಯ ಬಸದಿಗೆ ಕೊಟ್ಟ ಭೂಮಿ ದತ್ತಿಯನ್ನು ಪ್ರಸ್ತಾಪಿಸಿದೆ.

'ಅರಕಟವೇಮುಲ' ಶಾಸನವು ಕಡಪ ಜಿಲ್ಲೆಯ ಪ್ರೊದ್ದಟೂರು ತಾಲ್ಲೂಕಿನಲ್ಲಿದೆ. ಇದು ಕ್ರಿ.ಶ.ಒಂಬತ್ತನೆ ಶತಮಾನದಲ್ಲಿ ರಚಿತವಾಗಿದೆ. ಈ ಶಾಸನ ರಾಷ್ಟ್ರಕೂಟರ ಶ್ರೀವಲ್ಲಭನನ್ನು ತಿಳಿಸುತ್ತದೆ. ಮತ್ತೊಂದು 'ಕುರ್ಕ್ಯಾಲ' ಶಾಸನವಾಗಿದೆ. ಇದು ಕರೀಂನಗರ ಜಿಲ್ಲೆಯ ಅದೇತಾಲ್ಲುಕಿನ ಕುರ್ಕ್ಯಾಲ ಹಳ್ಳಿಯ ಹತ್ತಿರವಿರುವ ಬೊಮ್ಮಲಮ್ಮ ಗುಟ್ಟದ ಮೇಲಿನ ಶಾಸನವಾಗಿದೆ. ಇದು ಕನ್ನಡ ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದ ಮಹತ್ತ್ವದ ಆಕರವಾಗಿದೆ. ಇದನ್ನು ವೇಮುಲವಾಡದ ಚಾಲುಕ್ಯರ ಎರಡನೇ ಅರಿಕೇಸರಿಯ ಕಾಲವನ್ನು ತಿಳಿಸುತ್ತದೆ. ಇದು ಕ್ರಿ.ಶ.ಹತ್ತನೇ ಶತಮಾನಕ್ಕೆ ಸೇರಿದ ಶಾಸನವಾಗಿದೆ.

1.1. ದ್ವಿಭಾಷಾ ಶಾಸನಗಳ ಸೃಷ್ಟಿಗೆ ಕಾರಣಗಳು

ದ್ರಾವಿಡ ಭಾಷೆಗಳಾದ ಕನ್ನಡ, ತೆಲುಗು ಹಾಗೂ ತಮಿಳು ಭಾಷೆಗಳು ಒಳಗೊಂಡಿರುವ ಪ್ರದೇಶಗಳೆಂದರೆ: ಕರ್ನಾಟಕದ ಕೋಲಾರ, ಆಂಧ್ರದ ಚಿತ್ತೂರು, ಅನಂತಪುರ ಮತ್ತು ತಮಿಳುನಾಡಿನ ಉತ್ತರ ಆರ್ಕಾಟ್ ಜಿಲ್ಲೆಗಳಾಗಿವೆ. ಇದಕ್ಕೆ ಉದಾಹರಣೆಗಳೆಂದರೆ ಚಿತ್ತೂರಿನಲ್ಲಿ ದೊರೆತಿರುವ ವೆಲಿಗಲ್ಲು, ಕಲಕಡ ಶಾಸನಗಳಲ್ಲಿ ಬಳಕೆಯಾಗಿರುವ ಕನ್ನಡ-ತೆಲುಗು ದ್ವಿಭಾಷಾ ಶಾಸನಗಳಾಗಿವೆ. ಆದರೆ ಉತ್ತರ ಆರ್ಕಾಟ್ ಜಿಲ್ಲೆಯ ಕ್ರಿ.ಶ.8 ಮತ್ತು 9ನೇ ಶತಮಾನಗಳ ತಮಿಳು ಶಾಸನಗಳನ್ನು ಗಮನಿಸಿದಾಗ ಸಂಸ್ಕೃತ ಭಾಷೆಯ ಛಾಯೆ ಇರುವುದು ತಿಳಿದು ಬರುತ್ತದೆ.

ದ್ವಿಭಾಷಾ ಪ್ರಾಂತಗಳಲ್ಲಿ ಎರಡು ಭಾಷೆಗಳ ಪರಸ್ಪರ ಸಂಪರ್ಕದಿಂದ ಶಾಸನಗಳಲ್ಲಿ ಕೊಡುಕೊಳು ನಡೆದಿರುವುದು ಕಂಡು ಬಂದಿದೆ. ದ್ವಿಭಾಷಾ ಶಾಸನಗಳು ಉಂಟಾಗಲು ಕೆಳಗಿನ ಅಂಶಗಳು ಕಾರಣವಾಗುತ್ತವೆ. "ಒಂದು ಪ್ರದೇಶದಲ್ಲಿ ಯಾವುದೇ ಭಾಷೆಯ ಶಾಸನ ದೊರೆಯ ಬೇಕಾದರೆ ಪ್ರಧಾನವಾಗಿ ಎರಡು ಕಾರಣಗಳಿರುತ್ತವೆ.

1. ಅದು ಆ ಪ್ರದೇಶವನ್ನು ಆಳುತ್ತಿರುವ ಅರಸರ ಭಾಷೆಯಾಗಿರಬಹುದು.
2. ಅದು ಆ ಪ್ರದೇಶದ ಜನ ಆಡುತ್ತಿರುವ ಭಾಷೆಯಾಗಿರಬಹುದು."[6]

ದ್ವಿಭಾಷಾ ಶಾಸನಗಳನ್ನು ಹಾಕಿಸಲು ಇವುಗಳಲ್ಲದೆ ಉಳಿದೆರಡು ಕಾರಣಗಳು ಕಂಡು ಬರುತ್ತವೆ. ಅವು ಹೀಗಿವೆ;

1.2. ರಾಜಕೀಯ ಸಂಪರ್ಕ

ಕೋಲಾರ, ಮುಳಬಾಗಿಲು, ಬಾಗೇಪಲ್ಲಿ, ಚಿಂತಾಮಣಿ, ಮಾಲೂರು, ಬೌರಿಂಗ್‌ಪೇಟ್, ಆಂಧ್ರದ ಚಿತ್ತೂರು ಜಿಲ್ಲೆಯ ಮದನಪಲ್ಲಿ, ಪುಂಗನೂರು, ಕುಪ್ಪಂ, ವಾಯಲ್ಪಾಡು ಇವು ದ್ವಿಭಾಷಾ ಪ್ರಾಂತಗಳಾಗಿ ತೋರಿ ಬಂದಿವೆ. ಈ ಪ್ರದೇಶಗಳಲ್ಲಿ ರಾಜಕೀಯವಾಗಿ ಕ್ರಿ.ಶ.9-10ನೇ ಶತಮಾನದ ತೆಲುಗು ಚೋಡರ[7] ಪ್ರಭಾವವಾಗಿರುವುದಕ್ಕೆ ಆಧಾರಗಳಿವೆ. ಕೋಲಾರದ ಕ್ರಿ.ಶ.7-8ನೇ ಶತಮಾನದ ಮುಳಬಾಗಿಲು[8], ಚಿತ್ತೂರಿನ ಚಂದ್ರಗಿರಿ[9], ಕ್ರಿ.ಶ.845ರ ಕಾಳಹಸ್ತಿ[10], ತಾಲ್ಲೂಕುಗಳಲ್ಲಿ ತಮಿಳು ಅರಸರಾದ ಪಲ್ಲವರ ಪ್ರಭಾವವಾಗಿರುವುದು ಕಂಡು ಬರುತ್ತದೆ.

ಕೋಲಾರದ ಗೌರಿಬಿದನೂರು[11], ಮುಳಬಾಗಿಲು[12], ಆಂಧ್ರದ ಅನಂತಪುರದ ಬೂದಲಿ[13], ಚಿತ್ತೂರಿನ ಕರ್ಶನಪಲ್ಲಿ[14], ಮದನಪಲ್ಲಿಯ ಕ್ರಿ.ಶ.8ನೇ ಶತಮಾನದ ಚಿಪ್ಪಲಿಯ[15] ಶಾಸನಗಳಲ್ಲಿ ತಮಿಳುನಾಡಿನ ಚೋಳರ ಆಳ್ವಿಕೆಯು ಸ್ಪಷ್ಟವಾಗಿದೆ.

ಅವಿಭಜಿತ ಕೋಲಾರದ ಬಾಗೇಪಲ್ಲಿ ಹಾಗೂ ಉತ್ತರಕ್ಕೆ ಕಡಪ ಪ್ರದೇಶದಲ್ಲಿ ತೆಲುಗು ಚೋಡರು ಆಳ್ವಿಕೆ ನಡೆಸುತ್ತಿದ್ದುದನ್ನು ಶಾಸನಗಳು ಆಧಾರವನ್ನು ಒದಗಿಸುತ್ತವೆ[16]. ಇವುಗಳಲ್ಲದೆ "ಕ್ರಿ.ಶ.ಸು.350ರ ಕಾಲಕ್ಕಾಗಲೇ ಇಂದಿನ ತಮಿಳುನಾಡಿನ ಬಾರಾಘಾಟ್, ಬಾಲಾಮಹತ್ ಪ್ರದೇಶಗಳು ಪ್ರಾಚೀನ ಕರ್ನಾಟಕದ ಅವಿಭಾಜ್ಯ ಭಾಗವಾಗಿ ಕರ್ನಾಟಕದ ಗಂಗರಸರ ಅಧೀನದಲ್ಲೇ ಬಹುಕಾಲ ಇದ್ದದ್ದು ಸರಿಯಷ್ಟೆ."[17]

1.3. ವ್ಯಾಪಾರ ಸಂಪರ್ಕ

ಕೋಲಾರ ಪ್ರದೇಶವು ಚೋಳರ ಕಾಲಕ್ಕೂ ಹಿಂದಿನಿಂದಲೂ ಒಂದು ವ್ಯಾಪಾರ ಪ್ರದೇಶವಾಗಿತ್ತು. ಅವರ ಕಾಲದಲ್ಲಿ ಮುಖ್ಯವಾಗಿ ಕಾಂಚೀಪುರಂ(ಕಂಚಿ) ಜೊತೆ ವ್ಯಾಪಾರ ನಂಟನ್ನು ಹೊಂದಿತ್ತು. ಹಾಗೆಯೇ ತೆಲುಗು ಭಾಷಿಕರ ಜೊತೆ ಉತ್ತಮ ವ್ಯಾಪಾರದ ಸಂಬಂಧವಿತ್ತು ಎಂಬ ಸುಳಿವು 'ಪ್ರಾಚೀನಪಥ'ವು ಕೊಡುತ್ತದೆ. ಕೋಲಾರ ಜಿಲ್ಲೆಯ ಕನ್ನಡ ಶಾಸನಗಳಲ್ಲಿ 'ವಡುಗವಟಿ' ಎಂಬ ಪ್ರಯೋಗವನ್ನು ಗುರುತಿಸಬಹುದು. ಉತ್ತರಾ ಪಥಾ, ದಕ್ಷಿಣಾ ಪಥಗಳಿರುವಂತೆ 'ಆಂಧ್ರಪಥಾ'ವೆಂಬುದಿದೆ. ಅದು ಆಂಧ್ರ ಪ್ರದೇಶವನ್ನು ಸೂಚಿಸುತ್ತದೆ. ಅಂದರೆ ಆಂಧ್ರಕ್ಕೆ ಹೋಗುವ ದಾರಿ ಎಂದು ತಿಳಿದು ಬರುತ್ತದೆ. ಅದು "ಪ್ರಾಚೀನ ಕಾಲದಲ್ಲೂ ಕಾಂಚೀಪುರವನ್ನು ಚಂಗಲ್ ಮತ್ತು ನೆಲ್ಲೂರು ಜಿಲ್ಲೆಗೆ ಸೇರಿಸುವ ಮಾರ್ಗವೊಂದು ಇದ್ದಿರಬೇಕು"18.

1.4. ಶಾಸನ: ದ್ವಿಭಾಷಿಕತೆ

ಚಿತ್ತೂರು ಜಿಲ್ಲೆಯ ವಾಯಲ್ಪಾಡು ತಾಲೂಕಿನಲ್ಲಿ ದೊರಕಿರುವ 'ಕಲಕಡಶಾಸನ'ವು ಕ್ರಿ.ಶ.9ನೇ ಶತಮಾನದ ಹಳಗನ್ನಡ ಭಾಷೆಯಲ್ಲಿದೆ. ಇದು ಕನ್ನಡ–ಸಂಸ್ಕೃತಭೂಯಿಷ್ಠಬರಹದ 28 ಸಾಲುಗಳುಳ್ಳ ತ್ರಿಭಾಷಾ ಶಾಸನವಾಗಿದೆ. ಇದು 1–3, 7–11,20–28ರವರಗಿನಸಾಲುಗಳು 'ಹಳಗನ್ನಡ', 4–6ರ ವರೆಗಿನ ಸಾಲುಗಳು 'ಹಳೇತೆಲುಗು', 12–19ರವರೆಗೆ 'ಸಂಸ್ಕೃತಭಾಷೆ'ಯಿಂದ ಕೂಡಿವೆ. ಹಳಗನ್ನಡ ಭಾಷೆಯಲ್ಲಿ ಸಂಸ್ಕೃತ, ತೆಲುಗು ನುಡಿಗಳನ್ನು ಬಳಸಿರುವುದರಿಂದ ಇದು ಮಿಶ್ರ ಭಾಷಾ ಪಾಠವನ್ನು ಸಾದರ ಪಡಿಸುತ್ತವೆ.

ಚಿತ್ತೂರು ಜಿಲ್ಲೆ, ಮದನಪಲ್ಲಿ ತಾಲ್ಲೂಕಿನ 'ವೆಲಿಗಲ್ಲು' ಹಳ್ಳಿಯಲ್ಲಿ ಸಿಕ್ಕಿರುವ ಕ್ರಿ.ಶ.9ನೇ ಶತಮಾನದ ಶಾಸನವು ದ್ವಿಭಾಷಾ ಶಾಸನವಾಗಿದೆ. ಶಾಸನದ 1–5 ಹಾಗೂ 14–16 ನೇ ಸಾಲುಗಳು 'ಹಳೇತೆಲುಗು' ನುಡಿಯಲ್ಲಿವೆ. 6–14 ಸಾಲುಗಳು 'ಹಳಗನ್ನಡ'ದಿಂದ ಕೂಡಿವೆ. ಕೆಲವು ಹೆಸರು, ಮತ್ತು ಸ್ಥಳನಾಮ ಅಲ್ಲಿನ ಸ್ಥಳೀಯ ನುಡಿಯಲ್ಲಿವೆ. ಇದೊಂದು ಸಂಸ್ಕೃತ ಭೂಯಿಷ್ಠ ಕಲ್ಬರಹವಾಗಿರದೆ, ಹಳಗನ್ನಡ ಮತ್ತು ಪ್ರಾಚೀನ ತೆಲುಗು ಭಾಷೆಗಳ ಪದಗಳು ಹೆಚ್ಚು ಬಳಸಿರುವ ನಿದರ್ಶನಗಳಿವೆ. ಇವುಗಳ ಜೊತೆಗೆ ಪ್ರಾಕೃತದ ಕೆಲವು ಸ್ಪಷ್ಟ ನಿದರ್ಶನಗಳು ದಾಖಲಾಗಿವೆ. ತೆಲುಗು ನುಡಿಯಲ್ಲಿ ಬರೆದಿರುವ ಪದಗಳು ಸ್ಪಷ್ಟವಾಗಿ ಪರಿಚಯವಾಗುತ್ತದೆ. ಆದರೆ ಹಳಗನ್ನಡ ಬಳಸಿರುವ ಸಾಲುಗಳಲ್ಲಿ ಅಸ್ಪಷ್ಟ ಪದಗಳ ಪ್ರಯೋಗಗಳನ್ನು ಅದು ಒಳಗೊಂಡಿದೆ.

ವಾರಂಗಲ್ ಜಿಲ್ಲೆಯ ಜನಗಾಂ ತಾಲ್ಲೂಕು ಅಕನೂರು ಹಳ್ಳಿಯಲ್ಲಿ ಸಿಕ್ಕಿರುವ ಕ್ರಿ.ಶ.ಸು.9ನೇ ಶತಮಾನದ ಶಾಸನವು ದ್ವಿಭಾಷಾ ಶಾಸನವಾಗಿದೆ. ಶಾಸನದ ಮೊದಲನೆಯ ಮತ್ತು ಎರಡನೆಯ ಮುಖದಲ್ಲಿ ಹಳಗನ್ನಡದ 29 ಚಿಕ್ಕ ಚಿಕ್ಕ ಸಾಲುಗಳಿವೆ. ಶಾಸನದ ಮೂರನೇಯ ಮುಖದಲ್ಲಿ 19 ಚಿಕ್ಕ ಚಿಕ್ಕ ಸಾಲುಗಳು ಪ್ರಾಚೀನ ತೆಲುಗು ಭಾಷೆಯಲ್ಲಿವೆ.

'ಅರಕಟವೇಮುಲ' ಶಾಸನವು ಕ್ರಿ.ಶ.ಸುಮಾರು 9ನೇಶತಮಾನಕ್ಕೆ ಸೇರಿಸಬಹುದು. ಇದು ರಾಷ್ಟ್ರಕೂಟರ ಅಮೋಘವರ್ಷನು ಆಳುತ್ತಿದ್ದನು ಎಂಬುದನ್ನು ಶಾಸನದಲ್ಲೇ ಉಲ್ಲೇಖಿಸಲಾಗಿದೆ. ಇದು ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿದೆ. ಮೊದಲನೇ ಭಾಗದ ಎರಡು ಸಾಲುಗಳು ಹಳಗನ್ನಡದಲ್ಲಿ ರಚಿತವಾಗಿವೆ. ಅನಂತರ ಪ್ರಾಚೀನ ತೆಲುಗು ನುಡಿಯನ್ನು ಹೋಲುವಂತಹ 3 ಸಾಲುಗಳಿವೆ. ಶಾಸನದ ಕೊನೆಯ ಎರಡು ಸಾಲುಗಳು ಸಂಸ್ಕೃತ ಮೂಲದ ಶ್ಲೋಕವೊಂದು ರಚಿತವಾಗಿದೆ.

'ಕುರ್ಕ್ಯಾಲ' ಶಾಸನವು ಕ್ರಿ.ಶ. ಹತ್ತನೇ ಶತಮಾನದಲ್ಲಿ ಆಳ್ವಿಕೆ ನಡೆಸುತ್ತಿದ್ದವೇ ಮುಲವಾಡದ ಚಾಲುಕ್ಯ ಅರಸ 'ಎರಡನೇ ಅರಿಕೇಸರಿ'ಯ ಅಮೂಲ್ಯವಾದ ಶಾಸನವಾಗಿದೆ. ಶಾಸನದಲ್ಲಿ ಮೂರು 'ಸಂಸ್ಕೃತಪದ್ಯ'ಗಳೂ, ಆರು 'ಕನ್ನಡಪದ್ಯ'ಗಳೂ ಹಾಗೂ ಮೂರು 'ಪ್ರಾಚೀನ ತೆಲುಗು ಕಂದ' ಪದ್ಯಗಳು ಇದರಲ್ಲಿವೆ. ಈ ಶಾಸನದಲ್ಲಿ ಕನ್ನಡ ಮತ್ತು ಸಂಸ್ಕೃತ ಭಾಷೆಗಳು ಸರಿಯಾಗಿ ಬರೆಯಲ್ಪಟ್ಟಿವೆ.

2.0. ಭಾಷಿಕ ವಿಶ್ಲೇಷಣೆ

ಕ್ರಿ.ಶ.8,9,10ನೇ ಶತಮಾನದಲ್ಲಿ ದ್ವಿಭಾಷಾ ಶಾಸನಗಳು ದೊರೆತಿವೆ. ಕಲಕಡ, ವೆಲಿಗಲ್ಲು, ಆಕನೂರು, ಅರಕಟವೇಮುಲ, ಹಾಗೂ ಕುರ್ಕ್ಯಾಲ ಶಾಸನಗಳಲ್ಲಿ ಅದೇ ಕಾಲದ ಕರ್ನಾಟಕದ ಬೇರೆ ಭಾಗದ ಶಾಸನಗಳಲ್ಲಿ ಸಿಗುವ ಪ್ರಯೋಗಗಳು ಇವುಗಳಲ್ಲಿ ದೊರೆತಿವೆ. ಈ ದ್ವಿಭಾಷಾ ಶಾಸನಗಳಲ್ಲಿ ಪ್ರಯೋಗವಾಗಿರುವ ತೆಲುಗು ಭಾಷೆಯನ್ನು ಗಮನಿಸಿದಾಗ, ಆಂಧ್ರಪ್ರದೇಶದ ಕ್ರಿ.ಶ.7 ಹಾಗೂ 8ನೇ ಶತಮಾನಗಳ ಶಾಸನಗಳಲ್ಲಿನ ಪ್ರಾಚೀನ ವೈಶಿಷ್ಟ್ಯಗಳು ಹೆಚ್ಚಾಗಿ ಉಳಿದಿರುವುದು ಕಂಡುಬರುತ್ತದೆ. ಅಲ್ಲದೇ ಮೇಲಿನ ದ್ವಿಭಾಷಾ ಶಾಸನಗಳಲ್ಲಿ ವಿಶೇಷವಾಗಿ ದ್ರಾವಿಡ ಭಾಷೆಯ ಪದ ಪ್ರಯೋಗಗಳು ತೋರಿ ಬಂದಿವೆ. ಕನ್ನಡ ಹಾಗೂ ತೆಲುಗು ಭಾಗಗಳಲ್ಲಿ ಹೆಚ್ಚಾಗಿ ಕಂಡು ಬರುತ್ತವೆ.

2.1. ದ್ರಾವಿಡದಿಂದ ತೆಲುಗು ಬೇರೆಯಾಗಿ ರೂಪುಗೊಂಡ ಬಗೆ:

ತೌಲನಿಕ ವಿಧಾನದಿಂದ ಭಾಷೆಗಳನ್ನು ಬೇರೆ ಬೇರೆ ಭಾಷಾ ಗುಂಪುಗಳಾಗಿ ವಿಂಗಡಿಸಬಹುದು. "ಈ ರೀತಿ ಭಾಷಾ ಕುಟುಂಬವೊಂದರಲ್ಲಿ ಸೇರಿಸುವ ಭಾಷೆಗಳನ್ನೆಲ್ಲ ಒಂದೇ ಒಂದು ಮೂಲ ಭಾಷೆಯಿಂದ ಚಾರಿತ್ರಿಕವಾಗಿ ಸಾಧಿಸಲು ಸಾಧ್ಯವಿದೆ."19 ಕನ್ನಡ, ತಮಿಳು, ತೆಲುಗು, ತೋದ, ಗೋಂಡಿ, ಕುವಿ, ಮೊದಲಾದ ಮೂವತ್ತಕ್ಕೂ ಹೆಚ್ಚು ಭಾಷೆಗಳನ್ನು 'ದ್ರಾವಿಡ' ಭಾಷಾ ಗುಂಪಿಗೆ ಸೇರಿಸಲಾಗಿದೆ. ಇಪ್ಪತ್ತೊಂದನೇ ಶತಮಾನದಲ್ಲಿ ಭಾಷಾ ವಿಜ್ಞಾನಿಗಳು 'ಮೂಲ ದ್ರಾವಿಡ'ವೆಂಬ ಮೂಲ ಭಾಷೆಯಿಂದ ಚಾರಿತ್ರಿಕವಾಗಿ ಮೇಲಿನ ಭಾಷೆಗಳನ್ನು ಸಾಧಿಸಲು ಪ್ರಯತ್ನಿಸಿದ್ದಾರೆ.

'ಮೂಲ ದ್ರಾವಿಡ ಭಾಷೆಯಿಂದ ಮೂರು ಪ್ರಾದೇಶಿಕ ಗುಂಪುಗಳಾಗಿ ಒಡದಿವೆ. ಅವುಗಳಲ್ಲಿ 'ದಕ್ಷಿಣ ದ್ರಾವಿಡ' ವೆಂಬ ಪ್ರಧಾನ ಗುಂಪಾಗಿ ಮೊದಲು ಬೇರ್ಪಟ್ಟಿತು. ಇದು

ಪ್ರಧಾನವಾಗಿ ಎರಡು ಗುಂಪುಗಳಾಗಿ ಪ್ರತ್ಯೇಕಗೊಂಡಿತು. ಒಂದು. ಮೂಲ ದಕ್ಷಿಣ ದ್ರಾವಿಡ I. ಎರಡು. ಮೂಲ ದಕ್ಷಿಣ ದ್ರಾವಿಡ II. ಇವುಗಳಲ್ಲಿ ಕ್ರಮವಾಗಿ ಕನ್ನಡ, ತಮಿಳು ಮೊದಲ ಶಾಖೆಯಿಂದ, ತೆಲುಗು, ಗೋಂಡಿ, ಕುವಿ, ಮೊದಲಾದ ಭಾಷೆಗಳು ಎರಡನೇ ಶಾಖೆಯಿಂದ ಪ್ರತ್ಯೇಕಗೊಂಡವು'. (ಕೃಷ್ಣಮೂರ್ತಿ.ಭ, 2003. 21) ಎಂದು ಈಗಾಗಲೇ ವಿದ್ವಾಂಸರು ಗುರುತಿಸಿದ್ದಾರೆ. ಮುಂದೆ ಇವುಗಳ ಬದಲಾದ ಸ್ವರೂಪ ಎಂತಹದ್ದು ಎಂಬುದನ್ನು ಗುರುತಿಸಲು ಶಾಸನಗಳನ್ನು ಆಧಾರವಾಗಿ ಬಳಸಲು ಸಾಧ್ಯವಿದೆ.

ದ್ರಾವಿಡದಿಂದ ತೆಲುಗು ಭಾಷೆಯು ಬೇರೆಯಾಗುವ ಸಂದರ್ಭದಲ್ಲಿ ಎಂತಹ ಬದಲಾವಣೆಗಳು ನಡೆದಿವೆ, ಅವುಗಳ ಸ್ವರೂಪವೇನು ಎಂಬುದನ್ನು ದ್ವಿಭಾಷಿಕ ಶಾಸನಗಳ ಮೂಲಕ ಹೇಳಲು ಸಾಧ್ಯ. ಮೂಲ ದ್ರಾವಿಡದಿಂದ ತೆಲುಗು ಭಾಷೆ ಬೇರೆಯಾಗಿರುವ ಬಗೆಯನ್ನು ಭಾಷಾ ವಿಜ್ಞಾನದ ಹಿನ್ನಲೆಯಲ್ಲಿ ಯಾವ ಬಗೆಯ ಬದಲಾವಣೆಗಳು ನಡೆದವು ಎಂಬುದನ್ನು ಈ ಕೆಳಗೆ ಸ್ಥೂಲವಾಗಿ ವಿಶ್ಲೇಷಿಸಲಾಗಿದೆ.

2.1.1.'ಆಳ್' ಸ್ತ್ರೀಲಿಂಗ ದ್ರಾವಿಡ ರೂಪ:– ದ್ರಾವಿಡ ಭಾಷೆಗಳಲ್ಲಿ ನಾಮವಾಚಕಗಳು ಎರಡು ಬಗೆಯಲ್ಲಿವೆ. ತಮಿಳಿನಲ್ಲಿ 'ಉಯರ್ ತಿಣೈ', 'ಅಟ್ರಿಣೈ' ಎಂದೂ, ತೆಲುಗಿನಲ್ಲಿ 'ಮಹತ್ತು' ಹಾಗೂ 'ಅಹಮತ್' ಎಂಬುದಾಗಿ ಕರೆಯಲಾಗುತ್ತದೆ. ಆದರೆ ತೆಲುಗಿನಲ್ಲಿ ಸ್ತ್ರೀಯನ್ನು ಸೂಚಿಸುವ ಪ್ರತ್ಯೇಕ ಪ್ರತ್ಯಯಗಳಿಲ್ಲ. ಸ್ತ್ರೀ ಸೂಚಕ ಪ್ರತ್ಯಯಗಳಾದ ಏಕವಚನ ಅಹಮತ್‌ನಲ್ಲೂ, ಬಹುವಚನ ಮಹತ್ ಗುಂಪಿನಲ್ಲೂ ಏರ್ಪಟ್ಟಿವೆ. ಪ್ರಾಚೀನ ತೆಲುಗು ಶಾಸನಗಳಲ್ಲಿ ಸ್ತ್ರೀ ಸೂಚಕ ಪದ ಪ್ರಯೋಗವಿಲ್ಲ. ಆದರೆ ಚಿತ್ತೂರು ಜಿಲ್ಲೆಯ ಕಲಕಡ ಶಾಸನದಲ್ಲಿ ಸ್ತ್ರೀಲಿಂಗ ಸೂಚಕ 'ಆಳಿನಿ'(=ಹೆಂಡತಿ) ಏಕವಚನ ರೂಪ ಉಲ್ಲೇಖವಿದೆ.

ಹತ್ತನೇ ಶತಮಾನದವರೆಗಿನ ಕನ್ನಡ ಶಾಸನಗಳಲ್ಲಿ ಸ್ತ್ರೀಲಿಂಗ ಪ್ರತ್ಯಯವಾಗಿ(ಅ)–(ಆ)ಆಳ್ ಬಳಕೆಯಾಗಿದೆ.[20] 'ಆಳಿನಿ'ಪದದ ಪ್ರಾಚೀನ ರೂಪ ಆಳ್. ದ್ರಾವಿಡ ಭಾಷೆಗಳಲ್ಲಿ ತ.ಆಟ್ಟಿ(ಹೆಂಡತಿ), ಕ.ಆಡಂಗಿ, ತೆ.ಆಳು, ಆಟದಿ, ಆಡದಿ.[21] ಎಂಬ ಜ್ಞಾತಿ ಪದಗಳಿವೆ. ಆಳ್ ಎಂಬ ರೂಪವು ಮುಂದೆ ಡಕಾರವಾಗಿ ಆಡ (=ಸ್ತ್ರೀ) ರೂಪ ಮಾತ್ರ ತೆಲುಗಿನಲ್ಲಿ ಉಳಿದಿದೆ. [<PSDr *ಆಳ್–/*ಆಣ್–][22]

2.1.2. ಟ>ಡ:– ಮೂರ್ಧನ್ಯ ಟ'ಕಾರವು ಕನ್ನಡದಲ್ಲಿ ಘೋಷ ವರ್ಣವಾಗುತ್ತದೆ. ತೆಲುಗಿನಲ್ಲಿ ಕೂಡ ಈ ಲಕ್ಷಣ ಕಂಡ ಬಂದ ರೂವೆಲಿಗಲ್ಲು ಶಾಸನದಲ್ಲಿ ಮೂರ್ಧನ್ಯ ಟಕಾರದ ಪ್ರಯೋಗವಿದೆ. 'ಪೋಟುನ' ಪದವು ಯುದ್ಧ ಎಂಬರ್ಥವನ್ನು ಕೊಡುತ್ತದೆ. ಅಲ್ಲದೆ 'ಪೊಡುಚು'(=ಇರಿತ) ಅರ್ಥವೂ ಇದೆ. ದ್ರಾವಿಡ ನುಡಿಗಳಾದ ತ.ಪುಟೈಪು, ಕ.ಪೊಡೆ, ಕೊ.ಪೊಡ, ತೆ.ಪೊಡುಚು, ಪೋಟು[23] ಎಂಬ ಧಾತು ರೂಪಗಳು ಶಾಸನಗಳಲ್ಲಿ ಕಂಡು ಬರುತ್ತವೆ. ಅಘೋಷ ವರ್ಣವು ಘೋಷ ವರ್ಣವಾಗಿ ತಮಿಳನ್ನು ಬಿಟ್ಟು ಕನ್ನಡ, ತೆಲುಗು, ಕೊಡವ ಭಾಷೆಗಳಲ್ಲಿ ಉಂಟಾಗುತ್ತಿರುವುದನ್ನು ಇದು ಹೇಳುತ್ತಿದೆ.

2.1.3. ಣ>ನ:– ಮೂಲ ದ್ರಾವಿಡದ *ಣ ಕಾರವು ಪ್ರಾಚೀನ ತೆಲುಗು ಭಾಷೆಯಲ್ಲಿ "ಣ ಈ ಮೂರ್ಧನ್ಯನಾಸಿಕ ವರ್ಣವು ತೆಲುಗಿನಲ್ಲಿ ಸಾಮಾನ್ಯವಾಗಿ ದಂತ್ಯ ವರ್ಣ 'ನ'ಕಾರವಾಗುತ್ತದೆ."[24] 'ಈ ಬದಲಾವಣೆಯು ಕ್ರಿ.ಶ.7ನೇ ಶತಮಾನದಿಂದ ಆರಂಭವಾಗಿ 9ನೇ ಶತಮಾನಕ್ಕೆ ಪೂರ್ತಿಯಾಗಿದೆ' ಎಂದು ಡಾ.ಬೂದರಾಜು ರಾಧಾಕೃಷ್ಣ ಅವರು ಸೂಚಿಸಿದ್ದಾರೆ.[25] ಕ್ರಿ.ಶ.9ನೇ ಶತಮಾನದ ಹೊತ್ತಿಗೆಣಕಾರ ನಕಾರವಾಗಿದ್ದರೂ ಕೂಡ ಚಿತ್ತೂರು ಜಿಲ್ಲೆಯ ವೆಲಿಗಲ್ಲು ದ್ವಿಭಾಷಾ ಶಾಸನದಲ್ಲಿ 'ಪಣಿ' ಮತ್ತು ಕ್ರಿ.ಶ.825ರ ಚೆನ್ನರಾಯ

ನಿಪಲ್ಲಿಯಲ್ಲಿ ದೊರೆತಿರುವ ತೆಲುಗು ಶಾಸನ[26]ದಲ್ಲಿ 'ತಣ' ಪದಗಳಲ್ಲಿ ಪ್ರಾಚೀನ ರೂಪವಾದಣಕಾರದ ಕುರುಹುಗಳಾಗಿ ಈ ಪ್ರಯೋಗಗಳಿವೆ. [<PDr .ಪಣ್–][27] ಆಡು ಮಾತಿನ ಲಕ್ಷಣವನ್ನು ತಿಳಿಸುವಂತಹ ಹಲವು ಉದಾಹರಣೆಗಳಿವೆ.

ಕನ್ನಡ	ತೆಲುಗು
ಅಣ್ಣನ್	ಅನ್ನ
ಕಣ್	ಕನ್ನು ಮುಂತಾದವು.

3.0. ಕನ್ನಡದ ಪ್ರಭಾವ

ತೆಲುಗು ಭಾಷೆಯು ಮೊದಲಿನಿಂದಲೂ ಸಂಸ್ಕೃತ ಭಾಷೆಯ ಪ್ರಭಾವಕ್ಕೊಳಗಾಗಿದೆ. ಆದರೆ ಗಡಿ ಪ್ರದೇಶಗಳಲ್ಲಿ ತೆಲುಗು ಭಾಷೆಯ ಮೇಲೆ ಕನ್ನಡ ಪ್ರಭಾವ ಆಗಿರುವುದನ್ನು ಶಾಸನಗಳ ಮೂಲಕ ಗುರುತಿಸಬಹುದು. ತೆಲುಗು ಭಾಷೆಯು ಕನ್ನಡದ ಪ್ರಭಾವವನ್ನು ಪಡೆದರೂ ಕೂಡ ತನ್ನ ಸ್ವಂತಿಕೆಯನ್ನು ಪಡೆದಿದೆ. ಈ ಎರಡೂ ಭಾಷೆಗಳ ಧ್ವನಿ ಹಾಗೂ ಪದ ರಚನೆಯನ್ನು ಹೋಲಿಸುವುದರ ಮೂಲಕ ಕನ್ನಡದ ಪ್ರಭಾವವನ್ನು ಗುರುತಿಸಲಾಗಿದೆ.

3.1. ಪುರುಷವಾಚಕ ಸರ್ವನಾಮ 'ವಾನುಱ'

ತೆಲುಗು ಭಾಷೆಯಲ್ಲಿ ವಾನುಱ(=ವಾಡು(ಅವನು) ಎಂಬುದು ಪುರುಷ ವಾಚಕ ಸರ್ವನಾಮವಾಗಿದೆ. ದ್ವಿಭಾಷಾ ಶಾಸನದಲ್ಲಿ ಇದು ಪ್ರಥಮಾ ವಿಭಕ್ತಿ ಏಕವಚನದಲ್ಲಿ ಪ್ರಯೋಗವಾಗಿದೆ. ಇದು ತೆಲುಗು ಭಾಷೆಯ ಪ್ರಾಚೀನ ಸರ್ವನಾಮ ರೂಪವಾಗಿದೆ.[28] ಕ್ರಿ.ಶ.7 ಮತ್ತು 8ನೇ ಶತಮಾನಗಳ ಆದಿ ಭಾಗ[29]ದ ಶಾಸನಗಳಲ್ಲಿ ವಾಣ್ಡು ಎಂದು ಪ್ರಯೋಗವಾಗಿರುವುದು ಕಂಡು ಬರುತ್ತದೆ. ಇದಕ್ಕೆ ಕೋಲಾರ ಪ್ರದೇಶಗಳಲ್ಲಿ ಸಿಕ್ಕಿರುವ ಶಾಸನಗಳಲ್ಲಿ ಅವಂಗೆ[30], ಅವನ್ಗೆ[31] ಎಂಬ ಸಂವಾದಿ ಸರ್ವನಾಮ ರೂಪಗಳು ಬಳಕೆಯಾಗಿವೆ. ತೆಲುಗಿನ ಈ ಸರ್ವನಾಮ ಪ್ರಯೋಗವನ್ನು ಗಮನಿಸಿದರೆ ಮಿಕ್ಕ ದ್ರಾವಿಡ ಭಾಷೆಗಳಿಗಿಂತ ಬೇರೆಯಾಗಿ ಗೋಚರಿಸುತ್ತದೆ. ದಕ್ಷಿಣ ದ್ರಾವಿಡ ಭಾಷೆಗಳಾದ ಕನ್ನಡ, ತಮಿಳು, ಮಲೆಯಾಳಗಳಲ್ಲಿ 'ಅವನ್' ಎಂದಿದ್ದು, ತೆಲುಗು, ಕೊಲಾಮಿಗಳಲ್ಲಿ 'ವಾನುಱ', ರೂಪವಿದೆ. 'ಅವನ್' ಸರ್ವನಾಮದಲ್ಲಿರುವ ಪೂರ್ವದ ಅ ಸ್ವರವು ಅದರ ಮುಂದಿನ ವ್ಯಂಜನವಾದ ವಕಾರಕ್ಕೆ ಪ್ರಯುಕ್ತವಾದಾಗ 'ವಾ' ಎಂದು ದೀರ್ಘವಾಗುತ್ತದೆ. "ತಮಿಳಿನಲ್ಲಿನ 'ನಱ' ಇರುವೆಡೆಗಳಲ್ಲಿ (ಎಂದರೆ ಹ್ರಸ್ವಸ್ವರಕ್ಕೆ ಪರದಲ್ಲಿ ವಿಶೇಷವಾಗಿ) ಕನ್ನಡದಲ್ಲಿ 'ನ್ದ' ಇರುವುದು ಸಾಮಾನ್ಯ"[32]. ಇದೇ ರೀತಿ ತೆಲುಗಿನಲ್ಲಿ 'ನಱ'ದಲ್ಲಿದ್ವಿತ್ವ 'ಱ'ಕಾರವು ಮೂರ್ಧನ್ಯ ಉಚ್ಚಾರ ಸ್ಥಾನದಲ್ಲಿ ಹುಟ್ಟುವುದರಿಂದ ಬಹುಶಃ 'ಱ'ಕಾರವು ಡಕಾರವಾಗಿರುವ ಸಾಧ್ಯತೆಯಿದೆ. ಇದರ ನಿಷ್ಪತ್ತಿಯನ್ನು ಹೀಗೆ ಗುರುತಿಸಬಹುದು: 'ವಾನುಱ>ವಾನ್ಡು>ವಾಡು.

4.0. ಇತರ ದ್ರಾವಿಡ ಭಾಷೆಗಳಿಗಿಂತ ತೆಲುಗು ಭಿನ್ನವಾಗಿರುವ ಬಗೆ

ದಕ್ಷಿಣ ದ್ರಾವಿಡ ಭಾಷೆಗಳಾದ ಕನ್ನಡ, ತಮಿಳು ಮೊದಲಾದ ನುಡಿಗಳಿಗಿಂತ ತೆಲುಗು ಮಧ್ಯ ದ್ರಾವಿಡ ಭಾಷೆಯಾಗಿ ಹಲವು ವಿಷಯಗಳಲ್ಲಿ ಭಿನ್ನವಾಗಿದೆ. ಹಳೆಗನ್ನಡವನ್ನು ಮತ್ತು ಹಳೆತೆಲುಗು ಭಾಷೆಗಳನ್ನು ಹೋಲಿಸಿದಾಗ ಹೆಚ್ಚು ವಿಷಯಗಳಲ್ಲಿ ತೆಲುಗು ಬೇರೆಯಾಗಿ ರೂಪುಗೊಂಡಿದೆ. ಇದಕ್ಕೆ ಸಂಬಂಧಿಸಿದಂತೆ ಕ್ರಿ.ಶ.9, 10ನೇ ಶತಮಾನಗಳ

ಶಾಸನಗಳಲ್ಲಿ ಇದರ ಪ್ರಯೋಗಗಳಿವೆ. ಅಂತಹ ಪ್ರಯೋಗಗಳಲ್ಲಿ ಕೆಲವನ್ನು ಇಲ್ಲಿ ಗಮನಿಸಬಹುದು.

4.1. ಟ>ಡ:–

ಪ್ರಾಚೀನ ದ್ರಾವಿಡ ಭಾಷೆಗಳಲ್ಲಿನ 'ಟ'ಕಾರ ತೆಲುಗು ಮತ್ತು ಕನ್ನಡ ಭಾಷೆಗಳಲ್ಲಿ ಕ್ರಮವಾಗಿ 'ಡ'ಕಾರ, 'ಳ'ಕಾರಗಳಾಗಿ ಬದಲಾಗುತ್ತದೆ. ಕ್ರಿ.ಶ.9–10ನೇ ಶತಮಾನಗಳ ಶಾಸನಗಳಲ್ಲಿ ಕೆಲವು ಪದಗಳಲ್ಲಿ ಈ ಬದಲಾವಣೆಯನ್ನು ಕಾಣುತ್ತೇವೆ. ವೆಲಿಗಲ್ಲು ಶಾಸನದಲ್ಲಿ 'ತೋಟಿ'(=ತೆ.ತೋಟಿ) ಎಂಬ ಪ್ರಯೋಗವಿದೆ. ಇದಕ್ಕೆ 'ತೋಡಿ ಅಥವ ತೋಡ'[33] ಎಂಬ ರೂಪ ಅದೇ ಶತಮಾನಗಳ ಶಾಸನಗಳಲ್ಲೇನೇ ಕಾಣಿಸುತ್ತದೆ. (ತ.ತೋಟಿನ್, ತೋಟಿ; ತೆ.ತೋಡ,ತೋಡಿ; ಮ.ತೋಟಿನ್, ತೋಟಿ.) [<PDr and PCDr *ತೋಟ್–ಅ; PSಆಡಿ*ತೋ][34]ಹೀಗೆ ಟ>ಡವಾಗುವ ನಿಯಮ ಪದಗಳ ಕೊನೆಯಲ್ಲಿ ನಡೆಯುತ್ತದೆ. ಇದಕ್ಕೆ ದಕ್ಷಿಣ ದ್ರಾವಿಡ ಭಾಷೆಗಳ ಈಗಿನ ಆಡು ಮಾತಿನಲ್ಲಿ ಹಲವು ಉದಾಹರಣೆಗಳಿವೆ;

ತಮಿಳು	ಕನ್ನಡ	ತೆಲುಗು
ಕೋಟಿ	ಕೋಳಿ	ಕೋಡಿ
ಚೋಟ	ಚೋಳ	ಚೋಡ
ಏಟು	ಏಳ್	ಏಡು
ಚುಟ	ಸುಳಿ	ಸುಡಿ
ನೆಟಿಲ್	ನೆಳಲ್>ನೆರಳು	ನೀಡ

ಕ್ರಿ.ಶ.8–9ನೇ ಶತಮಾನದ ಶಾಸನಗಳಲ್ಲಿ ಸಂಖ್ಯಾವಾಚಿ ಏಟು ರೂಪವಿದ್ದು, ಅನಂತರದ ತೆಲುಗು ಶಾಸನಗಳಲ್ಲಿ 'ಏಡು' ಎಂಬ ಪ್ರಯೋಗವಿದೆ. ದ್ರಾವಿಡ ಭಾಷೆಗಳಾದ ತ;ಏಟು, ಮ;ಏಟು, ಕ; ಏಟು, ತು;ಏಳು, ತೆ; ಏಡು, ಕೊ.ಎಡ್, ಕು.ಒಡ್[35] ಪದಗಳಲ್ಲಿ ಎರಡು ಬಗೆಗಳು ಕಂಡು ಬರುತ್ತವೆ. ದಕ್ಷಿಣ ದ್ರಾವಿಡ ಭಾಷೆಗಳಲ್ಲಿ 'ಟ'ಕಾರವಿದ್ದು ದಕ್ಷಿಣ ಮಧ್ಯ ದ್ರಾವಿಡ ಭಾಷೆಗಳಲ್ಲಿ ಟಕಾರವಿರುವ ಕಡೆ ಡಕಾರವಾಗಿ ಬದಲಾಗಿರುವುದು ಈ ಎಲ್ಲಾ ಅಂಶಗಳಿಂದ ಸ್ಪಷ್ಟಪಡುತ್ತದೆ.

4.2.ಳ>ಲ:– ಪ್ರಾಚೀನ ತೆಲುಗು ಭಾಷೆಯ ವರ್ಣ ಬದಲಾವಣೆಗಳಲ್ಲಿ ಳ ಕಾರವು ಲಕಾರವಾಗುವುದು ಒಂದಾಗಿದೆ. ಆಡುಮಾತಿನಲ್ಲಿ ಇದಕ್ಕೆ ಹಲವು ಉದಾಹರಣೆಗಳು ದೊರೆಯುತ್ತವೆ. ಕುಳಮ್–ಕೊಲನು, ಆಳು–ಏಲು, ವಿಳಂಗು–ವೆಲುಗು ಮೊದಲಾದವು. ಈ ಪದಗಳಲ್ಲಿ ಪದಮಧ್ಯ, ಪದಾಂತ್ಯಗಳಲ್ಲಿ ಳಕಾರವಿರುವ ಕಡೆಗಳಲ್ಲಿ ಲಕಾರವಾಗಿರುವುದು ಕಾಣಿಸುತ್ತದೆ. ಶಾಸನಗಳಲ್ಲೂ ಈ ಬಗೆಯ ಪ್ರಯೋಗಗಳು ಕಂಡುಬರುತ್ತವೆ. ಪದಾಂತ್ಯ; ವೆಲಿಗಲ್ಲು ಶಾಸನದಲ್ಲಿ 'ಪಡಲ್' ಎಂಬ ಪದ ಪ್ರಯೋಗವಿದೆ. ಇದು 'ಪಡವಾಲು' ಪದದ ಮತ್ತೊಂದು ರೂಪವಾಗಿದೆ. ಇದರರ್ಥ 'ಸೇನಾಪತಿ'. ಇದು ದ್ರಾವಿಡ ಭಾಷೆಗಳಾದ ತಮಿಳು ಹಾಗೂ ಕನ್ನಡ ಭಾಷೆಗಳಲ್ಲಿ ಕ್ರಮವಾಗಿ ಪಟ್ಟೈಯಾಳ್, ಪಡವಾಳ್ ಪದಗಳು ಬಳಕೆಯಲ್ಲಿವೆ. [<PDr *ಪಟ– ಮತ್ತು *ಆಳ್–ವ್ಯಕ್ತಿ][36]. ಇದು ಪ್ರಾಕೃತದ ಭಡವಾಳೊ<ಸಂಸ್ಕೃತ ಭಟಪಾಲಃ[37] ಎಂಬ ಪದದಿಂದ ನಿಷ್ಪತ್ತಿಯಾಗಿರುವುದು ಕಂಡು ಬರುತ್ತದೆ. ಅದೇ ಶಾಸನದಲ್ಲಿ 'ವೆಳುಂಗು' ಎಂಬ ಪದದಲ್ಲಿ ಳ–ಲವಾಗಿ ಬದಲಾಗದೆ ಹಾಗೆಯೇ ಉಳಿದಿರುವ ಪ್ರಯೋಗವಿದೆ. 'ವೆಳುಂಗು' ಸ್ಥಳವಾಚಕ ಇಂದು 'ವೆಲಿಗಲ್ಲು'

ಎಂದಾಗಿದೆ. 'ವೆಳುಂಗು' ಪದವು ಮೂಲ ದ್ರಾವಿಡದ *ವೆಳ್– ಮೂಲ ರೂಪವಾಗಿದೆ.

4.3. ಱಕಾರ ದ್ವಿತ್ವ:– ಇದು ದ್ರಾವಿಡ ಭಾಷೆಗಳ ವಿಶಿಷ್ಟವಾದ ಧ್ವನಿ. ಹಳಗನ್ನಡದಲ್ಲಿದ್ದು ಹೊಸಗನ್ನಡದಲ್ಲಿ ರಕಾರವಾಗಿ ಬದಲಾಗಿದೆ. ಆದರೆ ತಮಿಳು, ಮಲೆಯಾಳಗಳಲ್ಲಿ ಈಗಲೂ ಬಳಕೆಯಲ್ಲಿದೆ. ಸೋಲಿಗರ ನುಡಿಯಲ್ಲಿ ಕೇವಲ ಧ್ವನಿ ಪ್ರಭೇದವಾಗಿ ಉಳಿದಿದೆ. ಕನ್ನಡದಲ್ಲಿ ಱಕಾರ ದ್ವಿತ್ವವಿಲ್ಲ. ಕುರ್ಕ್ಯಾಲ ಶಾಸನದಲ್ಲಿ 'ಱ'ಕಾರದ್ವಿತ್ವದಿಂದೊಡಗೂಡಿದ 'ಗುಣ್ಡಿಕಱಱ', 'ವೆಂಗಿಪಱಱ' ಪ್ರಯೋಗಗಳು ಕಂಡು ಬರುತ್ತವೆ. ಕನ್ನಡದಲ್ಲಿ ಈ ಶಾಸನಕ್ಕೂ ಪೂರ್ವದಲ್ಲಿ ಇಂಥ ಪ್ರಯೋಗಗಳಿಲ್ಲವೆಂದೂ ಅದು ತೆಲುಗಿನ ಪ್ರಭಾವದಿಂದ ಬಳಕೆಯಾಗಿದೆ ಎಂದು ಎಂ.ಬಿ.ನೇಗಿನಹಾಳ ಅವರು ಅಭಿಪ್ರಾಯ ಪಟ್ಟಿದ್ದಾರೆ.[38] ತೆಲುಗು ಶಾಸನಗಳಲ್ಲಿ ಱಕಾರ ದ್ವಿತ್ವವಿರುವ ಸ್ಥಳನಾಮಗಳು ಪ್ರಯೋಗಗೊಂಡಿವೆ. ಕೊಱಱಪಱು[39], ತಾಱುಪಱಱ[40], ಮಡಪಲ್ಲುಪಱಱ[41], ಮಲ್ಕಪಱಱ[42], ಮೊದಲಾದ ಪದಗಳಲ್ಲಿ ದ್ವಿತ್ವವಿದೆ. ಇಂಥ ದ್ವಿತ್ವಗಳಿಗೆ ಕಾರಣ ಬಹುಶಃ ಉಚ್ಚಾರಣೆಯಲ್ಲಿ ಸ್ವರದ ಮೇಲೆ ಬೀಳುವ ಒತ್ತು (ಆಘಾತ) ಎಂದು ಹೇಳಬಹುದು.

5.0. ಸಮಾರೋಪ

ಪ್ರಕೃತ ಪ್ರಬಂಧದ ಒಟ್ಟು ಚರ್ಚೆಯನ್ನು ಕೂಲಂಕುಷವಾಗಿ ಗಮನಿಸಿದಾಗ ಈ ಕೆಳಗಿನ ಅಂಶಗಳು ಕಂಡು ಬರುತ್ತವೆ:

– ಗಡಿ ಭಾಗದ ದ್ವಿಭಾಷಾ ಶಾಸನಗಳಲ್ಲಿ ಕನ್ನಡ ಮತ್ತು ತೆಲುಗು ಭಾಷೆಗಳ ಪರಸ್ಪರ ಕೊಡುಕೊಳ್ಳುವಿಕೆ ನಡೆದಿದೆ.

– ಈಗಿನ ಕೋಲಾರ ಹಾಗೂ ಚಿತ್ತೂರು ಜಿಲ್ಲೆಗಳು ಕ್ರಿ.ಶ.ಹತ್ತನೇ ಶತಮಾನದ ಹೊತ್ತಿಗೆ ದ್ರಾವಿಡ ಗಡಿಯ ಪ್ರದೇಶವಾಗಿತ್ತೆಂಬುದನ್ನು ದ್ವಿಭಾಷಾ ಶಾಸನಗಳಲ್ಲಿನ ದ್ರಾವಿಡ ಪದ ಪ್ರಯೋಗಗಳು ಎತ್ತಿ ತೋರಿಸಿವೆ.

– ಕ್ರಿ.ಶ.9–10ನೇ ಶತಮಾನದ ದ್ವಿಭಾಷಾ ಶಾಸನಗಳಲ್ಲಿನ ತೆಲುಗು ಪದ ಪ್ರಯೋಗಗಳು ತೆಲುಗು ಭಾಷೆಯು ದ್ರಾವಿಡದಿಂದ ಬೇರೆಯಾಗಿ ರೂಪುಗೊಂಡ ಬಗೆಯನ್ನು ತೋರಿಸುತ್ತಿವೆ.

ಆಕರ:

1. E.I.XXX No.46.Insc. A
2. E.I. XXIV No.26.Insc.C
3. IAP.Wr.No.3, KUES.Vol.V pt.II.No.418
4. SII.X.No.604, IAP.Cud.No.45,1968. ಇದರಲ್ಲಿ ಸಾಲುಗಳ ವ್ಯತ್ಯಾಸವಿದೆ.
5. IAP.Krm.No.3,
6. ಆಂಧ್ರ ಪ್ರದೇಶದ ಕನ್ನಡ ಶಾಸನಗಳು. ಸಂಪುಟ.5, ಭಾಗ–1, ಪುಟ.XXXIX
7. SII.X.641, 616, 635
8. E.I.VII.22-3;EC.X.Part.II
9. Inscriptions of The Pallavas.No.330, SII.XII.43, TTDI.I.No.2,
10. E.I.XI.No.22(ಃ)Plate.I, IA.XL.104–14, ಇI.XI.22–ಅ and Plate I

11. EC. X.gb.76,69,72,73,75
12. EC.X.mb.203, 208,209,256
13. SII.IX.pt.I.No.401
14. SII.IX.pt.I.No.301
15. SII.IX.pt.I.No.400
16. SII.X..No.607, ಇI.XXVII.225–282, SII.X.No.606
17. ಶಾಸನ ಮಂಥನ, ಪುಟ.345,
18. ಬಾಣರಸರ ಶಾಸನಗಳು ಒಂದು ಅಧ್ಯಯನ, ಪುಟ.24.
19. ಕನ್ನಡ ಭಾಷೆಯ ಕಲ್ಪಿತ ಚರಿತ್ರೆ. ಪುಟ.19
20. ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಅಧ್ಯಯನ, ಪುಟ.150
21. See DED.342(ಃ)
22. See DED.342
23. DED.3493, and TVಃ 891
24. ತೌಲನಿಕ ದ್ರಾವಿಡ ವ್ಯಾಕರಣ, ಪುಟ.41
25. ಪ್ರಾಚೀನಾಂಧ್ರ ಶಾಸನಾಲು, ಪುಟ.XLV,
26. SII.X.No.639
27. See DED.3209
28. SII.X.No.606,625.ಂ.ಆ
29. SII.VI.No.593, E.I.XXX,pp280–284 ,SII.X.No.35
30. EC.X.mb.92
31. EC.X.mb.255
32. ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಅಧ್ಯಯನ, ಪುಟ.79
33. SII.X.No.626, ಚಿತ್ತೂರು
34. BSOAS 12.355, See DED.2939
35. DED.772
36. DED.3195
37. Surya Raya Andhra Nighantuvu
38. ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಅಧ್ಯಯನ, ಪುಟ.79
39. E.I.V,118–122,799–843
40. SII.I.No.38,945–50
41. SII.I.No.36
42. E.I. X,9–47,945

ಆಕರ ಗ್ರಂಥಗಳು:–

1. Budaraju Radha Krishna. 1971. Early Telugu Inscriptions (Upto 1100 A.D) . : Andhra Pradesh sahitya akademi: Hyderabad.

2. Ed.by.B l.Rice : Epigraphia carnatica,Vol- X Kolar
3. Burrow,T, and Emeneau.M.B.1984. A Dravidian Etymological Dictionary .Clarendon :.Oxford.
4. Epigraphia Indica, Vols,5,7,10,11,24,27,30 ;Archaeological Survey of India. New Delhi.
5. South Indian Inscriptions, Vol,5,6,9Pt.1,10;Archaeological Survey of India. New Delhi.
6. Ed.Mahalingam,T.V.1988, Inscriptions of The Pallavas, ICHR and Agam Prakashan.Delhi.
7. EA:ರಾಬರ್ಟ್ ಕಾಲ್ಡ್‌ವೆಲ್. ಮಾಧವ ಪೆರಾಜೆ. 2005. ತೌಲನಿಕ ದ್ರಾವಿಡ ವ್ಯಾಕರಣ. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ. ಹಂಪಿ.
8. ಡಾ.ಕೆ.ಆರ್.ಗಣೇಶ್.ಡಾ.ಆರ್.ಶೇಷಶಾಸ್ತ್ರಿ. 2001.ಆಂಧ್ರ ಪ್ರದೇಶದ ಕನ್ನಡ ಶಾಸನಗಳು ಭಾಗ–1. ಕನ್ನಡ ವಿ.ವಿ. ಹಂಪಿ.
9. ಎಂ.ಬಿ.ನೇಗಿನಹಾಳ. 1982. ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಅಧ್ಯಯನ. ಪ್ರಸಾರಾಂಗ. ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ.
10. ಪಿ.ವಿ.ಕೃಷ್ಣಮೂರ್ತಿ. 2009. ಬಾಣರಸರ ಶಾಸನಗಳು ಒಂದು ಅಧ್ಯಯನ, ಸಿವಿಜಿ ಪಬ್ಲಿಕೇಷನ್ಸ್. ಬೆಂಗಳೂರು.
11. ಪಿ.ವಿ.ಕೃಷ್ಣಮೂರ್ತಿ. 2011. ಶಾಸನ ಮಂಥನ, ತುಮಕೂರು.ವಿ.ವಿ. ತುಮಕೂರು.
12. ಬಿ.ಆರ್.ಭಾರತೀ. 2011. ರಾಷ್ಟ್ರಕೂಟರ ಶಾಸನಗಳು. ಭಾಗ–1, 2. ಪ್ರಸಾರಾಂಗ. ಮೈಸೂರು ವಿ.ವಿ. ಮೈಸೂರು.

❖❖❖

ಪಾದರಸದ ಗಾಜಿನಲಿ
ಕಾಣುವುದು ನಿನ್ನ ಮುಖ
ಪಾದರಸವಿಲ್ಲದಿರೆ
ಕಾಣುವುದು ಹೊರ ಲೋಕ.

ಗೋವಿಂದ ಪೈಯವರ ಗದ್ಯ ಬರಹಗಳು

ಡಾ. ಪಾರ್ವತಿ ಜಿ. ಐತಾಳ್
ಬಸ್ರೂರು ಕ್ರಾಸ್, ಕುಂದಾಪುರ

ರಾಷ್ಟ್ರಕವಿ ಬಿರುದಾಂಕಿತ ಮಂಜೇಶ್ವರ ಗೋವಿಂದ ಪೈಯವರು ಮೂಲತಃ ಕವಿಗಳಾಗಿದ್ದು ಕವಿಗಳೆಂದೇ ಗುರುತಿಸ್ಪಟ್ಟವರಾದರೂ ಅವರ ಗದ್ಯ ಬರವಣಿಗೆಯ ಅಗಾಧತೆ, ವೈವಿಧ್ಯತೆ ಮತ್ತು ಅವುಗಳ ಹಿಂದಿನ ಅವರ ಅಧ್ಯಯನ ಪರಿಶ್ರಮ, ಪಾಂಡಿತ್ಯಗಳು ಬೆರಗು ಹುಟ್ಟಿಸುವಷ್ಟು ವಿಪುಲವಾಗಿವೆ ಮಾತ್ರವಲ್ಲದೆ ಅನನ್ಯವೆನ್ನಿಸಿವೆ. ಪತ್ರಿಕೆಗಳಿಗೂ ನಿಯತ ಕಾಲಿಕಗಳಿಗೂ ಅವರು ಬರೆದು ಕೊಡುತ್ತಿದ್ದ ಸಾವಿರಾರು ಲೇಖನಗಳು ಮತ್ತು ಪ್ರಬಂಧಗಳು, ಸಾಹಿತಿ ಮಿತ್ರರುಗಳಿಗೂ ಅಭಿಮಾನಿಗಳೂ ಸಮಯ ಕ್ಲಪ್ತತೆಯ ಪ್ರಜ್ಞೆಯನ್ನಿಟ್ಟುಕೊಂಡು ತಪ್ಪದೆ ಅವರು ಬರೆಯುತ್ತಿದ್ದ ಕಲೆ–ಸಾಹಿತ್ಯಗಳ ಕುರಿತಾದ ವಿಚಾರಗಳನ್ನೊಳಗೊಂಡ ಪತ್ರಗಳು, ಹಿಂದುಸ್ಥಾನದ ಚರಿತ್ರೆ ಮತ್ತು ಸಾಹಿತ್ಯಗಳಿಗೆ ಸಂಬಂಧ ಪಟ್ಟ ಸಂಶೋಧನಾ ಬರಹಗಳು, ಏಕಾಂಕ ನಾಟಕಗಳು ಮತ್ತು ಪಾಶ್ಚಾತ್ಯ ನಾಟಕಗಳ ಕನ್ನಡ ಅನುವಾದಗಳು – ಹೀಗೆ ಪೈಯವರ ಗದ್ಯ ಸಾಹಿತ್ಯದ ವ್ಯಾಪ್ತಿ ವಿಸ್ತೃತಗೊಳ್ಳುತ್ತ ಹೋಗುತ್ತದೆ. ಎಲ್ಲವನ್ನೂ ಎಚ್ಚರಿಕೆಯಿಂದ ಸಂಗ್ರಹಿಸಿ ಸಂಕಲನ ಮಾಡಿದ್ದರೆ ಸಾವಿರಾರು ಪುಟಗಳ ಮೌಲಿಕ ಗ್ರಂಥಗಳ ನಿರ್ಮಾಣವಾಗುತ್ತಿತ್ತು. ಆದರೆ ಹಾಗಾಗಿಲ್ಲ ಎಂಬುದು ವಿಷಾದ ಪಡಬೇಕಾದ ಸಂಗತಿ.

'ಸಾಹಿತ್ಯಜ್ಞರ ಆತ್ಮಕಥನ' ಎಂಬ ದೀರ್ಘ ಲೇಖನದಲ್ಲಿ ಪೈಯವರು ತಾವು ಬರವಣಿಗೆ ಪ್ರಾರಂಭಿಸಿದ ಸಂದರ್ಭವನ್ನೂ, ತಮಗೆ ನಾಟಕದಲ್ಲಿ ಹೇಗೆ ಆಸಕ್ತಿ ಮೂಡಿತು ಎಂಬುದನ್ನೂ, ಅವರು ಹತ್ತು ವರ್ಷದವರಿದ್ದಾಗ ಊರಿಗೆ ಮರಾಠಿಯ ಸಾಂಗಲಿಯಿಂದ ನಾಟಕ ಮಂಡಲಿ ಬಂದು ಬೀಡು ಬಿಟ್ಟು ಅವರು ಹಲವು ನಾಟಕಗಳನ್ನು ನೋಡಿದ್ದನ್ನೂ ಆತ್ಮಕಥಾನಕ ರೂಪದಲ್ಲಿ ಹೇಳಿಕೊಳ್ಳುತ್ತಾರೆ. 'ಬರಹಗಾರನ ಹಣೆಬರಹ' ಎಂಬ ಇನ್ನೊಂದು ಪ್ರಬಂಧದಲ್ಲೂ ಸ್ವಂತ ಅನುಭವಗಳನ್ನು ಲಲಿತ ಶೈಲಿಯಲ್ಲಿ ಬಿತ್ತರಿಸುತ್ತಾರೆ. 'ಕರ್ಣಾಟಕವೋ ಕರ್ನಾಟಕವೋ' ಎಂಬ ಲೇಖನದಲ್ಲಿ 'ಕರ್ಣಾಟಕ' ಪದದ ನಿಷ್ಪತ್ತಿಯ ಕುರಿತು ಪ್ರಾಚೀನ ಸಂಸ್ಕೃತ ಗ್ರಂಥಗಳ ಆಧಾರ ಸಮೇತ ಮಾಡಿದ ಚರ್ಚೆಯಿದೆ. ಹಾಗೆಯೇ 'ರತ್ನಾಕರ ಸಿದ್ಧನ ಕಾಲ ನಿರ್ಣಯ, ಬುದ್ಧ ಮತ್ತು ಮಹಾವೀರನ ಪರಿನಿರ್ವಾಣಗಳ ಕಾಲ, 'ನಮ್ಮ ಹಿರಿಯರನ್ನು ಕುರಿತು' ಎಂಬ ಸುದೀರ್ಘ ಸಂಶೋಧನಾತ್ಮಕ ಲೇಖನಗಳು ಪೈಯವರ ಪರಿಶ್ರಮ ಪೂರ್ಣ ಅಧ್ಯಯನ ಮತ್ತು ಅಗಾಧವಾದ ಪಾಂಡಿತ್ಯಗಳಿಗೆ ಸಾಕ್ಷಿಯಾಗಿ ನಿಲ್ಲುತ್ತದೆ.

ಇಂಗ್ಲಿಷ್‌ನ ಮೂಲಕ ಲೋಕ ಸಾಹಿತ್ಯದ ಪರಿಚಯ ಮಾಡಿಕೊಂಡ ಅವರು ಅನೇಕ ಭಾರತೀಯ ಭಾಷೆಗಳನ್ನು ಮಾತ್ರವಲ್ಲದೆ ಹಲವು ವಿದೇಶಿ ಭಾಷೆಗಳನ್ನೂ ಕಲಿತರು. ಅವರಿಗೆ ಕನ್ನಡ, ಕೊಂಕಣಿ, ಸಂಸ್ಕೃತ, ಪ್ರಾಕೃತ, ಪಾಲಿ, ಬಂಗಾಳಿ ಭಾಷೆಗಳಲ್ಲದೆ ಲ್ಯಾಟಿನ್, ಜರ್ಮನ್, ಅರಬಿ, ಗ್ರೀಕ್ ಭಾಷೆಗಳೂ ಬರುತ್ತಿದ್ದವು. ಗ್ರೀಕ್ ನಾಟಕಗಳನ್ನು ಮೂಲ ಗ್ರೀಕ್‌ನಲ್ಲೇ ಓದಿದ ಅವರು 'ಗ್ರೀಕ್ ನಾಟಕಗಳಲ್ಲಿ ಕನ್ನಡ ಪದಗಳು' ಎಂಬ

ಲೇಖನವನ್ನು ಬರೆದಿದ್ದರು. ತಮ್ಮ ಬಹುಭಾಷಾ ಪಾಂಡಿತ್ಯದ ಮೂಲಕ ಲೋಕ ಸಾಹಿತ್ಯದ ಮೇರು ಕೃತಿಗಳನ್ನೆಲ್ಲ ಓದಿ ಅರಗಿಸಿಕೊಂಡು ಜ್ಞಾನ ಸಾಗರವನ್ನೇ ತಮ್ಮೊಳಗಿಟ್ಟುಕೊಂಡ ಅವರನ್ನು ಜನ 'Walking Encyclopedia' ಎಂದು ಕರೆಯುತ್ತಿದ್ದರು.

ಕನ್ನಡ ಭಾಷೆಯ ಸರ್ವತೋಮುಖ ಬೆಳವಣಿಗೆಯ ಬಗ್ಗೆ ಪೈಯವರಷ್ಟು ಕಾಳಜಿ ವಹಿಸಿದ ಬೇರೊಬ್ಬ ಸಾಹಿತಿ ಕನ್ನಡದಲ್ಲಿಲ್ಲ. ಶಬ್ದಮಣಿ ದರ್ಪಣ, ಛಂದೋಂಬುಧಿ ಮುಂತಾದ ವ್ಯಾಕರಣ ಗ್ರಂಥಗಳ ಸಾರಸಂಗ್ರಹವಾಗಿ ಬಾಸೆಲ್ ಮಿಶನ್ ಪ್ರಕಟಿಸಿದ 'ಹಳೆಗನ್ನಡ ವ್ಯಾಕರಣ ಸೂತ್ರಗಳು'(1889) ಎಂಬ ಗ್ರಂಥವನ್ನು ಆಮೂಲಾಗ್ರ ಅಧ್ಯಯನ ಮಾಡಿ ಅರಗಿಸಿಕೊಂಡು ವೃತ್ತ, ಕಂದ, ಪಟ್ಪದಿಗಳಿಂದ ಕೂಡಿದ ಛಂಧೋಬದ್ಧ ಮಹಾ ಕಾವ್ಯಗಳನ್ನು ರಚಿಸಿದ್ದಲ್ಲದೆ ಮುಂಬಯಿನಲ್ಲಿ ನಡೆದ 34ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದಲ್ಲಿ ಕನ್ನಡ ವಿಶ್ವಕೋಶದ ಅಗತ್ಯ, ಕನ್ನಡ ಲಿಪಿಯ ಸುಧಾರಣೆ, ಕಾವ್ಯ ರಚನೆಯಲ್ಲಿ ಛಂದೋಬದ್ಧತೆಯ ಮಹತ್ತ್ವ ಮತ್ತು ಕನ್ನಡಕ್ಕೆ ಹೊಸಪದ ಮತ್ತು ನುಡಿಗಟ್ಟುಗಳ ಸೇರ್ಪಡೆಯ ಕುರಿತು ವಿಸ್ತಾರವಾಗಿ ಅವರು ಬರೆದಿದ್ದರು.

ನಮ್ಮ ಕನ್ನಡ ನುಡಿ ವಿಶಾಲವೂ ವೈವಿಧ್ಯ ಪೂರ್ಣವೂ ಸತ್ವ ಶಾಲಿಯೂ ಆಗಬೇಕೆಂಬ ಪ್ರಜ್ಞೆಯಿಂದ ತಮ್ಮ ಗದ್ಯ ಬರಹಗಳಲ್ಲಿ ಬಳಸುವ ಪದಗಳ ಬಗ್ಗೆ ನಿರಂತರ ಹೊಸ ಪ್ರಯೋಗಗಳನ್ನು ಪೈಯವರು ಮಾಡುತ್ತಿದ್ದರು. ದೇಸಿಯಿಂದ ಪದ, ಮಾತು, ನುಡಿಗಟ್ಟು, ಗಾದೆಗಳನ್ನು ಹೆಕ್ಕಿ ಅವರು ಕನ್ನಡಕ್ಕೆ ಸೇರಿಸಿದರು. ಹಳೆ ಸಾಹಿತ್ಯದಲ್ಲಿ ಮಾತ್ರ ಬಳಸಲಾಗುತ್ತಿದ್ದ ಪದಗಳನ್ನು ಎಳೆತಂದು ಅವುಗಳಿಗೆ ಹೊಸ ಉಸಿರನ್ನು ಕೊಟ್ಟರು. ತುಳು ನುಡಿಯು ಪ್ರಚಲಿತ ನಾಣ್ನುಡಿಗಳನ್ನು ಕನ್ನಡಕ್ಕೆ ಅಳವಡಿಸಿಕೊಂಡರು. ಬಳಕೆಯಲ್ಲಿಲ್ಲದಂತಹ ಹೊಸ ಸಮಾಸಗಳನ್ನು ಸೃಷ್ಟಿಸಿದರು. (ಉದಾ: ಹಿಂಡುಗತ್ತಲೆ, ಭೀಮಕಾರ್ಯ) ಪರಭಾಷಾ ಪದಗಳಿಗೆ ಸಂವಾದಿಯಾಗಿ ನಿಲ್ಲಬಲ್ಲ ಪದ – ಸಮಾಸಗಳನ್ನು ಸೃಷ್ಟಿಸಿದರು. (horus–ಗೊಂದಳ, Anthology–ಮಂಜರಿ) ನವೀನ ನಾಮ ಸಾಧಿತ – ಧಾತು ಸಾಧಿತ ಪದ ಪ್ರಯೋಗ ಮಾಡಿ ಇತರ ಬರಹಗಾರರಿಗೆ ಮಾರ್ಗದರ್ಶನ ಮಾಡಿದರು. (ಕನ್ನಡಿಸು, ಸಲ್ಲಾಪಿಸು, ಕಲಿಕೆ, ಕೇಳುಗ). ಇತರ ಭಾಷೆಗಳಲ್ಲಿರುವ ಅಂಕಿತನಾಮಗಳನ್ನು ಕನ್ನಡದ ಉಚ್ಚಾರಕ್ಕೆ ಒಗ್ಗುವಂತೆ ಅಳವಡಿಸುವುದರಲ್ಲಂತೂ ಪೈಯವರದ್ದು ಎತ್ತಿದ ಕೈ. (John – ಯೋಹಾನ, Mary –ಮರಿಯಾ). ಹೀಗೆ ಅವರು ತಮ್ಮ ಸಾಹಸಿ ಪ್ರಯೋಗಗಳಿಂದ ಕನ್ನಡವನ್ನು ಶ್ರೀಮಂತಗೊಳಿಸಿದರು. ಉದಾಹರಣೆಗೆ ಅಸಾಧ್ಯ ಎಂಬ ಅರ್ಥದಲ್ಲಿ 'ಅಸ' ಎಂಬ ಪ್ರಯೋಗ (ಮಾಡಲಾಸ), ಎರಡು ಸಲ ಎಂಬಲ್ಲಿ 'ಇಮ್ಮೆ', ಹಲವು ಸಲ 'ಹಲಮೆ', 'ಅಜ್ಞತನ', 'ವರ್ತಕತನ' ಮುಂತಾಗಿ ತದ್ದಿತಾಂತ ಭಾವ ನಾಮಗಳು, ಕೊನೆಗೆ 'ಅಕನ್ನಡಿಗ' ಎಂಬ ಪ್ರಯೋಗವನ್ನೂ ಅವರು ಮಾಡಿದ್ದಾರೆ. 'ಅಜ್ಞತನದ ಮಣೆಯಲ್ಲಿ ಕೂರಿಸು' 'ಉತ್ತಮೇಲಲ್ಲವೇ ಬಿತ್ತುವ ಯೋಚನೆ?' 'ಕುರುಡನಿಗೆ ಕನ್ನಡ ಏರಿಸಲೇಕೆ?' ಎಂಬಂಥ ಅನೇಕ ಸ್ವಾರಸ್ಯ ಪೂರ್ಣ ಹೇಳಿಕೆಗಳನ್ನು ಅವರು ಬಳಸಿದ್ದಾರೆ.

ಗೋವಿಂದ ಪೈಯವರ ಗದ್ಯ ರೂಪದಲ್ಲಿರುವ ನಾಟಕಗಳೆಲ್ಲವೂ ಏಕಾಂಕ ನಾಟಕಗಳು. ಭಾರತೀಯ ಸಂಸ್ಕೃತಿ ಹಾಗೂ ಸಭ್ಯತೆಯ ಪ್ರತಿರೂಪದಂತಿದ್ದ ಅವರು ಅಪ್ರತಿಮ ದೇಶ ಭಕ್ತರೂ ಆಗಿದ್ದರೆನ್ನುವುದಕ್ಕೆ ಸಾಕ್ಷಿಯಾಗಿ ಅವರ 'ಚಿತ್ರಭಾನು ಮತ್ತು ತಾಯಿ' ಎಂಬ ಎರಡು ಏಕಾಂಕ ನಾಟಕಗಳು ನಿಲ್ಲುತ್ತವೆ. 'ಚಿತ್ರಭಾನು ಅಥವಾ 1942' ಎಂಬ ನಾಟಕವು

ಭಾರತೀಯರ ಮೇಲೆ ಪಾಶವೀಕೃತ್ಯದ ದಬ್ಬಾಳಿಕೆ ನಡೆಸಿದ ಬ್ರಿಟಿಷರನ್ನು 'ಭಾರತ ಬಿಟ್ಟು ತೊಲಗಿ' ಎಂದು ದೇಶಭಕ್ತರು ಪ್ರತಿಭಟಿಸಿದ ವೀರ ಕಥಾನಕ. ಭಾರತದ ಸ್ವಾತಂತ್ರ್ಯ ಸಂಗ್ರಾಮದ ಘನತೆಗೂ, ಮಹಾತ್ಮಾಗಾಂಧಿಯವರ ಧಾರ್ಮಿಕ ಹೋರಾಟದಲ್ಲಿ ಪ್ರಾಣಾರ್ಪಣೆಗೈದ ವೀರ ಯುವಕರ ಕೆಚ್ಚೆದೆಗೆ ಮತ್ತು ಕವಿಯ ಶ್ರೇಷ್ಠ ಪ್ರತಿಭೆ, ಕಲ್ಪನಾ ಶಕ್ತಿ ಮತ್ತು ಕಾವ್ಯ ಸ್ಫೂರ್ತಿಗೆ ಅರ್ಹವಾಗಿ ನಿಲ್ಲುವ ಕೃತಿಯಿದು. ವೇಣುಗೋಪಾಲನೆಂಬ ಯುವಕ ಚಳುವಳಿಯಲ್ಲಿ ಸೇರಿಕೊಳ್ಳಲು ಮನೆಬಿಟ್ಟು ಹೋಗುವಲ್ಲಿಂದ ಆರಂಭವಾಗುವ ನಾಟಕ ಆತ ಹುತಾತ್ಮನಾದ ಬಳಿಕ ಆತನ ತಾಯಿ ಯಶೋದೆ ವೀರ ಮಾತೆಯಾಗಿ ತನ್ನ ಮಗನ ಪ್ರಾಣಾರ್ಪಣೆಯ ಬಗ್ಗೆ ಹೆಮ್ಮೆ ಪಡುವುದರೊಂದಿಗೆ ಕೊನೆಗೊಳ್ಳುತ್ತದೆ. 'ತಾಯಿ' ಎಂಬ ಇನ್ನೊಂದು ಏಕಾಂಕ ನಾಟಕದಲ್ಲಿ ತಾಯಿಯಾಗದಿರುವ ಓರ್ವ ಸ್ತ್ರೀಯ ತಾಯಿ ಹೃದಯವನ್ನು ಚಿತ್ರಿಸುವ ಪೈಯವರು ಆ ಮೂಲಕ ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀಯ ಮಹತ್ತ್ವವನ್ನು ಎತ್ತಿ ಹಿಡಿಯುತ್ತಾರೆ. ಈ ನಾಟಕಗಳಲ್ಲಿ ಪೈಯವರು ಬಳಸುವ ಭಾಷೆಯಲ್ಲಿ ಅಪೂರ್ವ ಸೊಬಗಿದೆ. ಕಾವ್ಯಾತ್ಮಕತೆಯಿದೆ. ನಾಣ್ಣುಡಿ, ಗಾದೆ ಮಾತು ಮತ್ತು ಅನನ್ಯ ಹೋಲಿಕೆಗಳ ಮೂಲಕ ಇಲ್ಲಿನ ಸಂಭಾಷಣೆಗಳು ಸಂಪದ್ಯುಕ್ತವಾಗಿವೆ.

ಗೋವಿಂದ ಪೈಯವರ ನಾಟಕಗಳು ಎಂದು ಇಂದು ಕರೆಯಲ್ಪಡುವ ಬಹು ಮಹತ್ತ್ವದ ಮೂರು ಕೃತಿಗಳು 'ಗೋಲ್ಗೊಥಾ' 'ವೈಶಾಖಿ' ಮತ್ತು 'ಹೆಬ್ಬೆರಳು'. ವಾಸ್ತವದಲ್ಲಿ ಇವು ಮೂರೂ ಕೂಡಾ ಖಂಡ ಕಾವ್ಯಗಳು. ಆದರೆ ಅವುಗಳ ಅಸೀಮ ಕಾವ್ಯ ಗುಣಗಳೊಂದಿಗೆ ಮನ ಮುಟ್ಟುವ ನಾಟಕೀಯ ಗುಣಗಳೂ ಇವುಗಳಲ್ಲಿದ್ದು ಪಾತ್ರ ವೈವಿಧ್ಯ, ಸಂಭಾಷಣೆಗಳು ಮತ್ತು ಪ್ರೇಕ್ಷಕನ ಮನಸ್ಸಿನ ಮೇಲೆ ಅಚ್ಚಳಿಯದ ಪರಿಣಾಮ ಬೀರಬಲ್ಲ ಕ್ರಿಯಾತ್ಮಕ ಸನ್ನಿವೇಶಗಳು ಇರುವುದರಿಂದ ಅವುಗಳು ನಾಟಕಗಳಾಗಿ ವೇದಿಕೆಯ ಮೇಲೆ ಪ್ರಸ್ತುತ ಪಡಿಸಲ್ಪಟ್ಟಿವೆ. ಯೇಸುವಿನ ಕೊನೆಯ ದಿನದ ಕರುಣ ಕಥನದ ಮೂಲಕ ಆತನ ಮಹಾನ್ ವ್ಯಕ್ತಿತ್ವದ ಸಮಗ್ರ ಚಿತ್ರವನ್ನು ನಮ್ಮ ಮುಂದಿರಿಸುವುದು 'ಗೋಲ್ಗೊಥಾ'ದ ಗುರಿಯಾಗಿದ್ದರೆ, ಭರತ ಖಂಡದಲ್ಲಿ ಬದುಕಿ ಬಾಳಿ, ಸಮಸ್ತ ಜಗತ್ತಿಗೇ ಅಹಿಂಸೆಯ ಮಹತ್ತ್ವವನ್ನು ಸಾರಿ ಹೇಳಿದ ಭಗವಾನ್ ಬುದ್ಧದೇವನ ಪರಿಪೂರ್ಣ ಜೀವನದ ಮಹಾ ನಿರ್ವಾಣವನ್ನು ಚಿತ್ರಿಸುವುದು 'ವೈಶಾಖಿ'ಯ ಉದ್ದೇಶ. ಈ ಎರಡೂ ದೃಶ್ಯ ಕಾವ್ಯಗಳ ರಚನೆಯ ಹಿಂದೆ ಪೈಯವರ ಸಂಶೋಧನಾ ಪ್ರವೃತ್ತಿ ಜಾಗೃತವಾಗಿದ್ದದ್ದು ಸ್ಪಷ್ಟಗೋಚರ ಸಂಗತಿ. ಯಾಕೆಂದರೆ ಅವುಗಳ ವಸ್ತುಗಳಿಗೆ ಬೇಕಾದ ಎಲ್ಲ ಐತಿಹಾಸಿಕ ವಿವರಗಳನ್ನು ಕಲೆಹಾಕಿ, ಕೂಲಂಕುಷವಾಗಿ ಅಧ್ಯಯನ ಮಾಡಿಯೇ ಅವರು ತಮ್ಮ ಕಾವ್ಯ ರಚನೆ ಮಾಡಿದ್ದರು. ಯೇಸುಕ್ರಿಸ್ತನ ಜೀವನ ಚರಿತ್ರೆಗೆ ಸಂಬಂಧಿಸಿದ ಎಲ್ಲ ಗ್ರಂಥಗಳನ್ನು ಓದಿ ಮನನ ಮಾಡಿ, ಆತ ಹುಟ್ಟಿ ಬೆಳೆದ ಮತ್ತು ಸಂಚಾರ ಮಾಡಿದ ಪ್ರದೇಶಗಳ ಭೌಗೋಳಿಕ ವಿವರಗಳನ್ನೂ, ವಿಶೇಷವಾಗಿ ಆತನ ಕೊನೆಯ ದಿನಕ್ಕೆ ಸಂಬಂಧಪಟ್ಟ ಸ್ಥಳ ಕಾಲಗಳ ವಿವರಗಳನ್ನೂ ಗುರುತಿಸಿಕೊಂಡು ತಮ್ಮ ಕಲ್ಪನಾ ಶಕ್ತಿ, ಸಹೃದಯತೆ ಹಾಗೂ ಚಿತ್ರಕ ಶಕ್ತಿಗಳಿಂದ ಎಲ್ಲವನ್ನೂ ಮನ ಮುಟ್ಟುವಂತೆ ಬಣ್ಣಿಸಿದ್ದಾರೆ. 'ವೈಶಾಖಿ'ಯಲ್ಲಿ ಬುದ್ಧನ ಜೀವನದಲ್ಲಿ ಮಹತ್ತ್ವದ ಸ್ಥಾನ ಪಡೆದ ವೈಶಾಖ ಶುಕ್ಲ ಪೂರ್ಣಿಮೆಯಂದು ಆತ ಪರಿನಿರ್ವಾಣ ಹೊಂದಿದ್ದನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. 'ಗೋಲ್ಗೊಥಾ'ದ ರೌದ್ರತೆಯ ನಂತರ ಬಂದ 'ವೈಶಾಖಿ'ಯ ಪ್ರಶಾಂತ ಸೌಮ್ಯ ಮುದ್ರೆಗಳು ಭಿನ್ನ ಅನುಭವ ಕೊಡುತ್ತವೆ.

'ಹೆಬ್ಬೆರಳು' ನಾಟಕದ ಕಥಾವಸ್ತು ವೇದವ್ಯಾಸರ ಸಂಸ್ಕೃತ ಭಾರತದಿಂದ ಆಯ್ದು

ಕೊಂಡದ್ದಾದರೂ ಅದನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಆರ್ಯ ಮತ್ತು ಅನಾರ್ಯರ ನಡುವೆ ಇದ್ದ ತಾರತಮ್ಯವನ್ನು ಗುರುತಿಸುವುದೇ ಪೈಯವರ ಮುಖ್ಯ ಉದ್ದೇಶವಾಗಿತ್ತೇನೋ ಅನ್ನಿಸುತ್ತದೆ. ಅನಾರ್ಯರಾದ ದ್ರಾವಿಡರು, ಕಣ್ಣರು ನಾಟರು, ಗೋವರು, ಭಿಲ್ಲರು, ತುರ್ವಸುಗಳನ್ನು ಆರ್ಯರು ಹೇಗೆ ನಡೆಸಿಕೊಳ್ಳುತ್ತಿದ್ದರು ಎಂಬ ಬಗ್ಗೆ ಉತ್ತಮ ವಿಶ್ಲೇಷಣಾತ್ಮಕ ವಿಮರ್ಶೆ ಮತ್ತು ಸತ್ಯಸ್ಥಿತಿಯ ಉಲ್ಲೇಖಗಳು ಈ ನಾಟಕದಾದ್ಯಂತ ಹಾಸು ಹೊಕ್ಕಾಗಿದ್ದು ಇದು ಅವರು ಸತ್ಯ ಸಂಶೋಧನೆಯ ಮಹಾ ತಪಸ್ಸಿನ ಫಲದಂತೆ ಕಂಡುಬರುತ್ತದೆ. ಹೀಗೆ ಈ ಮೂರೂ ಮಹತ್ತ್ವದ ದೃಶ್ಯ ಕಾವ್ಯಗಳಲ್ಲಿ ಪೈಯವರು ತಮ್ಮ ಸರ್ವಧರ್ಮ, ಸರ್ವಜನಾಂಗ, ಅಷ್ಟೇ ಏಕೆ, ಸರ್ವ ಮನುಕುಲ ಸಮನ್ವಯದ, 'ವಸುಧೈವ ಕುಟುಂಬಕಂ' ಎಂಬ ಆಗಸದೋಪಾದಿಯ ವಿಶಾಲ ಮನೋಭಾವವನ್ನು ಬಿಂಬಿಸಿರುವುದೇ ಓರ್ವ ಸಾಹಿತಿಯಾಗಿ ಅವರ ಅನನ್ಯ ಗುಣಕ್ಕೆ ಪ್ರತ್ಯಕ್ಷ ಸಾಕ್ಷಿ.

❖❖❖

ಮಳೆ ಬಂದ ಮೊದಲಲ್ಲೆ
ಮೊಳೆದ ಎಳೆಹುಲ್ಲಿಗೆ
ಮಳೆ ತರುವ ತಿಳಿಹರುಷ
ಮೊದಲೆ ತಿಳಿದಿತ್ತೆ?

ಬಾಡ ಕಾದಂಬರಿಯಲ್ಲಿ ಪ್ರಾದೇಶಿಕತೆ

ಸುರೇಶ್
ಸಂಶೋಧನಾ ವಿದ್ಯಾರ್ಥಿ
ಎಸ್.ವಿ.ಪಿ ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿಶ್ವವಿದ್ಯಾನಿಲಯ

ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಕಾದಂಬರಿ, ಕಾವ್ಯ, ಸಣ್ಣಕಥೆ ಪ್ರಕಾರಗಳು ಮೊದಲ ಬಾರಿಗೆ ಅಭಿವ್ಯಕ್ತಗೊಂಡಿರುವುದು ಕರ್ನಾಟಕದ ಕರಾವಳಿ ಭಾಗದಲ್ಲಿ. ಇದಕ್ಕೆ ಪ್ರಮುಖ ಕಾರಣವೇನೆಂದರೆ ಕರಾವಳಿ ಪ್ರದೇಶ ನೇರವಾಗಿ ಬ್ರಿಟಿಷ್ ಪ್ರಾಂತ್ಯದ ಆಡಳಿತದಲ್ಲಿ ಇದ್ದದ್ದು ಒಂದಾರೆ, ಕ್ರೈಸ್ತ ಮಿಷನರಿಗಳ ಸಾಂಸ್ಕೃತಿಕ, ಶೈಕ್ಷಣಿಕ ಚಟುವಟಿಕೆಗಳು ಇನ್ನೊಂದು. ಈ, ಕಾರಣದಿಂದ ಆರಂಭಗೊಂಡ ಇಂಗ್ಲಿಷ್ ಶಿಕ್ಷಣ ಕ್ರಮ ಪಾಶ್ಚಾತ್ಯ ಸಾಹಿತ್ಯವನ್ನು ಪರಿಚಯಿಸಿತು. ಇದು ಇಲ್ಲಿನ ಸ್ಥಳೀಯರಲ್ಲೂ ಹೊಸ ಮಾದರಿಯ ಸಾಹಿತ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಪ್ರೇರೇಪಿಸಿತು.

ಇಂತಹ ಹಿನ್ನಲೆಯುಳ್ಳ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಗುಲ್ವಾಡಿ ವೆಂಕಟರಾವ್, ಶಿವರಾಮ ಕಾರಂತ, ನಿರಂಜನ, ವಿಷುಕುಮಾರಂತಹ ಕಾದಂಬರಿಕಾರರು ಮುಂದೆ ರೂಪುಗೊಂಡರು. ಇವರೆಲ್ಲರೂ ತಮ್ಮ ಕಾಲದ ಸಾಂಸ್ಕೃತಿಕ ಸಮಸ್ಯೆಗಳನ್ನು ತಮ್ಮ ಕೃತಿಗಳಲ್ಲಿ ಮುಖಾಮುಖಿ ಯಾಗಿಸಿದವರು. ಕನ್ನಡ ಸಾಂಸ್ಕೃತಿಕ ಲೋಕ ಶಿವರಾಮ ಕಾರಂತರನ್ನು ಬದುಕಿನ ವಾಸ್ತವ ಚಹರೆಗಳ ನೋಟಗಾರನನ್ನಾಗಿ ಗುರುತಿಸಿದರೆ, ನಿರಂಜನರನ್ನು ಪ್ರಗತಿಶೀಲ ಚಳುವಳಿಯ ನೇತಾರನಾಗಿ ಕಂಡುಕೊಂಡಿತು. ಈ ಸಂದರ್ಭದಲ್ಲಿ ದಕ್ಷಿಣ ಕನ್ನಡದ ಇತರ ನವೋದಯ, ಪ್ರಗತಿಶೀಲ ಕಾದಂಬರಿಕಾರರನ್ನು ಕನ್ನಡ ಸಾರಸ್ವತ ಲೋಕ ಗಮನಿಸಲೇ ಇಲ್ಲ. ಹೀಗೆ ಗಮನಿಸದೇ ಬಿಟ್ಟ ಪ್ರಮುಖ ಪ್ರಗತಶೀಲ ಕಾದಂಬರಿಕಾರರಲ್ಲಿ ಕೆ.ವಿ. ರಾವ್ ಉಜಿರೆ ಅವರು ಒಬ್ಬರು.

ತಮ್ಮ ಬರಹಗಳನ್ನೆಲ್ಲ ಕೈ ಬರಹದ ರೂಪದಲ್ಲೆ ಬಿಟ್ಟು ಹೋಗಿ ನಿಧನರಾದ ಬಳಿಕ ಸಾರಸ್ವತ ಲೋಕಕ್ಕೆ ಪರಿಚಯವಾದವರು ಕೆ.ವಿ.ರಾವ್. ಇವರು ಮಾರ್ಕ್ಸ್‌ವಾದಿ ಚಿಂತನೆಗೆ ಒಳಗಾಗಿ ಪ್ರಗತಿಶೀಲ ಚಳುವಳಿಯ ಹಿನ್ನಲೆಯಲ್ಲಿ ಕಾದಂಬರಿಗಳನ್ನು ಬರೆದವರಾಗಿದ್ದಾರೆ. ಪ್ರಸ್ತುತ 'ಬಾಡ' ಕಾದಂಬರಿ ಮಾತ್ರ ಪ್ರಕಟವಾಗಿದ್ದು, ಇವರ ಇತರ ಹಸ್ತಪ್ರತಿಗಳು ಲಭ್ಯವಾಗಿಲ್ಲ.

'ಬಾಡ' ಕಾದಂಬರಿಯು ಶಿವರಾಮ ಕಾರಂತರ 'ಚೋಮನ ದುಡಿ' ಯ ಹಾಗೇಯೇ ಭೂ ಒಡೆತನದ ಸಂಘರ್ಷವನ್ನೇ ವಸ್ತುವಾಗುಳ್ಳದ್ದಾಗಿದೆ. ಆದರೆ ಕಥೆಯ ಸಂವಿಧಾನ ಮತ್ತು ಆಶಯ ಮಾತ್ರ ಪ್ರಗತಿಶೀಲ ಚಳುವಳಿಯ ಹಿನ್ನಲೆಯಲ್ಲಿ ರೂಪುಗೊಂಡಿದೆ. ಈ ಮೂಲಕ ಕೆ.ವಿ.ರಾವ್ ತಮ್ಮ ಸಮಕಾಲೀನ ಸಂದರ್ಭದ ಇಬ್ಬರು ಮೇರು ಕಾದಂಬರಿಕಾರರ ಪ್ರೇರೆಣೆಗೆ ಒಳಪಟ್ಟು ಮುಗೇರ ಸಮುದಾಯದ 'ಭೂಮಿಯ' ಒಡೆತನದ ಸಂಘರ್ಷದ ಸಂಕಥನವನ್ನು ಕಟ್ಟಿಕೊಟ್ಟಿದ್ದಾರೆ.

ಮುಗೇರರು ತುಳುನಾಡಿನಲ್ಲಿ ಇದ್ದ ಮೂಲ ಜನಾಂಗದಲ್ಲಿ ಬರುವ ಒಂದು ದಲಿತ

ಸಮುದಾಯವಾಗಿದೆ. ಪ್ರಸ್ತುತ 'ಬಾಡ' ಕಾದಂಬರಿಯು ಬೆಳ್ತಂಗಡಿ ತಾಲೂಕಿನ ಮುಗೇರ ಸಮುದಾಯದ 'ಭೂಮಿಯ' ಸಮಸ್ಯೆಯನ್ನೂ ಕೇಂದ್ರವಾಗಿಟ್ಟುಕೊಂಡು ರಚಿತವಾದ ಕಾದಂಬರಿಯಾಗಿದೆ. ಕಾದಂಬರಿಯ ನಾಯಕ ಬಾಡ ತನ್ನ ಧನಿಯಾದ ಪಡಿಯಾರರ ಉಳಿಗಮಾನ್ಯ ವ್ಯವಸ್ಥೆಯ ವಿರುದ್ಧ ಹೋರಾಡಿ ಜಯ ಶೀಲನಾಗುವ ಕಥೆ ಇದಾಗಿದೆ. ಈ ಹಿನ್ನಲೆಯಲ್ಲಿ ಪ್ರಸ್ತುತ ಕಾದಂಬರಿಯಲ್ಲಿ ಚಿತ್ರಿತವಾದ ಪ್ರಾದೇಶಿಕತೆಯ ಅಂಶಗಳನ್ನು ಈ ಪ್ರಂಬಂಧದಲ್ಲಿ ಗುರುತಿಸಲಾಗಿದೆ.

ಪ್ರಾದೇಶಿಕತೆ–

ನಮ್ಮ ಸುತ್ತಮುತ್ತಲಿನ ನಿರ್ದಿಷ್ಟವಾದ ಎಲ್ಲೆಯ ಪರಿಸರ, ನಾಡು, ನುಡಿ, ಜನ ಜೀವನದ ಕಟ್ಟುಕಟ್ಟಳೆಗಳನ್ನು, ಆ ಪ್ರದೇಶದ ವೈಶಿಷ್ಟ್ಯವನ್ನು ಪ್ರಾದೇಶಿಕವೆಂದು ಪರಿಭಾವಿಸಿಕೊಳ್ಳುತ್ತೇವೆ. "ಪ್ರಾದೇಶಿಕತೆ ಎಂಬುದು ಒಂದು ಭೌಗೋಳಿಕ ವಿಸ್ತಾರ ಪ್ರಾದೇಶಿಕ ಅಧ್ಯಯನ ಎನಿಸಿಕೊಳ್ಳುತ್ತದೆ. ಪ್ರಾದೇಶಿಕತೆ ಎಂಬುದು ಒಂದು ಭೌಗೋಳಿಕ ವಿಸ್ತಾರ ಮಾತ್ರವೇ ಅಲ್ಲ. ಅದು ಆ ಪ್ರದೇಶದಲ್ಲಿ ಸಂಭವಿಸುವ ವಿವಿಧ ವಿದ್ಯಾಮಾನಗಳು. ಅವುಗಳಿಗೆ ಕಾಲಕಾಲಕ್ಕೆ ಪ್ರಕೃತಿ ಹಾಗೂ ಅಲ್ಲಿ ಬದುಕುತ್ತಿರುವ ಜೀವ ವೈವಿಧ್ಯವು ನೀಡುತ್ತಾ ಬಂದ ಪ್ರತಿಕ್ರಿಯೆ. ಅಲ್ಲಿರುವ ಸಕಲ ಜೀವ ಜಗತ್ತಿನ ಹೊಂದಾಣಿಕೆಯ ಬದುಕು, ಅದಕ್ಕಾಗಿ ನಡೆಸುವ ಹೋರಾಟ ಇವೆಲ್ಲದರ ನಡುವೆಯ ವೈಪರೀತ್ಯಗಳನ್ನು ಮೀರಿ ಉಳಿದುಕೊಳ್ಳುವ ಸಂಗತಿಗಳು" (ಡಾ. ಶೈಲ. ಯು; ಪುಟ ಸಂಖ್ಯೆ 2)ಆಗಿವೆ.

ಹೀಗೆಯೆ ಕೃತಿಯೊಂದು ತಾನು ರಚನೆಗೊಳ್ಳುವ ಸಂದರ್ಭದಲ್ಲಿ ತನ್ನ ಸುತ್ತಮುತ್ತಲಿನ ಪರಿಸರವನ್ನು ಅಕಾರವಾಗಿ, ಆದರ್ಶವಾಗಿ ಕಟ್ಟಿಕೊಟ್ಟಿರುತ್ತದೆ. ಜೊತೆಗೆ ಆ ಪ್ರದೇಶದ ಪ್ರಧಾನ ಸಾಂಸ್ಕೃತಿಕ ಅಂಶಗಳನ್ನು ಗುರುತಿಸಿ ಬಾಹ್ಯ ಪ್ರಪಂಚಕ್ಕೆ ಅನಾವರಣಗೊಳಿಸುತ್ತದೆ. ಈ ಹಿನ್ನಲೆಯಲ್ಲಿ ಬಾಡ ಕಾದಂಬರಿಯಲ್ಲಿಯೂ ಕೂಡ ಪ್ರಾದೇಶಿಕ ಅಂಶಗಳನ್ನು ಗುರುತಿಸಬಹುದು.

ಕೆ.ವಿ.ರಾವ್ ಅವರ ಈ ಕಾದಂಬರಿ ಹಿಂದೆ ಹೇಳಿದಂತೆ ಕಾರಂತರ ಚೋಮನ ದುಡಿಯ ಭೂ ಹಕ್ಕಿಗೆ ಕುರಿತ ಸಂಗತಿಯನ್ನುಳ್ಳದ್ದು. ಈ ಎರಡೂ ಕಾರಂಬರಿಗಳು ದಕ್ಷಿಣ ಕನ್ನಡ ಜಿಲ್ಲೆಯದ್ದೆ ಆದರೂ ಭೂಮಿಗಾಗಿ ಹಕ್ಕನ್ನು ಪ್ರತಿಪಾದಿಸಿಕೊಳ್ಳುವ ನೆಲೆಯಲ್ಲೆ ಭಿನ್ನತೆಯನ್ನು ಕಾಣಬಹುದಾಗಿದೆ. ಬಾಡ ಕಾದಂಬರಿ ಸಮಸ್ಯೆಗೆ ತನ್ನಲ್ಲಿ ಪರಿಹಾರಗಳನ್ನು ಹುಡುಕಿಕೊಳ್ಳಲು ಪ್ರಯತ್ನಿಸುತ್ತದೆ. ಈ ಸಂದರ್ಭದಲ್ಲಿ ಭೂಮಿಯ ಹಕ್ಕನ್ನು ಪಡೆದುಕೊಳ್ಳಲು ಪ್ರಯತ್ನಿಸುವ ಸಮುದಾಯದ ಹೋರಾಟದ ಜೊತೆಗೆ ಸಾಂಸ್ಕೃತಿಕ ಅಂಶಗಳನ್ನು ಅನಾವರಣಗೊಳಿಸುತ್ತದೆ.. ಈ ಕಾರಣವಾಗಿ ಇಲ್ಲಿಯ ಪ್ರಾದೇಶಿಕತೆಯ ಚಹರೆಗಳನ್ನು ಮುಂದಿನಂತೆ ಗುರುತಿಸ ಬಹುದಾಗಿದೆ.

ಈ ಕಾದಂಬರಿಯಲ್ಲಿ ಪ್ರಾದೇಶಿಕತೆಯ ಅಂಶವನ್ನು ಎರಡು ನೆಲೆಗಳಲ್ಲಿ ಗುರುತಿಸ ಬಹುದು. ಅವುಗಳೆಂದರೆ.

1. ಪ್ರಾದೇಶಿಕತೆಯ ಭೌತಿಕ ಅಂಶಗಳು. (ಪರಿಸರ, ಸಂಸ್ಕೃತಿ, ಭಾಷೆ, ಹಬ್ಬ, ಆಟೋಟ, ಆಚರಣೆ ಇತ್ಯಾದಿ.)
2. ಪ್ರಾದೇಶಿಕತೆಯ ಬೌದ್ಧಿಕ ಅಂಶಗಳು

ಪ್ರಾದೇಶಿಕತೆಯ ಭೌತಿಕ ಅಂಶಗಳು

ಈ ಕಾದಂಬರಿಯಲ್ಲಿ ವಿಶೇಷವಾಗಿ ಮುಗೇರರ ಮದುವೆಯ ಸಂಪ್ರದಾಯದ ವರ್ಣನೆಯಿದೆ. ಬಾಡನ ಅಣ್ಣ ಚೋಮನ ಮದುವೆಯ ಮೂಲಕ ಇದು ಅನಾವರಣ ಗೊಳ್ಳುತ್ತದೆ. ಇಲ್ಲಿ ಇವರ ಸಂಸ್ಕೃತಿಯ ವಿಶಿಷ್ಟವೆನಿಸಿದ ದುಡಿಕುಣಿತವನ್ನು ಕಾಣಬಹುದು. ಜೊತೆಗೆ ದಕ್ಷಿಣಕನ್ನಡದ ಪ್ರಚಲಿತದಲ್ಲಿದ್ದ ಮಕ್ಕಳಕಟ್ಟು ಸಂಪ್ರದಾಯದ ವಿವರಗಳು ಲಭಿಸುತ್ತದೆ. ಮಕ್ಕಳ ಕಟ್ಟು ಸಂಪ್ರದಾಯದ ಪ್ರಕಾರ ಹೆಣ್ಣು ಅಳಿಯಕಟ್ಟಿನಂತೆ ತಾಯಿಯ ಮನೆಯಲ್ಲಿ ಅಧಿಕಾರ ಪಡೆಯದೆ ಗಂಡನ ಮನೆಯಲ್ಲಿ ಅಧಿಕಾರ ಪಡೆಯುತ್ತಾಳೆ. ಹೀಗಾಗಿ ಬೋಗ್ರನ ಮಗ ಚೋಮ ಬಾನಬೆಟ್ಟಿನ ಚೀಂಪುಳನ್ನು ಮದುವೆಯಾಗಿ ತನ್ನ ಮನೆಗೆ ಕರೆದುಕೊಂಡು ಬರುತ್ತಾನೆ. ಈ ಮೂಲಕ ಚೀಂಪುಳು ಚೋಮನ ಮನೆಯ ಸದಸ್ಯೆಯಾಗುತ್ತಾಳೆ. ಇಲ್ಲಿ ಮುಖ್ಯವಾಗಿ ಗಂಡಿನ ದಿಬ್ಬಣವೂ ಹೆಣ್ಣಿನ ಮನೆಗೆ ಬಂದು ಅಲ್ಲಿ ಮದುವೆಯಾಗಿ ಗಂಡಿನ ಮನೆಗೆ ಆಕೆಯನ್ನು ಕರೆದುಕೊಂಡು ಬರುವುದನ್ನು ಕಾಣಬಹುದು. ಈ ಮೂಲಕ ಮುಗೇರರಲ್ಲಿ ಹೆಣ್ಣಿನ ಮನೆಯವರೆ ಮದುವೆ ಮಾಡಿಕೊಡುವ ಸಂಪ್ರದಾಯವನ್ನು ಗುರುತಿಸಬಹುದು.

ಹಾಗೆಯೇ ಮುಗೇರರ ಮದುವೆಯಲ್ಲಿ ದುಡಿಯ ಕುಣಿತ ಸಂಪ್ರದಾಯವಾಗಿ ಬೆಳೆದು ಬಂದಿರುವುದನ್ನು ಪ್ರಾದೇಶಿಕತೆಯ ವಿಶಿಷ್ಟತೆಯಾಗಿ ಗುರುತಿಸಬಹುದು. ಈ 'ದುಡಿ' ಯನ್ನು ಮುಗೇರರ ಪಾರಂಪರಿಕ ವಾದ್ಯವಾಗಿ ಜನಪದ ತಜ್ಞರು ಗುರುತಿಸಿದ್ದಾರೆ. 'ದುಡಿ'ಯು ಮುಗೇರರ ಬದುಕಿನ ಅವಿಭಾಜ್ಯ ಅಂಗವಾಗಿದೆ. ಈ ಅಂಶವನ್ನು ಪ್ರಸ್ತುತ ಕಾದಂಬರಿ ಕಟ್ಟಿಕೊಟ್ಟಿದ್ದು, ದುಡಿಯೊಂದಿಗೆ ಇವರು ತಮ್ಮ ಬದುಕಿನ ದುಃಖ ದುಮ್ಮಾನಗಳನ್ನು ಹಾಡುವುದು ಕಂಡುಬರುತ್ತದೆ. ಜೊತೆಗೆ ಕುಡಿತವು ದುಡಿಯೊಂದಿಗೆ ಇವರ ಜೀವನದೊಂದಿಗೆ ಹಾಸುಹೊಕ್ಕಾಗಿ ಬೆರೆತುಕೊಂಡಿರುದನ್ನು ಈ ಕಾದಂಬರಿ ದಾಖಲಿಸುವ ಪ್ರಾದೇಶಿಕ ಅಂಶವಾಗಿದೆ.

ಈ ಕಾದಂಬರಿಯಲ್ಲಿ ಗುರುತಿಸನಬಹುದಾದ ಮತ್ತೊಂದು ಪ್ರಾದೇಶಿಕ ನೆಲೆಯೆಂದರೆ ದಲಿತ ಜನಾಂಗದ 'ಕಾಪಿ ಸೀಮೆಯ ವಲಸೆ'. ಈ ಅಂಶವನ್ನು ಕಾರಂತರ ಚೋಮನ ದುಡಿ ಕಾದಂಬರಿಯಲ್ಲೂ ಕೂಡ ಗುರುತಿಸಬಹುದು. 'ಕಾಪಿ ಸೀಮೆಯ ವಲಸೆ' ಎಂದರೆ ದಕ್ಷಿಣ ಕನ್ನಡದ ಒಕ್ಕಲಿನವರು ಮತ್ತು ಇತರ ದಲಿತ ಕುಟುಂಬಗಳು ಕಾಪಿ ಕೊಯ್ಲುವಿನ ಸಮಯದಲ್ಲಿ ಘಟ್ಟದ ಕಾಪಿ ಬೆಳೆಯುವ ತೋಟಗಳಿಗೆ ದುಡಿಮೆಗಾಗಿ ವಲಸೆ ಹೋಗುವುದಾಗಿದೆ. ಈ ಕಾದಂಬರಿಯಲ್ಲೂ ಕೂಡ ಬಾಡ ಕಾಪಿ ಸೀಮೆಗೆ ವಲಸೆ ಹೋಗುತ್ತಾನೆ. ಇವನ ಜೊತೆಗೆ ಅವನ ಪತ್ನಿ ಹಾಗೂ ಆತನ ಸುತ್ತಮುತ್ತಲಿನ ಕುಟುಂಬದ ಮಂದಿಯೂ ಹೋಗುವುದನ್ನು ಕಾಣಬಹುದು.

ದಕ್ಷಿಣಕನ್ನಡ ಜಿಲ್ಲೆಯಲ್ಲಿ ಈ ಕಾದಂಬರಿ ರೂಪುಗೊಂಡ ಸಂದರ್ಭದಲ್ಲಿ ಭತ್ತದ ಕೃಷಿ ಮಾತ್ರ ಪ್ರಧಾನವಾಗಿತ್ತು. ಭತ್ತದ ಕೃಷಿಯಲ್ಲಿ ಉದ್ಯೋಗ ಸಾರ್ವಕಾಲಿಕವಾಗಿರಲಿಲ್ಲ. ಹಾಗಾಗಿ ಕೆಲಸವಿಲ್ಲದೆ ಕಾಲಿ ಇದ್ದ ಸಮಯದಲ್ಲಿ ಇಲ್ಲಿನ ಜನ ಘಟ್ಟಕ್ಕೆ ವಲಸೆ ಹೋಗುತ್ತಿದ್ದರು.

ಎರಡನೇಯ ಸಂಗತಿ ದಕ್ಷಿಣ ಕನ್ನಡದಲ್ಲಿ ದುಡಿಮೆಗೆ ವೇತನವಾಗಿ ಅಕ್ಕಿಯನ್ನು ಮಾತ್ರ ಕೊಡುತ್ತಿದ್ದರು. ಹಣದ ರೂಪದಲ್ಲಿ ವೇತನ ಕೊಡುತ್ತಿದ್ದ ಕಾಪಿ ಸೀಮೆಗೆ ಇಲ್ಲಿಯ ಜನ ಕೆಲವಾರು ತಿಂಗಳು ಹಣದ ಸಂಪಾದನೆಗಾಗಿಯೇ ವಲಸೆ ಹೋಗುತ್ತಾರೆ. ಇದು ಈ ಕಾದಂಬರಿಯಲ್ಲಿ ಗುರುತಿಸಬಹುದಾದ ಮತ್ತೊಂದು ಪ್ರಾದೇಶಿಕತೆಯ ನೆಲೆಯಾಗಿದೆ.

ಹಾಗೆಯೇ ಕಾಪಿ ಸೀಮೆಯ ಈ ವಲಸೆ ದಕ್ಷಿಣ ಕನ್ನಡ ಜಿಲ್ಲೆಯ ಭೂ ಹಿಡುವಳಿದಾರರು ತಮ್ಮ ಒಕ್ಕಲಿನವರು ಮತ್ತು ಆಳುಕಾಳುಗಳಿಗೆ ದುಡಿಮೆಗೆ ತಕ್ಕ ವೇತನವನ್ನು ಪಾವತಿಸುತ್ತಿರಲಿಲ್ಲ ಎಂಬುದನ್ನು ತಿಳಿಸುತ್ತದೆ. ಇದಿಷ್ಟು ಕಾದಂಬರಿ ಗುರುತಿಸುವ ಪ್ರಮುಖ ಪ್ರಾದೇಶಿಕತೆಯ ಭೌತಿಕ ನೆಲೆಯಾಗಿದೆ.

ಪ್ರಾದೇಶಿಕತೆಯ ಬೌದ್ಧಿಕ ಅಂಶಗಳು

ಈ ಕಾದಂಬರಿಯಲ್ಲಿ ಪ್ರಾದೇಶಿಕತೆಯ ಭೌತಿಕ ಸಂರಚನೆಯ ಜೊತೆಗೆ ಪ್ರಾದೇಶಿಕ ವಿಶಿಷ್ಟತೆಯ ಯೋಚನಾಕ್ರಮವನ್ನು ಗುರುತಿಸಬಹುದು. ಇದನ್ನೆ ನಾನು ಪ್ರಾದೇಶಿಕತೆಯ ಬೌದ್ಧಿಕ ಅಂಶಗಳೆಂದು ಗುರುತಿಸಿದ್ದೇನೆ. ಕಾದಂಬರಿಯೊಂದರ ಕೇವಲ ಬಾಹ್ಯ ಆಕರಗಳಷ್ಟೇ ಪ್ರಾದೇಶಿಕತೆ ಇರುವುದಲ್ಲ. ಬೌದ್ಧಿಕವಾಗಿಯೂ ಕಾದಂಬರಿಯ ಪಾತ್ರಗಳ ಮಾತುಗಳಲ್ಲಿ, ಪಾತ್ರಗಳ ಪರಸ್ಪರ ಸಂವಹನದಲ್ಲಿ, ಯೋಚನಾ ಕ್ರಮಗಳಲ್ಲಿ ಹಾಗೂ ಸಂಘಟನೆ ಮತ್ತು ಹೋರಾಟದ ಸಂರಚನೆಗಳಲ್ಲಿ ಪ್ರಾದೇಶಿಕತೆಯನ್ನು ಕಾಣಬುದುದಾಗಿದೆ. ಇದು ಬಾಡ ಕಾದಂಬರಿಯಲ್ಲೂ ದಾಖಲಾಗಿದೆ.

ಚೋಮನ ಹೆಂಡತಿ ದುಡಿಮೆಯ ಪ್ರತಿಫಲಾಪೇಕ್ಷೆಯ ಕಾರಣಕ್ಕೆ ಕೂಡು ಕುಟುಂಬವನ್ನು ತೊರೆದು ಬೇರೆಯೇ ಆದ ಬಿಡಾರವನ್ನು ಹೂಡುತ್ತಾಳೆ. ಆದರೆ ತಾನು ಕಾಯಿಲೆಗೆ ಬಿದ್ದಾಗ ಗಂಡನ ಮನೆಯವರ ಪ್ರೀತಿ ಶೂಶ್ರುಸೆ ಅರಿವಾಗಿ ಮತ್ತೆ ಕೂಡುಕುಟುಂಬಕ್ಕೆ ಬರುತ್ತಾಳೆ. ಈ ಸಂಗತಿ ಹಳ್ಳಿಯ ಅಥವಾ ಸೂಚಿತ ಈ ಬುಡಕಟ್ಟು ಜನ ಅಪಾರವಾಗಿ ಮನುಷ್ಯನನ್ನೂ ಪ್ರೀತಿಸುವವರು, ತಮ್ಮ ತಮ್ಮಲ್ಲಿ ಹಗೆಯನ್ನು ಬೆಳೆಸಿಕೊಂಡು ಹೋಗದವರು ಎಂಬುದನ್ನು ಸೂಚಿಸುತ್ತದೆ. ಒಂದಾಗಿ ಬಾಳುವ ಹಾಗೂ ಕೂಡು ಕುಟುಂಬವು ಹೇಗೆ ಪರಸ್ಪರ ಕಷ್ಟ ಸುಖಗಳಿಗೆ ಸ್ಪಂದಿಸುತ್ತಿತ್ತು ಎನ್ನುವುದರ ಚಿತ್ರಣದ ಮೂಲಕ ಈ ಕಾದಂಬರಿ ಪ್ರಾದೇಶಿಕ ಕೌಟುಂಬಿಕ ವ್ಯವಸ್ಥೆಯ ಯೋಚನಾ ಕ್ರಮವೊಂದನ್ನು ಕಟ್ಟಿಕೊಡುತ್ತದೆ.

ಸಾಮಾನ್ಯವಾಗಿ ಅಧಿಕಾರದ ವಿರುದ್ಧದ ಹೋರಾಟ ನಡೆಯುವಾಗ ಅಧಿಕಾರ ಸ್ಥಾನದಲ್ಲಿರುವವರು ವಿವಿಧ ಆಮೀಶಗಳನ್ನು ಒಡ್ಡಿ ಹೋರಾಟದ ದಿಕ್ಕನ್ನು ತಪ್ಪಿಸುತ್ತಾರೆ. ಪ್ರಸ್ತುತ ಕಾದಂಬರಿಯಲ್ಲಿ ಬಾನಬೆಟ್ಟುವಿನಲ್ಲಿ ಪಡಿಯಾರರು ಹಾಗೂ ಕಂಪೆನಿಯ ವಿರುದ್ಧದ ಹೋರಾಟದಲ್ಲಿ ಬಾಡನ ಸಂಘಟನೆ ಗೆಲುವನ್ನು ಪಡೆಯುತ್ತದೆ. ಇಲ್ಲಿ ನಿರ್ಧಿಷ್ಟ ಪ್ರದೇಶವೊಂದರ ಜನ ತಮ್ಮ ಅಸ್ತಿತ್ವಕ್ಕಾಗಿ ರಾಜಿ ಮಾಡಿಕೊಳ್ಳದ ಮನೋಭಾವವನ್ನು ಕಂಡುಕೊಳ್ಳಬಹುದು.

ಎರಡನೆಯದಾಗಿ ಕಾಪಿ ಸೀಮೆಯಲ್ಲಿ ಸುತ್ತಾಡಿದ ಬಾಡ ಶಿಕ್ಷಣಕ್ಕೆ ತೆರೆದುಕೊಂಡು ತನ್ನ ಹಕ್ಕುಗಳನ್ನು ಕಂಡುಕೊಳ್ಳುವ ನೆಲೆ ದಲಿತ ವಸ್ತುವುಳ್ಳ ಕಾದಂಬರಿಗಳಲ್ಲಿ ವಿಶಿಷ್ಟವಾಗಿದೆ. ಈತ ತನ್ನ ಸ್ಥಿತಿಗೆ ಮರುಗದೆ ಅಧೈರ್ಯಕ್ಕೆ ಒಳಪಡದೆ ಅನ್ಯಾಯದ ವಿರುದ್ಧ ಹೋರಾಡಬೇಕು, ಸಂಘಟಿತರಾಗಬೇಕು ಎನ್ನುವ ಮನೋಭಾವನ್ನು ರೂಪಿಸಿಕೊಳ್ಳುತ್ತಾನೆ. ಇದು ಪ್ರಗತಿಶೀಲ ಚಳುವಳಿಯ ಪ್ರೇರಣೆಯೂ ಹೌದು. ಜೊತೆಗೆ ಪ್ರಾದೇಶಿಕ ಬೌದ್ಧಿಕ ಸಂರಚನೆಯ ಅಂಶವೂ ಹೌದು.

ಈ ಮೂಲಕ ಈ ಕಾದಂಬರಿ ಪ್ರಾದೇಶಿಕ ಅಂಶಗಳನ್ನು ಬಹುಸ್ತರದಲ್ಲಿ ಕಟ್ಟಿಕೊಟ್ಟು ಮುಗೇರ ಜನಾಂಗದ ಬದುಕಿನ ವಿವರಗಳನ್ನು ದಾಖಲಿಸುವಲ್ಲಿ ಯಶಸ್ವಿಯಾಗಿದೆ.

ಮತ್ತು ಕೊನೆಯಲ್ಲಿ ಬಾಡನ ಹೋರಾಟದ ಗೆಲುವಿನ ಮೂಲಕ ದಲಿತರಿಗೆ ಭೂಮಾಲಿಕತ್ವವನ್ನು ಒದಗಿಸಿಕೊಟ್ಟಿದೆ.

ಪರಾಮರ್ಶನ ಗ್ರಂಥಗಳು

1. ಕೆ.ವಿ.ರಾವ್ ಉಜಿರೆ; ಬಾಡ; ಕರ್ನಾಟಕ ಸಂಘ ಪುತ್ತೂರು; 1996.
2. ಶಿವರಾಮ ಪಡಿಕ್ಕಲ್; ನಾಡು ನುಡಿಯ ರೂಪಕ; ಪ್ರಸಾರಾಂಗ ಮಂಗಳೂರು ವಿ.ವಿ; 2001.
3. ಡಾ. ಶೈಲಾ ಯು; ಪ್ರಾದೇಶಿಕತೆಯು ಕಲ್ಲು ಹೇಳುವ ಕಥೆಗಳೂ; ಶ್ರೀ ಬೆನೆಕ ಪ್ರಕಾಶನ; 2012.

❖❖❖

ತಿಳಿಸುವನು ಎಲ್ಲವನು
ಕಾಲಪುರುಷನು ತಾನು
ತಿಳಿಯಬೇಕಾದರೆ
ಕಾಯಬೇಕು ನೀನು.

ಸಾಹಿತ್ಯ ಮತ್ತು ಶಾಸನಗಳಲ್ಲಿ ಅಣ್ಣಿಗೇರಿ

ಸಂಜಯ ಎನ್. ಹಂಚೆ
ಸರಕಾರಿ ಪ್ರಥಮ ದರ್ಜೆ ಕಾಲೇಜು, ಗದಗ

ಕನ್ನಡನಾಡಿನ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಇತಿಹಾಸದೊಂದಿಗೆ ಹಾಸುಹೊಕ್ಕಾಗಿ ಬೆಳೆದು ಬಂದಿರುವ ಹಲವು ಐತಿಹಾಸಿಕ ಕೇಂದ್ರಗಳಲ್ಲಿ ಧಾರವಾಡ ಜಿಲ್ಲೆಯ ನವಲಗುಂದ ತಾಲ್ಲೂಕಿನಲ್ಲಿರುವ ಅಣ್ಣಿಗೇರಿಯೂ ಒಂದಾಗಿದೆ. ಇದು ನವಲಗುಂದದಿಂದ ದಕ್ಷಿಣಕ್ಕೆ ಹತ್ತೊಂಬತ್ತು ಕಿ.ಮೀ., ಹುಬ್ಬಳ್ಳಿಯಿಂದ ಪೂರ್ವಕ್ಕೆ ಮೂವತ್ತೈದು ಕಿ.ಮೀ. ಮತ್ತು ಗದಗದಿಂದ ಪಶ್ಚಿಮಕ್ಕೆ ಇಪ್ಪತ್ತು ಕಿ.ಮೀ. ಅಂತರದಲ್ಲಿದೆ. ಇಲ್ಲಿರುವ ಶಾಸನಗಳು, ಬಸದಿಗಳು, ದೇವಾಲಯಗಳು, ಶಿಲ್ಪಗಳು, ಸ್ಮಾರಕಗಲ್ಲುಗಳು, ಗೋಸಾಸಗಲ್ಲುಗಳು, ಮೇರೆಗಲ್ಲುಗಳು, ವೀರಶೈವ (ಶಿಕ್ಕೆದೇಸಾಯಿ) ದೇಸಗತಿ ಮನೆತನದ ವಾಡೆ, ಆದಿಕವಿ ಪಂಪನ ವಂಶಸ್ಥರಾದ ಜೈನ (ದೇಶಪಾಂಡೆ) ದೇಸಗತಿ ಮನೆತನದ ವಾಡೆ, 2010– 2012ರ ಅವಧಿಯಲ್ಲಿ ಬೆಳಕಿಗೆ ಬಂದಿರುವ ಆರುನೂರಕ್ಕು ಹೆಚ್ಚಿನ ತಲೆಬುರುಡೆಗಳು ಸಮಕಾಲೀನ ರಾಜಕೀಯ, ಆಡಳಿತ, ಧಾರ್ಮಿಕ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಅಧ್ಯಯನಕ್ಕೆ ಅಪರೂಪದ ದಾಖಲೆಗಳಾಗಿವೆ. ಈ ಪಟ್ಟಣವು ಕ್ರಿ.ಶ. ಸುಮಾರು 7ನೆಯ ಶತಮಾನದಿಂದ 15ನೆಯ ಶತಮಾನದವರೆಗೂ ಬೆಳ್ವೊಲ–300 ಆಡಳಿತ ವಿಭಾಗದ ರಾಜಧಾನಿಯಾಗಿ ಮೆರೆದಿದೆ.

ಪೌರಾಣಿಕ ಪರಂಪರೆಯ ಪ್ರಕಾರ ಅಣ್ಣಿಗೇರಿಯ ಪ್ರಾಚೀನತೆ 'ಮಹಾಭಾರತ'ದ ಕಾಲಕ್ಕೆ ಹೋಗುತ್ತದೆ. ಮಲ್ಲ(?) ಎಂಬ ಕವಿ ಕ್ರಿ.ಶ. ಸುಮಾರು 10–11ನೆಯ ಶತಮಾನದಲ್ಲಿ ರಚಿಸಿರುವನು ಎಂದು ಹೇಳಲಾದ 'ಕ್ರತುಪುರ ಮಹಾತ್ಮ್ಯ' ಪುರಾಣದ 'ಶ್ರೀ ಅಮೃತೇಶ್ವರ ಮಾಹಾತ್ಮ್ಯ' ಎಂಬ ಭಾಗದಲ್ಲಿ, ಅನ್ನಗಿರಿ ಕ್ಷೇತ್ರದ ವಿಸ್ತಾರ, ಶಿವನು ಇಲ್ಲಿಗೆ ಬಂದು ನೆಲೆಸಿರುವುದು, ಬ್ರಹ್ಮದೇವ ಮತ್ತು ಸಮಸ್ತ ದೇವತೆಗಳು ಇಲ್ಲಿಗೆ ಆಗಮಿಸಿದುದು, ಭೂಗರ್ಭತವಾದ ಲಿಂಗವು ಭೂಮಿಯಿಂದ ಹೊರಗೆ ಬಂದುದು, ಐದು ಕಾಮಧೇನುಗಳು (ಆಕಳುಗಳು) ಪ್ರತ್ಯಕ್ಷವಾದುದು, ಬ್ರಹ್ಮದೇವನು ಯಜ್ಞಪೂರ್ವಕವಾಗಿ ಆ ಲಿಂಗವನ್ನು ಪ್ರತಿಷ್ಠಾಪನೆ ಮಾಡಿದುದು, ಸೂತಪುರಾಣಿಕನು ಶೌನಕಾದಿ ಋಷಿಗಳಿಗೆ ಅಮೃತೇಶ್ವರನ ಮಹಿಮೆಯನ್ನು ಹೇಳುವುದು ಇತ್ಯಾದಿ ವಿವರಗಳೊಂದಿಗೆ–

ಶ್ರುಣುಧ್ವಮಮೃತೇಶಸ್ಯ ಮಾಹಾತ್ಮ್ಯಂ ಋಷಿಸತ್ತಮಾಃ
ಸಂಪಾದಯೇತ ನ ಪ್ರೀತಿಂ ಶ್ರೋತ್ರೂಣಾಂ ಕೋ ಭವಾದ್ರಶಾಂ ॥

ಯದಾ ಪಂಚ ಸುತಾಃ ಪಾಂಡೋರ್ವನವಾಸಮಕುರ್ವತ
ಋಷಿಭಿರ್ಬಹುಸಾಹಸ್ರೈರ್ವೃತಾ ಧರ್ಮಪರಾಯಣಾಃ ॥

ನೀರಿಕ್ಷ್ಯಮಾಣಾಃ ಕ್ಷೇತ್ರಾಣಿ ತೀರ್ಥಾನಿ ಚ ತತಸ್ತತಃ
ಕೃಷ್ಣಾಯಾ ದಕ್ಷಿಣೇ ಕೂಲೇ ಯಾನಿ ಯಾನಿ ವಿಶೇಷತಃ ॥

ತೇ ಕ್ರಮೇಣೈವ ಸಂಪ್ರಾಪ್ತಾಃ ಕ್ಷೇತ್ರಂ ಸಿದ್ಧಿಪ್ರದಂ ಭುವಿ
ಖುಷಿಭಿಃ ಸಹಿತಾ ವೀರಾಸ್ತದನ್ನಗಿರಿ ಸಂಜ್ಞಿತಂ ॥

ಮಧ್ಯಾಹ್ನರ್ಕಾನಿದಾದ್ಯಾರ್ತಾಃ ಕ್ಷುಧಿತಾಶ್ಚ ಪಿಪಾಸಿತಾಃ
ಅಮೃತೇಶ್ವರಮಾಸಾದ್ಯ ಪ್ರಣಾಮೋರ್ದಂಡವದ್ಭುವಿ ॥

ಪಾಂಡವರು ಇಲ್ಲಿಗೆ ಆಗಮಿಸಿ ಅಮೃತೇಶ್ವರನ ದರ್ಶನ ಮಾಡಿ, ತಮ್ಮ ಅಭಿಲಾಷೆಗಳನ್ನು ಪೂರೈಸಿಕೊಂಡಿರುವುದು ದಾಖಲಾಗಿದೆ.[1] ಆದರೆ ಈ ಪುರಾಣದಲ್ಲಿ ನಿರೂಪಿತವಾಗಿರುವ ಸ್ಥಳನಾಮಗಳು, ಭೌಗೋಳಿಕ ವಿಚಾರಗಳು, ದೇವಾಲಯಗಳು ಇತ್ಯಾದಿ ವಿವರಣೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ಇದು ಕ್ರಿ.ಶ. ಸುಮಾರು 17–18ನೆಯ ಶತಮಾನದ ತರುವಾಯದಲ್ಲಿ ರಚಿತವಾಗಿರುವಂತೆ ತೋರುತ್ತದೆ.

ಐತಿಹಾಸಿಕವಾಗಿ ಅಣ್ಣಿಗೇರಿಯ ಪ್ರಾಚೀನತೆ ಬೃಹತ್ ಶಿಲಾಯುಗ ಸಂಸ್ಕೃತಿ ಕಾಲಾವಧಿಯಷ್ಟು ಹಿಂದಕ್ಕೆ ಹೋಗುತ್ತದೆ. ಇತ್ತೀಚಿಗೆ ಈ ಪಟ್ಟಣದಲ್ಲಿ ಕಲ್ಲುಬಂಡೆಗಳು ಮತ್ತು ಮಡಕೆ ಚೂರುಗಳು ಬೆಳಕಿಗೆ ಬಂದಿವೆ. ಇವುಗಳನ್ನು ಅಧ್ಯಯನ ಮಾಡಿರುವ ಆರ್.ಎಂ. ಷಡಕ್ಷರಯ್ಯ ಅವರು ಈ ಕಲ್ಲುಬಂಡೆಗಳು ಬೃಹತ್ ಶಿಲಾಯುಗ ಸಂಸ್ಕೃತಿಯ ಜನರು ಗೋರಿಗಳನ್ನು ನಿರ್ಮಿಸಲು ಮತ್ತು ಮಡಕೆ ಚೂರುಗಳು ಆಹಾರ, ನೀರು ಇತ್ಯಾದಿ ವಸ್ತುಗಳನ್ನು ಸಂಗ್ರಹಿಸಲು ಬಳಸಿದ ಮಡಕೆಗಳಿಗೆ ಸಂಬಂಧಿಸಿವೆ ಎಂದು ಸೂಚಿಸಿದ್ದಾರೆ.[2] ಮಗಧದ ನಂದರು, ಮೌರ್ಯರು ದಕ್ಷಿಣ ಭಾರತದಲ್ಲಿ ತಮ್ಮ ಆಳ್ವಿಕೆಯ ಪ್ರಭಾವವನ್ನು ಹೊಂದಿದ್ದ ಕಾಲಾವಧಿಯಲ್ಲಿ ಅಣ್ಣಿಗೇರಿಯ ಸ್ಥಾನಮಾನ ಹೇಗಿತ್ತೆಂಬುದಕ್ಕೆ ದಾಖಲೆಗಳು ಲಭ್ಯವಿಲ್ಲ. ಶಾತವಾಹನರು, ಬನವಾಸಿ ಕದಂಬರು ಈ ಪ್ರದೇಶವನ್ನು ಆಳಿದರಾದರೂ, ಅಂದಿನ ಯಾವುದೇ ದಾಖಲೆಗಳು ಈ ಪಟ್ಟಣದಲ್ಲಿ ಬೆಳಕಿಗೆ ಬಂದಿಲ್ಲ. ಬಾದಾಮಿ ಚಲುಕ್ಯರ ಆಳ್ವಿಕೆಯ ಕಾಲಾವಧಿಯಲ್ಲಿಯೇ ಈ ಪಟ್ಟಣವು ಸಾಂಸ್ಕೃತಿಕ ಕೇಂದ್ರವಾಯಿತ್ತೆಂಬುದು ತಿಳಿಯುತ್ತದೆ.

ಅಣ್ಣಿಗೇರಿಯ ಪ್ರಪ್ರಥಮ ಪ್ರಸ್ತಾಪವು ಚಲುಕ್ಯರ 1ನೆಯ ವಿಕ್ರಮಾದಿತ್ಯನ ಕಾಲಾವಧಿಯ ಗದಗ ತಾಲ್ಲೂಕಿನ ಕುರ್ತಕೋಟಿಯ ಕ್ರಿ.ಶ.670–71ರ ಶಾಸನದಲ್ಲಿ ಗೋಚರಿಸುತ್ತದೆ.[3] ಅದರಲ್ಲಿ ಇದು 'ಅಣ್ಣಿಗೆಱ' ಎಂದು ದಾಖಲಾಗಿದೆ. ಅಣ್ಣಿಗೇರಿಯಲ್ಲಿರುವ ಇಮ್ಮಡಿ ಕೀರ್ತಿವರ್ಮ ಸತ್ಯಾಶ್ರಯನ ಕ್ರಿ.ಶ.750–51ರ ಶಾಸನದಲ್ಲಿ–

ಕೀರ್ತಿವರ್ಮ್ಮ ಸತ್ಯಾಶ್ರಯ ಶ್ರೀ ಪ್ರಿಥುವೀವಲ್ಲಭ
ಮಹಾರಾಜಾಧಿರಾಜ ಪರಮೇಶ್ವರ ಭಟಾರರ ರಾಜ್ಯಂ
ಒನ್ದುತ್ತರಮಭಿವೃದ್ಧಿ ಸಲೆ ಆಱನೆಯಾ ವರ್ಷಮ್ಪ್ರವರ್ತ್ತ
ಮಾನಮಾಗೆ ಜೇಬುಳಗೇರಿಗೆ ಕಲಿಯಮ್ಮ ಗಾಮುಣ್ಡೊ
ಗೆಯ್ದೀ ಚೇದಿಯಮಾನ್ಮಾಡಿಸಿದೋನ್ ಇದಱ ಮುನ್ದೆ
ಕೊಣ್ಡೆ ಶುಲರ ಕುಪ್ಪ ಕೀರ್ತ್ತಿವರ್ಮ್ಮ ಗೋಸಾಸಿಯಾ
ನಿಱಿಸಿದಾ ಕೀರ್ತ್ತನಂ ....

'ಜೇಬುಳಗೇರಿ'ಯಲ್ಲಿ ಕಲಿಯಮ್ಮ ಎಂಬುವವನು ಗಾವುಂಡಗೈಯುತ್ತಿದ್ದನು ಎಂದು ಪ್ರಸ್ತಾಪವಿದೆ.[4] ಇದು ಅಂದು ಅಣ್ಣಿಗೇರಿ ಸಮೀಪದ ಚಿಕ್ಕ ಗ್ರಾಮ ಅಥವಾ ಅಣ್ಣಿಗೇರಿಯ ಒಂದು ಭಾಗದ ಹೆಸರಾಗಿರುವಂತೆ ತೋರುತ್ತದೆ. ಇದು ಇಂದಿನ 'ಜಾಡಗೇರಿ' ಆಗಿರುವಂತೆ ಭಾಸವಾಗುತ್ತದೆ. ಚಲುಕ್ಯರ ಕಾಲಾವಧಿಯ ಯಾವುದೇ ಶಾಸನಗಳಲ್ಲಿ ಅಣ್ಣಿಗೇರಿ

ಬೆಳ್ವೊಲನಾಡಿನ ರಾಜಧಾನಿಯಾಗಿತ್ತು ಎಂಬುದು ದಾಖಲಾಗಿಲ್ಲ. ಆದರೆ ಮಳಖೇಡದ ರಾಷ್ಟ್ರಕೂಟರ ಕಾಲಾವಧಿಯಲ್ಲಿ ಅಣ್ಣಿಗೇರಿ ಬೆಳ್ವೊಲನಾಡಿನ ರಾಜಧಾನಿಯಾಗಿತ್ತೆಂಬುದು ಸಮಕಾಲೀನ ಕೆಲವು ಶಾಸನಗಳಲ್ಲಿ ಸ್ಪಷ್ಟವಾಗಿ ದಾಖಲಾಗಿದೆ. ಹರಪನಹಳ್ಳಿ ತಾಲ್ಲೂಕಿನ ನೀಲಗುಂದ ಮತ್ತು ಶಿಗ್ಗಾಂವ ತಾಲ್ಲೂಕಿನ ಶಿರೂರದ ಕ್ರಿ.ಶ.866ರ ಶಾಸನಗಳಲ್ಲಿ–

ಶ್ರೀ ನೃಪತುಂಗನಾಮಾಂಕಿತ ಲಕ್ಷ್ಮೀವಲ್ಲಭೇನ್ದ್ರಂ ಚನ್ದ್ರಾದಿತ್ಯರಕಾಲಂ
ವರೆಗಂ ಮಹಾವಿಷ್ಣು ರಾಜ್ಯಂಬೊಲುತ್ತರೋತ್ತರಂ ರಾಜ್ಯಾಭಿವೃದ್ಧಿ
ಸಲುತ್ತಿರೆ ಶಕನೃಪಕಾಲಾತೀತ ಸಂವತ್ಸರಂಗಳೇೞ್ನೂರೆಣ್ಭತ್ತೆಣ್ಟನೆಯ
ವ್ಯಯಮೆಂಬ ಸಂವತ್ಸರಂ ಪ್ರವರ್ತಿಸೆ ಶ್ರೀಮದಮೋಘವರ್ಷ
ನೃಪತುಂಗ ನಾಮಾಂಕಿತನಾ ವಿಜಯರಾಜ್ಯಪ್ರವರ್ದ್ಧಮಾನ
ಸಂವತ್ಸರಂಗಳ ಅಯ್ವತ್ತೆರಡು ಮುತ್ತರೋತ್ತರಂ ರಾಜ್ಯಾಭಿವೃದ್ಧಿ
ಸಲುತ್ತಿರೆ ಅತಿಶಯಧವಳನರೇನ್ದ್ರ ಪ್ರಸಾದದಿನ್ದಮೋಘವರ್ಷದೇವ
ಪಾದಪಂಕಜಭ್ರಮರ ವಿಶಿಷ್ಟಜನಾಶ್ರಯನಪ್ಪ ಶ್ರೀಮದ್ದೇವಣ್ಣಯ್ಯಂ
ಬೆಳ್ವೊಲ ಮೂನೂಱುಮನಾಳುತ್ತಂ ಅಣ್ಣಿಗೆಱೆಯ(ಯೊ)ಳಿರೆ
ಜ್ಯೇಷ್ಠಮಾಸದಮಾವಾಸ್ಯೆಯುಮಾದಿತ್ಯವಾರಮುಮಾಗೆ ಸೂರ್ಯ್ಯ
ಗ್ರಹಣದನ್ದು ಶ್ರೀವೂರದ ರವಿಕಯ್ಯಂ ಮೊದಲಾಗಿ ಇೞ್ನೂರ್ವ್ವರುಂ
ಮಹಾಜನದ ಕಾಲಂ ಕಟ್ಟಿ ತುಪ್ಪದೆಱೆಯಂ ಬೀ(ಬಿ)ಟ್ಟೊಂ ॥ ....

1ನೆಯ ಅಮೋಘವರ್ಷನ ಮಹಾಸಾಮಂತ ದೇವಣ್ಣಯ್ಯನು ಅಣ್ಣಿಗೇರಿಯಿಂದ ಬೆಳ್ವೊಲ–300 ವಿಭಾಗವನ್ನು ಆಳುತ್ತಿದ್ದನೆಂದು ನಿರೂಪಣೆಗಳಿವೆ.[5]

ರಾಷ್ಟ್ರಕೂಟರ ತರುವಾಯ ಕಲ್ಯಾಣದ ಚಾಳುಕ್ಯರು, ಕಲ್ಯಾಣದ ಕಲಚೂರಿಗಳು, ದೇವಗಿರಿ ಸೇವುಣರು, ದೋರಸಮುದ್ರದ ಹೊಯ್ಸಳರ ಆಳ್ವಿಕೆಯ ಕಾಲಾವಧಿಯಲ್ಲಿಯೂ ಅಣ್ಣಿಗೇರಿ ಬೆಳ್ವೊಲನಾಡಿನ ರಾಜಧಾನಿಯಾಗಿತ್ತು. ಇದನ್ನು ಸ್ಥಳೀಯ ಮತ್ತು ಇತರೆಡೆಯ ಶಾಸನಗಳು ದೃಢಪಡಿಸುತ್ತವೆ. ಅಣ್ಣಿಗೇರಿಯ ಕ್ರಿ.ಶ.1059ರ ಶಾಸನದಲ್ಲಿ 'ರಾಜಧಾನಿ ಅಣ್ಣಿಗೆಱೆ',[6] ಕ್ರಿ.ಶ.1075–76ರ ಶಾಸನದಲ್ಲಿ 'ಬೆಳ್ವೊಲದ ಬಳಿಯ ರಾಜಧಾನಿ ಅಣ್ಣಿಗೆಱೆ,[7] ಕ್ರಿ.ಶ. 1161ರ ಶಾಸನದಲ್ಲಿ 'ಶ್ರೀಮದ್ರಾಜಧಾನಿ ಪಟ್ಟಣವಣ್ಣಿಗೆಱೆ,[8] ಕ್ರಿ.ಶ.1162ರ ಶಾಸನದಲ್ಲಿ 'ಶ್ರೀಮದ್ರಾಜಧಾನಿ ಪಟ್ಟಣಮಣ್ಣಿಗೆಱೆ',[9] ಕ್ರಿ.ಶ.1170ರ ಶಾಸನದಲ್ಲಿ 'ಚತುರ್ಯ್ಯುಗ ರಾಜಧಾನಿಯೆನಿಸಿದಣ್ಣಿಗೆಱೆ',[10] ಕ್ರಿ.ಶ.1173ರ ಶಾಸನದಲ್ಲಿ 'ಚತುರ್ಯ್ಯುಗ ರಾಜಧಾನಿ ಯಣ್ಣಿಗೆಱೆ',[11] ಕ್ರಿ.ಶ.1176ರ ಶಾಸನದಲ್ಲಿ 'ರಾಜಧಾನಿ ಪಟ್ಟಣ',[12] ಕ್ರಿ.ಶ.1179ರ ಶಾಸನದಲ್ಲಿ 'ಶ್ರೀಮದ್ರಾಜಧಾನಿ ಪಟ್ಟಣ',[13] ಕ್ರಿ.ಶ.1184ರ ಶಾಸನದಲ್ಲಿ 'ಶ್ರೀಮದ್ರಾಜಧಾನಿ ಪಟ್ಟಣವಣ್ಣಿಗೆಱೆ',[14] ಕ್ರಿ.ಶ.1190ರ ಶಾಸನದಲ್ಲಿ 'ಶ್ರೀಮದ್ರಾಜಧಾನಿ ಪಟ್ಟಣವಣ್ಣಿಗೆಱೆ',[15] ಕ್ರಿ.ಶ.1197ರ ಶಾಸನದಲ್ಲಿ 'ಶ್ರೀಮದ್ರಾಜಧಾನಿ ಪಟ್ಟಣವಣ್ಣಿಗೆಱೆ',[16] ಕ್ರಿ.ಶ. 1200ರ ಶಾಸನದಲ್ಲಿ 'ಶ್ರೀಮದ್ರಾಜಧಾನಿ ಪಟ್ಟಣ ವಣ್ಣಿಗೆಱೆ',[17] ಕ್ರಿ.ಶ. ಸುಮಾರು 12ನೆಯ ಶತಮಾನದ ಶಾಸನದಲ್ಲಿ 'ಶ್ರೀಮದ್ರಾಜಧಾನಿ ಪಟ್ಟಣ ವಣ್ಣಿಗೆಱೆ',[18] ಕ್ರಿ.ಶ. ಸುಮಾರು 12ನೆಯ ಶತಮಾನದ ಶಾಸನದಲ್ಲಿ 'ರಾಜಧಾನಿ ಅಣ್ಣಿಗೆಱೆ',[19] ಕ್ರಿ.ಶ.1206–07ರ ಶಾಸನದಲ್ಲಿ 'ಶ್ರೀಮದ್ರಾಜಧಾನಿ ಪಟ್ಟಣವನ್ನಿಂಗೆಱೆ',[20] ಕ್ರಿ.ಶ.1209ರ ಶಾಸನದಲ್ಲಿ 'ಶ್ರೀಮದ್ರಾಜಧಾನಿ ಪಟ್ಟಣವಣಿಂಗೆಱೆ',[21] ಕ್ರಿ.ಶ.1208ರ ಶಾಸನದಲ್ಲಿ 'ಶ್ರೀಮದ್ರಾಜಧಾನಿ ಪಟ್ಟಣವಣ್ಣಿಗೆಱೆ',[22] ಕ್ರಿ.ಶ.1202ರ ಶಾಸನದಲ್ಲಿ 'ರಾಜಧಾನಿ ಪಟ್ಟಣಂ ಅಣ್ಣಿಗೆಱೆ',[23] ಕ್ರಿ.ಶ.1205ರ ಶಾಸನದಲ್ಲಿ

'ಶ್ರೀಮದ್ರಾಜಧಾನಿ ಪಟ್ಟಣ ವಣ್ಣಿಂಗೆಱೆ',[24] ಕ್ರಿ.ಶ. ಸುಮಾರು 13ನೆಯ ಶತಮಾನದ(ಕ್ರಿ.ಶ. 1205) ಶಾಸನದಲ್ಲಿ 'ಶ್ರೀಮದ್ರಾಜಧಾನಿ ಪಟ್ಟಣವಣ್ಣಿಗೆಱೆ',[25] ಕ್ರಿ.ಶ.1208ರ ಶಾಸನದಲ್ಲಿ 'ಶ್ರೀಮದ್ರಾಜಧಾನಿ ಪಟ್ಟಣವಂಣ್ಣಿಗೆಱೆ',[26] ಕ್ರಿ.ಶ.1228ರ ಶಾಸನದಲ್ಲಿ 'ರಾಜಧಾನಿ ಪಟ್ಟಣ ವಂಣ್ಣಿಗೆಱೆ',[27] ಕ್ರಿ.ಶ.1231ರ ಶಾಸನದಲ್ಲಿ 'ಶ್ರೀಮಚ್ಚಯುರ್ಯುಗದ ರಾಜಧಾನಿ ಪಟ್ಟಣವಂಣ್ಣಿಂಗೆಱೆ'[28] ಎಂಬ ನಿರೂಪಣೆಗಳಿವೆ. ಆಂಧ್ರಪ್ರದೇಶದ ಕರೀಮನಗರ ಜಿಲ್ಲೆಯ ಕುರ್ಕ್ಯಾಲದಲ್ಲಿರುವ ಕನ್ನಡದ ಆದಿಕವಿ ಪಂಪನ ಸಹೋದರ ಜಿನವಲ್ಲಭನ ಕ್ರಿ.ಶ. ಸುಮಾರು 10ನೆಯ ಶತಮಾನದ ಶಾಸನದಲ್ಲಿ 'ಬೆಳ್ವೊಲದಣ್ಣಿಗೆಱೆ',[29] ಹುನಗುಂದ ತಾಲ್ಲೂಕಿನ ನಂದವಾಡಿಗೆಯ ಕ್ರಿ.ಶ. ಸುಮಾರು 11ನೆಯ ಶತಮಾನದ(ಕ್ರಿ.ಶ.1065) ಶಾಸನದಲ್ಲಿ 'ರಾಜಧಾನಿ ಯಣ್ಣಿಗೆಱೆ',[30] ಹುಬ್ಬಳ್ಳಿಯ ಕ್ರಿ.ಶ.1248ರ ಶಾಸನದಲ್ಲಿ 'ಸ್ರೀಮದ್ರಾಜಧಾನಿ ಪಟ್ಟಣಂ ಅಣ್ಣಿಗೆರೆ',[31] ಧಾರವಾಡ ತಾಲ್ಲೂಕಿನ ಹೆಬ್ಬಳ್ಳಿಯ ಕ್ರಿ.ಶ. 1248ರ ಶಾಸನದಲ್ಲಿ 'ಶ್ರೀಮದ್ರಾಜಧಾನಿಪಟ್ಟಣಂ ಅಣ್ಣಿಗೆಱೆ'[32] ಪ್ರಸ್ತಾಪಗಳಿವೆ. ಈ ಮೇಲಿನ ಎಲ್ಲ ಶಾಸನಗಳ ಹಿನ್ನೆಲೆಯಲ್ಲಿ ಅಣ್ಣಿಗೇರಿ ಕ್ರಿ.ಶ. ಸುಮಾರು 7ನೆಯ ಶತಮಾನದಿಂದ 15ನೆಯ ಶತಮಾನದವರೆಗೂ ಬೆಳ್ವೊಲನಾಡಿನ ರಾಜಧಾನಿಯಾಗಿತ್ತೆಂಬುದು ಸ್ಪಷ್ಟವಾಗುತ್ತದೆ.

ರಾಜಧಾನಿ ಪಟ್ಟಣ ಅಣ್ಣಿಗೇರಿಯ ಭೌಗೋಳಿಕ ಹಿನ್ನೆಲೆ, ಪ್ರಾಕೃತಿಕ ಸೌಂದರ್ಯ, ಕೇರಿಗಳು, ದೇವಾಲಯಗಳು, ಆಡಳಿತಾಧಿಕಾರಿಗಳು ಮೊದಲಾದ ಸಂಗತಿಗಳು ಸ್ಥಳೀಯ ಮತ್ತು ಇತರೆಡೆಯ ಕೆಲವು ಶಾಸನಗಳು ಮತ್ತು ಕೃತಿ–ಕಾವ್ಯಗಳಲ್ಲಿ ಸೊಗಸಾಗಿ ವರ್ಣಿತವಾಗಿವೆ. ಅಣ್ಣಿಗೇರಿಯ ಕ್ರಿ.ಶ.1072ರ ಶಾಸನದಲ್ಲಿ–

ರೂಢಿಗೆ ರೂಢಿವೆತ್ತೆಸೆದ ಬೆಳ್ವಲದೇಶಮನಾಳ್ದ ಗಂಗಪೆ
ರ್ಮ್ಮಾಡಿಗಳಿನ್ದ ಮಣ್ಣಿಗೆಱೆ ನಾಳ್ಕೆಱೆವಟ್ಟೆನಿಸಿತ್ತು ನಾಡನಾ
ಡಾಡಿಗಳುಂಬಮೆಂಬಿನೆಗಮಾ ಪುರದೊಳು ಜಯದುತ್ತರಂಗ ಪೆ
ರ್ಮ್ಮಾಡಿಯಿನಾಯ್ತು ಬೂತುಗನರೇನ್ದ್ರನಿನಲ್ಲಿ ಜಿನೇಂದ್ರ ಮಂದಿರಂ ॥

'ಸಾಮಾನ್ಯ ಜನಕ್ಕೆ ಅಸಾಧ್ಯವಾಗಿದ್ದ ಬೆಳ್ವಲದೇಶವನ್ನಾಳಿದ ಗಂಗರ ಪೆರ್ಮಾಡಿಗಳಿಂದ (ಇಮ್ಮಡಿ ಬೂತುಗ) ಅಣ್ಣಿಗೇರಿ ಇಡೀ ನಾಡಿಗೆ ಮೂಲಸ್ಥಾನವೆನಿಸಿತ್ತು, ಈ ಪಟ್ಟಣದಲ್ಲಿ ಜಯದುತ್ತರಂಗ ಪೆರ್ಮಾಡಿ ಬಿರುದಿನ ಬೂತುಗ ನರೇಂದ್ರನಿಂದ ಜಿನೇಂದ್ರ ಮಂದಿರ ನಿರ್ಮಾಣವಾಯಿತು' ಎಂದು ನಿರೂಪಣೆಯಿದೆ.[33] ಕ್ರಿ.ಶ. 1157ರ ತ್ರುಟಿತ ಶಾಸನದಲ್ಲಿ–

ವನನಿಧಿಪರೀತಭೂತಳಸಮುದ್ಭವ ಲಕ್ಷ್ಮಿಗೆ .... ಮುಕರಂ
ನಿರನ್ತರಂ .... ನಮೊಪ್ಪಮನಾಳ್ವ ಧಾರಿಣಿ ಜನನುತಮಾದ
ಬೆಳ್ವಲಕ್ಕೆ ಸಂದ ನೆಗರ್ತ್ತೆ .... ನೆಟ್ಟ ರಮಣೀಯಮಣ್ಣಿಗೆಱೆ
ಸರ್ವ್ವಜನೋದ್ಧ ಸುಖಪ್ರದಾಯಕಂ ॥

ಆ ಪಟ್ಟಣದೊಳ್ ॥

ಗಾವುಣ್ಡವರ್ಗ್ಗಂ ವಿಧೃತಬಹುಕಳಾನೀಕ ಭೂದೇವವರ್ಗ್ಗಂ
ಪುರವರ್ಗ್ಗಂ ಮತ್ತಮುರ್ವ್ವೀಸ್ತುತನಗರಮುಮುದ್ಯದ್ಗುಣರ್ತ್ತಂತು
ವಾಯ .... ಶೌರ್ಯ್ಯಧುರ್ಯ್ಯಪ್ರ್ವರ ಮಹಿತರೆನಲ್ತೇಜಪುಣ್ಯ
ಪ್ರಭಾವೋದ್ಧುರತೇಜಃಪುಂಜ .... ಮಾಗಾತ್ರಿವರ್ಗ್ಗಂ ॥

ಗಿಡಮರಗಳಿಂದ ಆವೃತ್ತವಾದ, ಲಕ್ಷ್ಮಿಗೆ ತವರೂರಾದ, ಭೂಮಿಯಲ್ಲಿ ಪ್ರಸಿದ್ಧವಾದ

ಬೆಳ್ವಲದ ಅಣ್ಣಿಗೇರಿಯ ಸರ್ವಜನರ ಸುಖಮಯವಾದ ಜೀವನ ಮತ್ತು ಈ ಪಟ್ಟಣದ ಗಾವುಂಡವರ್ಗ, ಭೂದೇವವರ್ಗ, ಪುರವರ್ಗಗಳ ಕಾರ್ಯಗಳು ನಿರೂಪಿತವಾಗಿವೆ.[34]

ಕ್ರಿ.ಶ. 1162ರ ಶಾಸನದಲ್ಲಿ–

ವನನಿಧಿವೇಷ್ಟಿತಾಖಿಳಧರಾವಧುಗೊಪ್ಪುವ ನೂತ್ನರತ್ನ ಮಂ
ಡನತರಮೆಂಬಿನಂ ಸೊಗಯಿಕುಂ ಗಡೆ ಬೆಳ್ವಲಮಲ್ಲಿ ತಾನೆ ಸ
ಜ್ಜನವನರಮ್ಯಮಪ್ರತಿಮೆ ಸಂಪದಮಗ್ಗಳ ರಾಜಧಾನಿ ನೆ
ಟ್ಟನೆ ರಮಣೀಯಮಣ್ಣಿಗೆಱೆ ಸರ್ವ್ವಜನೋದ್ಧ ಸುಖಪ್ರದಾಯಕಂ ॥

ಗಾವುಂಡವರ್ಗ್ಗಂ ಕ್ಷಿತಿದೇವವರ್ಗ್ಗಂ ದೇವಬ್ರಜೋದ್ಯತ್ಪುರವರ್ಗ್ಗ
ಮೆಂದಿಂತಾವೀಃ ಕೃತಶ್ರೀ ವಿಳಸ ತ್ರಿವರ್ಗ್ಗಂ
ಭೂವಂದ್ಯಮಿನ್ತನ್ಯತಟಾಕಮೇಕಂ ॥

ಪುಸಿಯದುದಾರವೃತ್ತಿ ಪೊಣರ್ದೆಜದೆ ಸಾಹಸವೃತ್ತಿ ಪಾಪದ
ತ್ತ ಸಗದ ಶೌಚವೃತ್ತಿ ಚಲಮಲ್ಲದ ಸುಸ್ಥಿರವೃತ್ತಿ ನೈಜದಿಂ
ದೆಸೆಯೆ ಗುಣಾಢ್ಯವರ್ಗ್ಗ ಮನಿಳಾತಳದೊಳ್ಪಿಟದಿನ್ದೆ ಕೂರ್ತ್ತು ಕೀ
ರ್ತ್ತಿಸದನಾವನಣ್ಣಿಗೆಱೆಯ ಪ್ರಥಿತಪ್ರಬಳತ್ರಿವರ್ಗ್ಗಮಂ ॥

ಬೆಳ್ವಲನಾಡಿನ ರಾಜಧಾನಿ ಅಣ್ಣಿಗೇರಿಯ ಪ್ರಾಕೃತಿಕ ಸೌಂದರ್ಯ, ಜನರ ಸುಖಮಯವಾದ ಜೀವನ ಮತ್ತು ಇಲ್ಲಿಯ ಗಾವುಂಡವರ್ಗ, ದೇವವರ್ಗ, ಪುರವರ್ಗಗಳ ಕಾರ್ಯಚಟುವಟಿಕೆಗಳ ವಿವರವಿದೆ.[35] ಕ್ರಿ.ಶ. 1170ರ ಶಾಸನದಲ್ಲಿ–

ಪೊಲನೆಲ್ಲಂ ನವಶಾಳಿಯಿಂ ಸರಸಿಯೆಲ್ಲಂ ಪದ್ಮದಿಂ ನನ್ದನಾ
ವಳಿಯೆಲ್ಲಂ ಸಹಕಾರದಿಂ ವಿಪಣಿಯೆಲ್ಲಂ ರತ್ನದಿಂ ದೇವತಾ
ಕುಳವೆಲ್ಲಂ ರಸಗೀತ ವಾದ್ಯರವದಿಂ ಕಾನ್ತಾಳಿಯೆಲ್ಲಂ ಸಮು
ಜ್ವಳ ಲಾವಣ್ಯದಿನೊಪ್ಪಲಣ್ಣಿಗೆಱೆ ಕಣ್ಗೆಂಬಾದುದಲೆತ್ತಲುಂ ॥

ಅನ್ತತಿ ಪ್ರಖ್ಯಾತಿವೆತ್ತ ಚತುರ್ಯ್ಯುಗ ರಾಜಧಾನಿಯೆನಿಸಿದಣ್ಣಿಗೆಱೆಯ
ಮಹಾಪ್ರಭುತ್ವ ಮಹತ್ವಮಂ ತಾಳ್ದಿ ॥

ಕ್ಷಿತಿ ತಡ ಸಂಸ್ತುತಮಾದುದು
ಸತತಂ ಗಾವುಣ್ಡವರ್ಗ್ಗವಾ ದ್ವಿಜವರ್ಗ್ಗಂ
ನುತ ನಾನಾ ಸ್ಥಾನಾಚಾ
ರ್ಯ್ಯ ತಪೋಧನವರ್ಗ್ಗ ಮಿತ್ರವರ್ಗ್ಗಮತರ್ಕ್ಯ ॥

ಅಣ್ಣಿಗೇರಿಯ ಪ್ರಾಕೃತಿಕ ಸೌಂದರ್ಯ ಮತ್ತು ಇಲ್ಲಿಯ ಗಾವುಂಡವರ್ಗ, ದ್ವಿಜವರ್ಗ, ಸ್ಥಾನಾಚಾರ್ಯವರ್ಗ, ತಪೋಧನವರ್ಗಗಳ ವಿವರಗಳಿವೆ.[36] ಕ್ರಿ.ಶ. 1173ರ ಶಾಸನದಲ್ಲಿ–

ಅನುಪಮ ವನಿತಾನಿಧಿ ಸಜ್ಜನನಿಧಿ ನಾನಾ
ಪದಾರ್ತ್ಥನಿಧಿ ವಿಳಸನ್ನಂದನನಿಧಿ ದೇವಾಲಯ
ನಿಧಿಯೆನಿಸಿದುದಣ್ಣಿಗೆಱೆ ಸತ್ಸುಖೈಕನಿವಾಸಂ ॥

ಅದರೊಳ್ಸೊಗಯಿಸುವುದು ಗುಣಸದನಂ ಗಾವುಣ್ಡವರ್ಗ್ಗ
ವಾದ್ವಿಜವರ್ಗ್ಗಂ ವಿದಿತ ವಣಿಕವರ್ಗ್ಗಂ ಸದಭೀಷ್ಟುತವೀ

ತ್ರಿವರ್ಗ್ಗವಮಳಿನಮಾರ್ಗ್ಗಂ ॥

ಅಣ್ಣಿಗೇರಿ ಪಟ್ಟಣವು ಅನುಪಮ ವನಿತಾನಿಧಿ, ಸಜ್ಜನನಿಧಿ, ನಾನಾ ಪದಾರ್ತ್ಥಗಳ ನಿಧಿ, ದೇವಾಲಯ ನಿಧಿಗಳ ನಿವಾಸವಾಗಿದ್ದು, ಮತ್ತು ಇಲ್ಲಿಯ ಗಾವುಂಡವರ್ಗ, ದ್ವಿಜವರ್ಗ, ವಣಿಕವರ್ಗಗಳು ಅತ್ಯುತ್ತಮ ಗುಣಗಳಿಂದ ಸೊಗಸಾಗಿದ್ದವು ಎಂಬ ಪ್ರಸ್ತಾಪವಿದೆ.[37]

ಕ್ರಿ.ಶ. 1184ರ ಶಾಸನದಲ್ಲಿ–

ಬಳುವಳನೆ ಬೇಡದ ಕಯ .... ಗೆ ವನ್ನ ....
.... ಕಂಗೊಳಿಪ ಪುರಂಗಳಿನ ತಂನುವ
ತೋಳುವಲಪೆನೆ ಸಾಧಯಿಸಿತ್ತನೆ ಕುಂನ್ತಳದೇಶಂ ॥

ಅಲ್ಲಿ ವಿಳಾಸಿನೀಜನದ ಪುರ್ವ್ವಿನೊ .... ವೆಲೆ
ಲ್ಲೆಲ್ಲಿಯುಂ ಮ್ರಿಗಾಕ್ಷಿಯರ ಕಂಗಳೊಳಲ್ಲದೆ ಲೋಲವ್ರಿತ್ತಿಯ
ಲ್ಲೆಲ್ಲಿಯುಂ ....ಗ್ಗ್‌ಳಾ ವಿಶಯಾನ್ತರಮಂ ನಿರನ್ತರಂ ॥

ಆ ವಿಶೆಯದಲಿಪ್ಪುದು ವಿದ್ಯಾ .... ಪಟ್ಟಣಂ
ಅನ್ಯತಟಾಕದ ಮಹಿಮೋಂನತೆ ಎಂತೆದಡೆ ॥

ವಿದಳಿದ ಪದುಮವಿಲ್ಲದ ಸರೋರುಹವು .... ವಂ
ಮದಚಂಚರೀಕವಿಲ್ಲದ ಸಹಕಾರ ಮಂಜಳಿಪಗೊಜ್ಜುಗೆಯಿ
ಲ್ಲದ ಪುಶ್ಪವಾಟಿಯಿಲ್ಲದ......ಪುರವೇಂ ಕಡುರಯವಾದುದೋ ॥

ಬ .... ನಾದ್ಯಾಹುತಿನುತಿರವದಿಂ ಮಧುರವೇದ ....
ದಿ ಸತ್ರಸಾಲೆಗಳಿ .... ದೇವಾಲಯಾಳಿಗಳಿನ್ದ್ರ
.... ಮೀ ಲೀಲೆಯಂ ಮಾಳ್ಪುದು ನೋಳ್ಪೊಡಾರಾ
ಬಗೆಗೆ ಪಂಚೇಂದ್ರಿಯವ್ರೀತಿಯಂ ॥

ಸತಮುಖನಮರಾವತಿಗಂ ....
ನಚ್ಚಿನಳಕಾಪುರಿಗಂ ಪ್ರತಿಯನಿಪ್ಪನ್ಯತಟಾಕ ....
.... ನೆಗಳ ನಾದಿಪಟ್ಟಣವೆಲ್ತೆ ॥

ಛತ್ತೀಸ .... ಪುರವನೆತ್ತತ್ತೆ ನೋರ್ಪ್ಪಡಿಂದ್ರನಮರಾವತಿಗಂ
ವಿತ್ತೇಶನಗ್ಗದೆಳಕಾಪತ್ತನದಿಂ ಮಿಗಿಲೆನಿಸಿದನ್ಯತಟಾಕಂ ಕ್ಷೀರಾಬ್ಧಿಯಿಂದು
ದಯಿಸಿದಾ ವಾರವಧೂತತಿಗ ವಣ್ಣಿಗೆಱೆಯೊಳೆ ನೆಗಳ್ದ ನೀರೇಜಮುಖಿ
ಯರೆನಿಸಿ .... ಜನವಧಿಕವಲ್ಲೆ .... ಸಂನಿಧಾನ ....
ನ್ರಿಪಯೌವರಾಜ್ಯಸಿಂಹಾಸನಮುಂ .... ಕಾನ್ತೆರಿಗಿದುವೆ ಜನ್ಮಸ್ಥಾನಂ ॥

ವೇದಂಗಳಿನಖಿಳಕಳಾವಾದ್ಯಂ ಗಳಿನತುಳತರ್ಕ್ಕ ...... ವಳಿಯಿಂ
ಮೇದಿನಿಯೊಳು ಸ.......ಯಿಂ ನಾದಿಬ್ರಹ್ಮವಧಿಕರಲ್ಲಿಯ ಪಾರ್ವ್ವರುಂ ॥

.... ತಾಶೇಷತತ್ವ ಸಕಳಗುಣಗಣಾಳಂಕ್ರಿತ ಸತ್ಯ ...... ಸಚ್ಚರಿತ

ವಿಶ್ವವಿದ್ಯಾಸಂಪೂರ್ಣ್ನರ್ಶಿಷ್ಟೇಷ್ಟಚಿನ್ತಾಮಣಿಗಳತಿ ....
ಸಾಹಸೋತ್ತುಂಗರ .... ರ್ರೂಪ್ಣ್ಯಾರ್ಬ್ಧಿವೇಳಾವನಚಳಿತಮಹೀ
ಧರ್ಮ್ಮಮಾರ್ಗತ್ರಿವರ್ಗ್ಗಂ ॥

ಕುಂತಳದೇಶದ ಹಿರಿಮೆ, ಅದರಲ್ಲಿನ ಅನ್ಯತಟಾಕದ (ಅಣ್ಣಿಗೇರಿ) ಸರೋವರಗಳು (ಕೆರೆಗಳು), ಹೂದೋಟಗಳು, ಸತ್ರಸಾಲೆಗಳು, ದೇವಾಲಯಗಳು, ಅನಾದಿಪಟ್ಟಣ ಅನ್ಯತಟಾಕವು ಇಂದ್ರನ ರಾಜಧಾನಿ ಅಮರಾವತಿಗೂ ಮಿಗಿಲಾದುದು, ವೇದಗಳಲ್ಲಿ ಪಾರಂಗತರಾದ ಇಲ್ಲಿಯ ಪಾರ್ವರು (ಬ್ರಾಹ್ಮಣರು) ಮೊದಲಾದ ವಿವರಗಳಿವೆ.[38]

ಕ್ರಿ.ಶ. 1186–87ರ ತ್ರುಟಿತ ಶಾಸನದಲ್ಲಿ–

ಎರಡಱುನೂಱುನಾಡಿಂಗಂ ಶಿರೋಮಣಿಯೆನೆ ....
ಅಣ್ಣಿಗೆಱೆಯ ಮಹಿಮೋಂನತಿಯೆಂತೆನೆ ॥

.... ಗೇಹಾವಳಿಯಿಂ ಯತಿಪ್ರಕರದಿಂ ಷಟ್ತರ್ಕ್ಕ
ವಿದ್ಯಾದ್ಯದ್ಬುಧಕೋಟಿಯಿಂ ಶ್ರುತಿಕಥಾತಜ್ಞದ್ದ್ವಿಜಾನೀಕದಿಂ
.... ಬ್ರಜದಿಂ ವಿಳಾಸವನಿತಾಸನ್ದೋಹದಿವಿ ....
ಬಡೆದಿದ್ದುದಣ್ಣಿಗೆಱೆ ನಾನಾರಮ್ಯ ಹರ್ಮ್ಮ್ಯೋರ್ಜ್ಜಿತಂ ॥

ಖ್ಯಾ .... ಭಾಮಿನಿ ಭಾಸುರ .... ಕರಂ ತನ್ಮಹಾಪತ್ತನಂ
ತಜ್ಜಾತಂ ಶೋಭಿಪ್ಪುದುದ್ಯದ್ಗುಣಗಣರಚಿತಾನನ್ತ ಗಾವುಂಡವರ್ಗ್ಗಂ
ನೂತಾ .... ವರವಿಳಸದ್ವರ್ಗ್ಗಮತ್ಯುದ್ದೆಜಗಮಾಕೂರ
ಶ್ರೀಮನ್ಮುನೀಂದ್ರಸ್ಥಗಿತನುತಪುರೀವರ್ಗ್ಗವನ್ತು ತ್ರಿವರ್ಗ್ಗಂ ...ಯವೆನ್ತೆನೆ ॥

ಎರಡರುನೂರುನಾಡಿಗೆ (ಬೆಳ್ವೊಲ–300 ಮತ್ತು ಪುಲಿಗೆರೆ–300) ಶಿರೋಮಣಿಯಾದ ಅಣ್ಣಿಗೇರಿಯ ದೇವಾಲಯಗಳು, ಅಧ್ಯಯನ ಮತ್ತು ಅಧ್ಯಾಪನದಲ್ಲಿ ನಿರತರಾಗಿದ್ದ ದ್ವಿಜರು (ಬ್ರಾಹ್ಮಣರು), ಇಲ್ಲಿಯ ಗಾವುಂಡವರ್ಗ, ದ್ವಿಜವರ್ಗ, ಪುರವರ್ಗಗಳ ನಿರೂಪಣೆಗಳಿವೆ.[39] ಕ್ರಿ.ಶ. 1190ರ ಶಾಸನದಲ್ಲಿ–

ಪರಭೂಪಾಳಮದಾನ್ಧಸಿನ್ಧುರಘಟಾಸನ್ದೋಹ ಸಂಘಟ್ಟನೋ
ದ್ಧುರ ಸಿಂಹಂಕಲಿ ಜೈತಸಿಂಹನಹಿತಕ್ಷ್ಮಾಪಾಳರಂ ತೂಳ್ದಿ ಬಿ
ತ್ತರದಿಂ ಬೆಳ್ವಲನಾಡೊ ...... ವಿಕೃತಿವ್ಯಾಪಾರಮಂ ತಾಳ್ದಿ ......
ನಿರೆ ನಿರ್ಗ್ಗುಂಡಿಪುರೇಶನೊಳ್ಸುಖಸುಧಾಸಂತ್ರಿಪ್ತ ಚೇತೋಮಯಂ
ಅನ್ತಾ ಬೆಳ್ವಲನಾಡ ಚೆಲ್ವಿ .... ವಟ್ಟೆಂಬಂದದಿಂ ತೋರ್ಪ್ಪ
ನಿಶ್ಚಿನ್ತಸ್ಥಾನಮಗ್ಗದಣ್ಣಿಗೆಱೆಯಂ ಬೇರ್ಪ್ಪಟ್ಟಿಯೊಳ್ಪುಟ್ಟಿ ವಿಕ್ರಾನ್ತೈಕಾರ್ಜ್ಜುನ
....ಮಣ್ಡಳಿಕ ಬಾಚಂ ಪೆತ್ತನಾ ಜೈತ್ರಸಿಂಹಂ ತಾಂ ಮೆಚ್ಚುಗುಡಲ್ಕೆ
ವಿಕ್ರಮೆದೆಲೆಸೆವಾ ಶಕ್ತಿ ಸಾಮಾನ್ಯಮೆ ॥

ಆ ನಾಡ ರಾಜಧಾನಿಗೆ ನಾನಾ ಸ್ತ್ರೀಪುರುಷರತ್ನರಾಶಿಗೆ
ಧರ್ಮ್ಮಸ್ಥಾನಾಭಿವೃದ್ಧಿ......ನೀಕಂ ನೋರ್ಪ್ಪಡಣ್ಣಿಗೆಱೆ ಸುಗಯಿಸುಗುಂ ॥

ಬೆಳ್ವೊಲನಾಡಿನ ಚೆಲುವು, ಆ ನಾಡಿನ ರಾಜಧಾನಿ ಅಣ್ಣಿಗೇರಿಯ ಸ್ತ್ರೀಯರು, ಪುರುಷರು, ಧರ್ಮ ಮೊದಲಾದ ಪ್ರಸ್ತಾಪಗಳಿವೆ.[40]

ಅಣ್ಣಿಗೇರಿಯ ಪ್ರಪ್ರಥಮ ಪ್ರಸ್ತಾಪವು ಗದಗ ತಾಲ್ಲೂಕಿನ ಕುರ್ತಕೋಟಿಯಲ್ಲಿ

ಬೆಳಕಿಗೆ ಬಂದಿರುವ ಬಾದಾಮಿ ಚಲುಕ್ಯರ 1ನೆಯ ವಿಕ್ರಮಾದಿತ್ಯನ ಕ್ರಿ.ಶ. 670–71ರ ತಾಮ್ರಪಟ ಶಾಸನದಲ್ಲಿ ಉಲ್ಲಿಖಿತವಾಗಿದೆ. ಅಂದು ಇದು 'ಅಣ್ಣಿಗೆಱೆ' ಎಂದು ಕರೆಯಲ್ಪಟ್ಟಿದೆ.[41] ರಾಷ್ಟ್ರಕೂಟರ ಕಾಲಾವಧಿಯ ಕೆಲವು ಶಾಸನಗಳಲ್ಲಿಯೂ 'ಅಣ್ಣಿಗೆಱೆ', 'ಅಣ್ಣಿಗೆಱೆ' ಎಂತಲೇ ನಿರೂಪಿತವಾಗಿದೆ.[42] ಕಲ್ಯಾಣದ ಚಾಳುಕ್ಯರು, ಕಲ್ಯಾಣದ ಕಳಚೂರಿಗಳು, ದೇವಗಿರಿ ಸೇವುಣರು, ದೋರಸಮುದ್ರದ ಹೊಯ್ಸಳರ ಕಾಲಾವಧಿಯ ಸ್ಥಳೀಯ ಮತ್ತು ಇತರೆಡೆಯ (ಆಂಧ್ರಪ್ರದೇಶದ ಕುರ್ಕ್ಯಾಲ, ಚಿಕ್ಕಮಗಳೂರು ಜಿಲ್ಲೆಯ ಕಳಸಾಪುರ, ಗಡಿಹಳ್ಳಿ, ಶಿರಹಟ್ಟಿ ತಾಲ್ಲೂಕಿನ ಲಕ್ಷ್ಮೇಶ್ವರ, ಗದಗ ತಾಲ್ಲೂಕಿನ ಅಸುಂಡಿ, ಗದಗ, ಬೆಂತೂರು, ಗಾವರವಾಡ, ಮಲ್ಲಸಮುದ್ರ, ಬೆಲಹೋಡ, ಲಕ್ಕುಂಡಿ, ಹುನಗುಂದ ತಾಲ್ಲೂಕಿನ ನಂದವಾಡಿಗೆ, ಬೇಲೂರು ತಾಲ್ಲೂಕಿನ ಹುಲಿಕೆರೆ, ಹಿರೇಕೆರೂರು ತಾಲ್ಲೂಕಿನ ಎಮ್ಮಿಗನೂರು, ಬೈಲಹೊಂಗಲ ತಾಲ್ಲೂಕಿನ ಕಲಬಾವಿ, ಹಾನಗಲ್ಲ ತಾಲ್ಲೂಕಿನ ಕಲಕೇರಿ, ಹುಬ್ಬಳ್ಳಿ ತಾಲ್ಲೂಕಿನ ಹುಬ್ಬಳ್ಳಿ, ಧಾರವಾಡ ತಾಲ್ಲೂಕಿನ ಹೆಬ್ಬಳ್ಳಿ, ಕಡೂರು ತಾಲ್ಲೂಕಿನ ಕಂಚಿಗಲ್ಲು, ಮದ್ದೂರು ತಾಲ್ಲೂಕಿನ ದೊಡ್ಡ ಅರಸಿನಕೆರೆ, ಕೊಪ್ಪಳ ಜಿಲ್ಲೆಯ ಕೊಪ್ಪಳ) ಶಾಸನಗಳಲ್ಲಿಯೂ ಅಣ್ಣಿಗೆಱೆ, ಅಣ್ಣಿಗೆಱೆ, ಅಂಣ್ಣಿಗೆಱೆ, ಅಂಣ್ಣೆಗೆಱೆ, ಅಂಣ್ಣಿಗೆಱೆ ಎಂತಲೇ ಉಲ್ಲಿಖಿತವಾಗಿದೆ.[43] ಕ್ರಿ.ಶ. ಸುಮಾರು 12–13ನೆಯ ಶತಮಾನದ ಸ್ಥಳೀಯ ಮತ್ತು ಇತರೆಡೆಯ (ಗದಗ ತಾಲ್ಲೂಕಿನ ಚಿಕ್ಕಹಂದಿಗೋಳ, ಚನ್ನರಾಯಪಟ್ಟಣ ತಾಲ್ಲೂಕಿನ ಶ್ರವಣಬೆಳಗೊಳ) ಕೆಲವು ಶಾಸನಗಳಲ್ಲಿ 'ಅನ್ಯತಟಾಕ' ಎಂದು ಪ್ರಸ್ತಾಪವಾಗಿದೆ.[44]

ಅಣ್ಣಿಗೇರಿಯಲ್ಲಿ ಕ್ರಿ.ಶ. ಸುಮಾರು 11–12ನೆಯ ಶತಮಾನದಲ್ಲಿ ಅಮೃತೇಶ್ವರದ ದೇವಾಲಯ ನಿರ್ಮಾಣವಾದ ತರುವಾಯ, ಕೆಲವು ಶಾಸನಗಳು ಈ ಪಟ್ಟಣವನ್ನು 'ದಕ್ಷಿಣ ವಾರಣಾಸಿ' ಎಂದು ಬಣ್ಣಿಸಿವೆ.[45] ಕಲ್ಯಾಣದ ಕಲಚೂರಿಗಳ ಇಮ್ಮಡಿ ಬಿಜ್ಜಳದೇವನ ಕ್ರಿ.ಶ. 1170ರ ಶಾಸನವು–

ಅಂತು ಸಕಳ ಸಜ್ಜನ ರತ್ನನೂತ್ನರತ್ನಾಕರವೆನಿಸಿದ ಮಹಾಪತ್ತನಂ
ಜಗನ್ಮಾನ್ಯಮಪ್ಪನ್ನ ತಡಾಗ ದಕ್ಷಿಣ ದಿಶಾಭಾಗದೊಳೆ ॥

ಅ...ಂ ವಾರಣಶಿಯುಂ ಯಾಮ್ಯಾ ಸೋಮನಾಥಸ್ಥಾನ
ಮುಮಪ್ಪಾದಿಕೇದಾರಸ್ಥಳಮುಮೆನಿಸಿ ॥

ಸಕಳ ಸಜ್ಜನ ರತ್ನನೂತ್ನರತ್ನಾರಕವೆನಿಸಿದ ಅಣ್ಣಿಗೇರಿ ಮಹಾಪಟ್ಟಣವು ದಕ್ಷಿಣಭಾಗದ ವಾರಣಾಸಿ, ಕೇದಾರಸ್ಥಳ ಎಂದೆಲ್ಲ ಪ್ರಸಿದ್ಧವಾಗಿತ್ತು ಎಂದು ವರ್ಣಿಸಿದೆ.[46] ವಿಜಯನಗರದ ಆಳರಸರು ಮತ್ತು ವಿಜಯಪುರದ ಆದಿಲ್‌ಷಾಹಿಗಳ ಕಾಲಾವಧಿಯ ಸ್ಥಳೀಯ ಮತ್ತು ಇತರೆಡೆಯ (ಯಲಬುರ್ಗ ತಾಲ್ಲೂಕಿನ ಕುಕನೂರು, ಬೇಲೂರು ತಾಲ್ಲೂಕಿನ ಬೇಲೂರು) ಶಾಸನಗಳು ಹಾಗೂ ಕ್ರಿ.ಶ. ಸುಮಾರು 13 ರಿಂದ 16ನೆಯ ಶತಮಾನದ ಶಾಸನಗಳಲ್ಲಿ ಅಣ್ಣಿಗೆಱೆ, ಅಂಣಿಗೆಱೆ, ಅಂಣಿಗೆರೆ, ಅಂನಿಗೆಱೆ, ಅಣಿಗೇರಿ, ಅಂಣಿಗೇರಿ, ಅಣ್ಣಿಯಕೇರಿ ಎಂದೆಲ್ಲ ದಾಖಲಾಗಿದೆ.[47] ಕ್ರಿ.ಶ. ಸುಮಾರು 13ನೆಯ ಶತಮಾನದ ಶಾಸನದಲ್ಲಿ ಈ ಪಟ್ಟಣವು 'ಅಶೇಷನಗರ' ಎಂದು ಕರೆಯಲ್ಪಟ್ಟಿದೆ.[48] ಕ್ರಿ.ಶ. ಸುಮಾರು 17 ರಿಂದ 20ನೆಯ ಶತಮಾನದ ಸ್ಥಳೀಯ ಮತ್ತು ಇತರೆಡೆಯ (ತೀರ್ಥಹಳ್ಳಿ ತಾಲ್ಲೂಕಿನ ಮುಳಬಾಗಲು, ಕವಲೇದುರ್ಗ, ಸಾಗರ ತಾಲ್ಲೂಕಿನ ಎಡಹಳ್ಳಿ) ಕೆಲವು ಶಾಸನಗಳಲ್ಲಿ ಅಂಣಿಗೆರೆ, ಅಂನಗಿರಿ, ಅಂಣಿಗೇರಿ, ಅಣ್ಣಿಗೇರಿ, ಅಣಗೀರಿ ಎಂದೆಲ್ಲ ದಾಖಲಾಗುತ್ತ ಬಂದಿದೆ.[49]

ಅಣ್ಣಿಗೇರಿ ಕೆಲವು ಕೃತಿ–ಕಾವ್ಯಗಳಲ್ಲಿಯೂ ದಾಖಲಾಗಿದೆ. ಇದು ಮಲ್ಲನು(?) ಕ್ರಿ.ಶ. ಸುಮಾರು 10–11ನೆಯ ಶತಮಾನದಲ್ಲಿ ರಚಿಸಿದನೆಂದು ಹೇಳಲಾಗಿರುವ ಕ್ರತುಪುರ ಮಹಾತ್ಮ್ಯದಲ್ಲಿ (ಶ್ರೀ ಅಮೃತೇಶ್ವರ ಮಾಹಾತ್ಮ್ಯ) 'ಅನ್ನಗಿರಿ', ಹರಿಹರನ ಏಕಾಂತರಾಮಿತಂದೆಯ ರಗಳೆಯಲ್ಲಿ (ಕ್ರಿ.ಶ. ಸುಮಾರು 13ನೆಯ ಶತಮಾನ) 'ಅಣ್ಣಿಗೆರೆ', ನಂದ್ಯಾಲಪುರದ ಸಿಂಹಾಸನಾಧೀಶ ಸಿದ್ಧನಂಜೇಶನ ಗುರುರಾಜ ಚಾರಿತ್ರದಲ್ಲಿ (ಕ್ರಿ.ಶ. 1650) 'ಅಣ್ಣಿಗೆರೆ', ಅಂತರವಳ್ಳಿಯ ಶಾಂತನಿರಂಜನನ ಅಬ್ಬಲೂರು ಚರಿತೆಯಲ್ಲಿ (ಕ್ರಿ.ಶ. 1650) 'ಅಣ್ಣಿಗೇರಿ' ಎಂದೆಲ್ಲ ಗೋಚರಿಸುತ್ತದೆ.[50] ಅಣ್ಣಿಗೇರಿಯ ದೇಸಗತಿಗಳು, ಮಠಗಳು, ರೈತರು, ಭೂಮಿಗಳಿಗೆ ಸಂಬಂಧಿಸಿದಂತೆ ಲಭ್ಯವಿರುವ ಕ್ರಿ.ಶ. ಸುಮಾರು 18ನೆಯ ಶತಮಾನದಿಂದ 20ನೆಯ ಶತಮಾನದವರೆಗಿನ ದಾಖಲು ಪತ್ರಗಳಲ್ಲಿ ಅಂಣಿಗೇರಿ, ಅಂಣಿಗೆರಿ, ಅಂನ್ನಗಿರಿ, ಅಣಿಗೆರಿ, ಅಣಿಗೇರಿ, ಅಂಣ್ಣಿಗೇರಿ, ಅಣ್ಣಿಗೆರೆ, ಅಣ್ಣೀಗೇರಿ, ಅಣ್ಣಿಗೇರಿ ಎಂದೆಲ್ಲ ದಾಖಲಾಗಿದೆ.[51]

ಈ ಮೇಲಿನ ಕ್ರಿ.ಶ. ಸುಮಾರು 7ನೆಯ ಶತಮಾನದಿಂದ 20ನೆಯ ಶತಮಾನದ ವರೆಗಿನ ಶಾಸನಗಳು, ಕೃತಿ–ಕಾವ್ಯಗಳು ಮತ್ತು ದಾಖಲು ಪತ್ರಗಳಲ್ಲಿ ಉಲ್ಲಿಖಿತವಾಗಿರುವ ಅಣ್ಣಿಗೇರಿ ಪ್ರಾರಂಭದಿಂದಲೂ ಒಂದೇ ತೆರನಾಗಿ ಮುಂದುವರೆದುಕೊಂಡು ಬಂದಿರುವುದು ಗೋಚರಿಸುತ್ತದೆ. ಕೇವಲ ಶಬ್ದ, ಸ್ವರ, ಉಚ್ಚಾರಣೆಯಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳು ಕಾಣುತ್ತವೆ. 'ಅಣ್ಣಿಗೇರಿ' ಎಂಬುದು 'ಅಣ್ಣಿಗ' ಮತ್ತು 'ಕೆರೆ' ಎಂಬೆರಡು ಪದಗಳಿಂದ ರೂಪಿತವಾಗಿದೆ. ಇಲ್ಲಿ ಅಣ್ಣಿಗ ಎಂಬುವವನು ಕಟ್ಟಿಸಿದ ಕೆರೆಯಿಂದಾಗಿ ಇದಕ್ಕೆ ಅಣ್ಣಿಗನ + ಕೆರೆ > ಅಣ್ಣಿಗೆರೆ > ಅಣ್ಣಿಗೇರಿ ಎಂಬ ಹೆಸರು ಬಂದಿರುವುದು ಮನದಟ್ಟಾಗುತ್ತದೆ. ಆದರೆ ಆ ಅಣ್ಣಿಗನು ಯಾರೆಂಬುದು ಸ್ಪಷ್ಟವಿಲ್ಲ. ದಾನಚಿಂತಾಮಣಿ ಅತ್ತಿಮಬ್ಬೆಯ (ಅತ್ತಿಯಬ್ಬೆ / 977–1018) ಮಗನಾದ ಅಣ್ಣಿಗದೇವನು ಇಲ್ಲಿ ಕೆರೆ ಕಟ್ಟಿಸಿದ್ದರಿಂದ ಇದಕ್ಕೆ ಅಣ್ಣಿಗೇರಿ ಎಂಬ ಹೆಸರು ಬಂದಿದೆ ಎಂಬ ಮೌಖಿಕ ಪರಂಪರೆಯಿದೆ. ಆದರೆ ಬಾದಾಮಿ ಚಲುಕ್ಯರ ಕಾಲದಲ್ಲಾಗಲೇ ಇದನ್ನು 'ಅಣ್ಣಿಗೆಱೆ' ಎಂದು ಕರೆಯಲಾಗುತ್ತಿತ್ತು. ಹೀಗಾಗಿ ಕ್ರಿ.ಶ. ಸುಮಾರು 10–11ನೆಯ ಶತಮಾನದಲ್ಲಿದ್ದ ಅಣ್ಣಿಗದೇವನು ಇಲ್ಲಿ ಕಟ್ಟಿಸಿದ ಕೆರೆಯಿಂದಾಗಿ ಇದಕ್ಕೆ ಅಣ್ಣಿಗೇರಿ ಎಂಬ ಹೆಸರು ಬಂದಿದೆ ಎಂದು ಹೇಳುವುದು ಸಮಂಜಸವಾಗಿ ತೋರುವುದಿಲ್ಲ. ಕೆಲವು ಶಾಸನಗಳಲ್ಲಿ ಇದನ್ನು 'ಅನ್ಯತಟಾಕ' ಎಂದು ಕರೆಯಲಾಗಿದೆ. ಇದು ಅಣ್ಣಿಗೇರಿಯ ಸಂಸ್ಕೃತ ರೂಪವಾಗಿದೆ. ಬಾದಾಮಿ ಚಲುಕ್ಯರ ಕಾಲಾವಧಿಯಲ್ಲಿದ್ದ ಅಣ್ಣಿಗ, ಅಣ್ಣಿಗದೇವ, ಅಣ್ಣಿಗರಾಯ ಎಂಬ ಹೆಸರಿನ ಸಾಮಂತನೋ ಅಥವಾ ಅಧಿಕಾರಿಯೋ ಇಲ್ಲಿ ಕೆರೆ ಕಟ್ಟಿಸಿದ್ದಂತೆ ತೋರುತ್ತದೆ. ಆದರೆ ಆತನ ಕುರಿತು ಯಾವುದೇ ಮಾಹಿತಿಗಳು ಲಭ್ಯವಿಲ್ಲ. ಅಣ್ಣಿಗೇರಿ ಕೆಲವು ಶಾಸನಗಳು ಮತ್ತು ಕೃತಿ–ಕಾವ್ಯಗಳಲ್ಲಿ 'ಅನ್ನಗಿರಿ' ಎಂದು ದಾಖಲಾಗಿದೆ. ಅನ್ನಗಿರಿ ಸ್ಥಳನಾಮದ ಕುರಿತು 'ಕ್ರತುಪುರ ಮಹಾತ್ಮ್ಯ' ಪುರಾಣದ 'ಶ್ರೀ ಅಮೃತೇಶ್ವರ ಮಾಹಾತ್ಮ್ಯ'ದಲ್ಲಿ–

ಪಶ್ಚಾತ್ಕ್ರತುಪುರಸ್ಯಾಸ್ತಿ ಕ್ಷೇತ್ರಮನ್ನಗಿರೀತಿ ಯತ್
ತಸ್ಯ ವಕ್ಷ್ಯಾಮಿ ಮಾಹಾತ್ಮ್ಯಂ ಶೃಣುಧ್ವಂ ಸುಸಮಾಹಿತಾಃ ॥

ಪ್ರಧಾನಂ ಯತ್ರ ಯತ್ಕ್ಷೇತ್ರಂ ಯಾವದ್ಯೋಜನಮೀರಿತಂ
ತತ್ರಾಪ್ಯವಾಂತರಾಣಾಂ ಚ ಕ್ಷೇತ್ರಾಣಾಮಸ್ತಿ ಶಂಕರಃ ॥

ಇದಮನ್ನಗಿರಿ ಕ್ಷೇತ್ರಂ ಯಾವದ್ಯೋಜನಮೀರಿತಂ
ಪೂರ್ವಕ್ಷೇತ್ರೇಣ ಸಂಯುಕ್ತಮತೋಧಿಕ ಫಲಪ್ರದಂ ॥

ಅನ್ನಸಂತರ್ಪಣಾಯಾನ್ನಂ ಪರ್ವತಾಷ್ಟಧಿತಾತ್ಮಭೂಃ
ಸಂಕಲ್ಪಮಾತ್ರೋಪನತಃ ಪ್ರಿಯಂ ಕಾಮಃ ಪ್ರಜಾಪತಿಃ ॥

ತಸ್ಮಾದನ್ನಸ್ಯ ಭೂಯಾಸ್ತ್ವಾತ್ಕ್ಷೇತ್ರಮನ್ನಗಿರೀತಿ ಯತ್
ಅಮೃತೇಶ್ವರಸಂಜ್ಞಾ ಚ ದ್ವಯಮನ್ವರ್ಥಕಂ ಚಿರಂ ॥

ಕ್ರತುಪುರದ ಪಶ್ಚಿಮ ಭಾಗದಲ್ಲಿ ಅತಿ ರಮಣೀಯವಾದ ಅನ್ನಗಿರಿ ಎಂಬ ಕ್ಷೇತ್ರವಿದೆ. ಅತಿ ಶ್ರೇಷ್ಠವಾದ ಈ ಅನ್ನಗಿರಿ ಕ್ಷೇತ್ರವು ನಾಲ್ಕು ಹರದಾರಿ ವಿಶಾಲವಾಗಿದೆ. ಈ ಕ್ಷೇತ್ರದಲ್ಲಿ ಅವಾಂತರ ಕ್ಷೇತ್ರಗಳು ಪುಷ್ಕಳವಾಗಿವೆ. ಅವುಗಳಿಗೂ ಈ ಅನ್ನಗಿರಿ ಕ್ಷೇತ್ರಕ್ಕೂ ಕೈಲಾಸವಾಸಿಯಾದ ಶಂಕರನೇ ಅಧಿಕಾರಿಯಾಗಿದ್ದಾನೆ. ನಾಲ್ಕು ಹರದಾರಿ ವಿಶಾಲವಾದ ಈ ಅನ್ನಗಿರಿ ಕ್ಷೇತ್ರವು ಆ ಕ್ರತುಪುರದ ಪಶ್ಚಿಮ ದಿಕ್ಕಿನಲ್ಲಿರುವ ಕ್ಷೇತ್ರಗಳಿಂದ ಯುಕ್ತವಾದಂಥದ್ದಾಗಿದೆ. ಯಾರು ಈ ಕ್ಷೇತ್ರವನ್ನು ಸಂದರ್ಶನ ಮಾಡುತ್ತಾರೋ ಅವರುಗಳಿಗೆ ಉಳಿದ ಕ್ಷೇತ್ರಗಳಿಗಿಂತ ಈ ಕ್ಷೇತ್ರವೇ ವಿಶೇಷ ಫಲಪ್ರದವಾಗಿದೆ. ಬ್ರಹ್ಮದೇವನು ಇಲ್ಲಿ ದೇವಪ್ರತಿಷ್ಠಾ ಸಾಂಗಾರ್ಥವಾಗಿ ಅನ್ನಸಂತರ್ಪಣ ಸಂಕಲ್ಪ ಮಾಡಿದಾಕ್ಷಣವೇ ಪರ್ವತಪ್ರಾಯವಾದಂಥ ಅನ್ನದ ರಾಶಿಗಳು ಉತ್ಪನ್ನವಾದವು. ಆ ಪಂಚ ಪಕ್ವಾನ್ನಗಳಿಂದ ಪುಷ್ಕಳ ಬ್ರಾಹ್ಮಣರ ಭೋಜನ ಮಾಡಿಸಿದನು. ಈ ಕ್ಷೇತ್ರದಲ್ಲಿ ಬ್ರಹ್ಮದೇವನ ಇಚ್ಛೆಯಿಂದ ಪುಷ್ಕಳ ಅನ್ನ ಉತ್ಪನ್ನವಾದ್ದರಿಂದ ಇದಕ್ಕೆ 'ಅನ್ನಗಿರಿ' ಎಂತಲೂ, 'ಅಮೃತೇಶ್ವರ' ಎಂತಲೂ ಎರಡು ಸಂಜ್ಞೆಗಳು (ಹೆಸರುಗಳು) ಅನ್ವರ್ಥಕವಾದವು ಎಂದು ನಿರೂಪಣೆಯಿದೆ.[52] ಈ ಪುರಾಣದ ಪ್ರಭಾವದಿಂದ ಕ್ರಿ.ಶ. ಸುಮಾರು 17ನೆಯ ಶತಮಾನದಿಂದೀಚಿನ ಶಾಸನಗಳು ಮತ್ತು ದಾಖಲು ಪತ್ರಗಳಲ್ಲಿ ಈ ಪಟ್ಟಣವನ್ನು ಅನ್ನಗಿರಿ ಎಂದು ಕರೆಯಲಾಗಿದೆ.

ಅಣ್ಣಿಗೇರಿ ಕ್ರಿ.ಶ. ಸುಮಾರು 7ನೆಯ ಶತಮಾನದಿಂದ 15ನೆಯ ಶತಮಾನದವರೆಗೆ ಬೆಳ್ವೊಲನಾಡಿನ ರಾಜಧಾನಿ ಕೇಂದ್ರವಾಗಿತ್ತು. ಅಂದು ಈ ನಾಡನ್ನಾಳಿದ ಮಹಾಮಂಡಳೇಶ್ವರು, ಮಹಾಸಾಮಂತರು, ಪ್ರಭುಗಾವುಂಡರು, ಗಾವುಂಡರು, ಆಡಳಿತಾಧಿಕಾರಿಗಳು ಈ ಪಟ್ಟಣದ ಸುತ್ತಲೂ ಕೋಟೆ ಮತ್ತು ಅದರಲ್ಲಿ ಅರಮನೆಯನ್ನು ಕಟ್ಟಿಸಿರುವುದಕ್ಕೆ ಯಾವುದೇ ದಾಖಲೆಗಳು ಲಭ್ಯವಿಲ್ಲ. ಎಸ್.ಕೆ. ಜೋಶಿ ಅವರು ಈ ಪಟ್ಟಣದ ಸುತ್ತಲೂ ನಿರ್ಮಾಣವಾಗಿದ್ದ ಕೋಟೆ ಮತ್ತು ಕಂದಕದ ಅಳಿದುಳಿದ ಕುರುಹುಗಳನ್ನು ಗುರುತಿಸಲು ಪ್ರಯತ್ನಿಸಿದ್ದಾರೆ.[53] ವಿಜಯನಗರದ ಆಳರಸರು, ವಿಜಯಪುರದ ಆದಿಲ್‌ಷಾಹಿಗಳು, ಮರಾಠರು, ಪೇಶ್ವೆಗಳು, ಬ್ರಿಟಿಷರ ಅಧೀನದಲ್ಲಿ ಅಣ್ಣಿಗೇರಿ ಪಟ್ಟಣ ಪ್ರದೇಶದ ಆಡಳಿತವನ್ನು ನೋಡಿಕೊಳ್ಳುತ್ತ, ಇಲ್ಲಿಯ ಕಂದಾಯವನ್ನು ಸಂಗ್ರಹಣೆ ಮಾಡುತ್ತಿದ್ದ ಶಿಕ್ಕೆದೇಸಾಯಿ ಮತ್ತು ದೇಶಪಾಂಡೆ ದೇಸಗತಿಗಳಿಗೆ ಸಂಬಂಧಿಸಿದ ವಾಡೆಗಳು ಇಂದಿಗೂ ಮೂಲ ಸ್ವರೂಪದಲ್ಲಿ ಉಳಿದು ಬಂದಿವೆ. ಶಿಕ್ಕೆದೇಸಾಯಿಗಳ ಬಂಧುಗಳಾದ ಸಂಗಪ್ಪ ದೇಸಾಯಿ ಮತ್ತು ಕೊಟ್ರಪ್ಪ (ಕೊಟ್ಟೂರಪ್ಪ) ದೇಸಾಯಿಗಳ ವಾಡೆಗಳು ಸಂಪೂರ್ಣ ನಾಶವಾಗಿವೆ.

ಹೀಗೆ ಕ್ರಿ.ಶ. ಸುಮಾರು 7ನೆಯ ಶತಮಾನದಿಂದ 20ನೆಯ ಶತಮಾನದವರೆಗಿ ಶಾಸನಗಳಾದಿ ಕೃತಿ–ಕಾವ್ಯಗಳು ಮತ್ತು ದಾಖಲು ಪತ್ರಗಳಲ್ಲಿ ದಾಖಲಾಗಿರುವ ಅಣ್ಣಿಗೇರಿ

ಪಟ್ಟಣವು ಜೈನ, ವೈಷ್ಣವ, ಶೈವ, ಬೌದ್ಧ, ಇಸ್ಲಾಂ ಧರ್ಮಗಳಿಗೆ ಆಶ್ರಯತಾಣವಾಗಿತ್ತು. ಇಲ್ಲಿ ಆ ಎಲ್ಲ ಧರ್ಮಗಳ ಸಾಂಸ್ಕೃತಿಕ ಚಟುವಟಿಕೆಗಳು ಸಾಂಗವಾಗಿ ನಡೆಯುತ್ತ ಬಂದಿವೆ.

ಅಡಿಟಿಪ್ಪಣಿಗಳು

1. ಅಮೃತ ಮಹಾದೇವ ಅಣ್ಣೀಗೇರಿ, ಅಣ್ಣೀಗೇರಿಯ ಶ್ರೀ ಸ್ವಯಂಭು ಅಮೃತೇಶ್ವರ (1960), ಪು. 55–63.
2. ಷಡಕ್ಷರಯ್ಯ ಆರ್.ಎಂ., "ಸಾವಿರಾರು ವರ್ಷ ಹಿಂದಿನ ಅವಶೇಷ ಪತ್ತೆ", ವಿಜಯ ಕರ್ನಾಟಕ ದಿನಪತ್ರಿಕೆ, 2016ರ ಮಾರ್ಚ 29, ಪು. 2. "ತಲೆಬುರುಡೆ ಸಿಕ್ಕ ಸ್ಥಳದಲ್ಲಿ ಪುರಾತನ ಅವಶೇಷ", ಪ್ರಜಾವಾಣಿ ದಿನಪತ್ರಿಕೆ, 2016ರ ಮಾರ್ಚ 30. "ಅಣ್ಣಿಗೇರಿಯಲ್ಲಿ ತಲೆಬುರುಡೆಗಳ ಪಕ್ಕ ಬಂಡೆಕಲ್ಲುಗಳು ಪತ್ತೆ", ವಿಜಯ ಕರ್ನಾಟಕ ದಿನಪತ್ರಿಕೆ, 2016ರ ಮಾರ್ಚ 31, ಪು.9.
3. ಪಾಡಿಗಾರ ಶ್ರೀನಿವಾಸ ವಿ. (ಸಂ.), ಪೂರ್ವೋಕ್ತ, ಶಾ.ಸಂ. 48.
4. ಅದೇ, ಶಾ.ಸಂ. 139.
5. ಭಾರತೀ ಬಿ.ಆರ್. (ಸಂ.), ಪೂರ್ವೋಕ್ತ, ಸಂಪುಟ–1, ಶಾ.ಸಂ. 109 ಮತ್ತು 110.
6. ಕ್ಷೇತ್ರಕಾರ್ಯದಲ್ಲಿ ದೊರೆತ ಅಪ್ರಕಟಿತ ಶಾಸನ.
7. ಎಸ್.ಆಯ್.ಆಯ್. ಸಂ. XI-i, ಶಾ.ಸಂ. 115.
8. ಅದೇ, ಸಂ. XV, ಶಾ.ಸಂ. 100.
9. ಅದೇ, ಶಾ.ಸಂ. 102.
10. ಗೋಗಿ ಹನುಮಾಕ್ಷಿ, "ಅಣ್ಣಿಗೇರಿಯಲ್ಲಿ ದೊರೆತ ಹೊಸ ಶಾಸನಗಳು", ಅನುಶಾಸನ (2002), ಪು. 171–176.
11. ಎಸ್.ಆಯ್.ಆಯ್. ಸಂ. XV, ಶಾ.ಸಂ. 122.
12. ಗೋಗಿ ಹನುಮಾಕ್ಷಿ, ಪೂರ್ವೋಕ್ತ, ಪು. 176–179.
13. ಕ್ಷೇತ್ರಕಾರ್ಯದಲ್ಲಿ ದೊರೆತ ಅಪ್ರಕಟಿತ ಶಾಸನ.
14. ಎಸ್.ಆಯ್.ಆಯ್. ಸಂ. XV, ಶಾ.ಸಂ. 59.
15. ಅದೇ, ಶಾ.ಸಂ. 149.
16. ಅದೇ, ಶಾ.ಸಂ. 213.
17. ಕ್ಷೇತ್ರಕಾರ್ಯದಲ್ಲಿ ದೊರೆತ ಅಪ್ರಕಟಿತ ಶಾಸನ.
18. ಕ್ಷೇತ್ರಕಾರ್ಯದಲ್ಲಿ ದೊರೆತ ಅಪ್ರಕಟಿತ ಶಾಸನ.
19. ಎಸ್.ಆಯ್.ಆಯ್. ಸಂ. XX, ಶಾ.ಸಂ. 304.
20. ಕ್ಷೇತ್ರಕಾರ್ಯದಲ್ಲಿ ದೊರೆತ ಅಪ್ರಕಟಿತ ಶಾಸನ.
21. ಕ್ಷೇತ್ರಕಾರ್ಯದಲ್ಲಿ ದೊರೆತ ಅಪ್ರಕಟಿತ ಶಾಸನ.
22. ಕ್ಷೇತ್ರಕಾರ್ಯದಲ್ಲಿ ದೊರೆತ ಅಪ್ರಕಟಿತ ಶಾಸನ.
23. ಎಸ್.ಆಯ್.ಆಯ್. ಸಂ. XV, ಶಾ.ಸಂ. 216.
24. ಅದೇ, ಶಾ.ಸಂ. 217.
25. ಅದೇ, ಶಾ.ಸಂ. 224.
26. ಕ್ಷೇತ್ರಕಾರ್ಯದಲ್ಲಿ ದೊರೆತ ಅಪ್ರಕಟಿತ ಶಾಸನ.
27. ಗೋಗಿ ಹನುಮಾಕ್ಷಿ, ಪೂರ್ವೋಕ್ತ, ಪು. 179–180.
28. ಎಸ್.ಆಯ್.ಆಯ್. ಸಂ. XV, ಶಾ.ಸಂ. 611.
29. ಪಾಡಿಗಾರ ಶ್ರೀನಿವಾಸ, ಭಾರತೀಯ ಇತಿಹಾಸದ ಶಾಸನ ಆಕರಗಳು (2004), ಶಾ.ಸಂ. 27.
30. ಎಸ್.ಆಯ್.ಆಯ್. ಸಂ. XI-i, ಶಾ.ಸಂ. 103.

31. ಅದೇ, ಸಂ. XV, ಶಾ.ಸಂ. 187.
32. ಕಲಬುರ್ಗಿ ಎಂ.ಎಂ. (ಸಂ.), ಧಾರವಾಡ ತಾಲೂಕಿನ ಶಾಸನಗಳು (1976), ಶಾ.ಸಂ. 72.
33. ಇ.ಆಯ್. ಸಂ. XV, ಶಾ.ಸ. 23/ಬಿ.
34. ಎಸ್.ಆಯ್.ಆಯ್. ಸಂ. XV, ಶಾ.ಸಂ. 96.
35. ಅದೇ, ಶಾ.ಸಂ. 102.
36. ಗೋಗಿ ಹನುಮಾಕ್ಷಿ, ಪೂರ್ವೋಕ್ತ, ಪು. 171–176.
37. ಎಸ್.ಆಯ್.ಆಯ್. ಸಂ. XV, ಶಾ.ಸಂ. 122.
38. ಅದೇ, ಶಾ.ಸಂ. 59.
39. ಅದೇ, ಶಾ.ಸಂ. 72.
40. ಅದೇ, ಶಾ.ಸಂ. 149.
41. ಪಾಡಿಗಾರ ಶ್ರೀನಿವಾಸ ವಿ. (ಸಂ.), ಪೂರ್ವೋಕ್ತ, ಶಾ.ಸಂ. 48, ಪು. 80–83.
42. ಭಾರತೀ ಬಿ.ಆರ್. (ಸಂ.), ಪೂರ್ವೋಕ್ತ, ಸಂಪುಟ–1, ಶಾ.ಸಂ. 109, 110, 141.
43. ಇ.ಆಯ್. ಸಂ. XV, ಶಾ.ಸ. 23/ಎ ಮತ್ತು ಬಿ. ಎಸ್.ಆಯ್.ಆಯ್. ಸಂ. XI-i, ಶಾ.ಸಂ. 48, 63, 81, 103, 115. ಎಸ್.ಆಯ್.ಆಯ್. ಸಂ. XV, ಶಾ.ಸಂ. 54, 59, 72, 96, 100, 102, 122, 149, 187, 213, 215, 216, 217, 224, 611. ಎಸ್.ಆಯ್.ಆಯ್. ಸಂ. XX, ಶಾ.ಸಂ. 224, 228, 304. ದೇವರಕೊಂಡಾರೆಡ್ಡಿ (ಸಂ.), ಪೂರ್ವೋಕ್ತ, ಸಂಪುಟ–2, ಶಾ.ಸಂ. 80, ಪು. 65–66 ಮತ್ತು ಶಾ.ಸಂ. 109, ಪು. 103–104. ಗೋಗಿ ಹನುಮಾಕ್ಷಿ, ಪೂರ್ವೋಕ್ತ, ಪು. 171–176. ಎ.ಕ. ಸಂ. XII, ಶಾ.ಸಂ. 28, 41. ಪಾಡಿಗಾರ ಶ್ರೀನಿವಾಸ, ಪೂರ್ವೋಕ್ತ, ಶಾ.ಸಂ. 27. ಎ.ಕ. ಸಂ. XI, ಶಾ.ಸಂ. 219. ಎ.ಕ. ಸಂ. IX, ಶಾ.ಸಂ. 410, 411. ಎ.ಕ. ಸಂ. VII, ಶಾ.ಸಂ. 121. ಕೆ.ಆಯ್. ಸಂ. IV, ಶಾ.ಸಂ. 18. ಕೆ.ಆಯ್. ಸಂ. V, ಶಾ.ಸಂ. 39. ಕಲಬುರ್ಗಿ ಎಂ.ಎಂ. (ಸಂ.), ಪೂರ್ವೋಕ್ತ, ಶಾ.ಸಂ. 72, ಪು. 158–160. ಗೋಗಿ ಹನುಮಾಕ್ಷಿ (ಸಂ.), ಲಕ್ಷ್ಮೇಶ್ವರ : ಸಾಂಸ್ಕೃತಿಕ ಅಧ್ಯಯನ (2015), ಶಾ.ಸಂ. 17. ಹಂಜೆ ಅಪ್ಪಣ್ಣ ಎನ್., ಲಕ್ಕುಂಡಿಯ ಬಸದಿಗಳು (2015), ಶಾ.ಸಂ. 15, ಪು. 113–117. ಕ್ಷೇತ್ರಕಾರ್ಯದಲ್ಲಿ ದೊರೆತ ಅಪ್ರಕಟಿತ ಶಾಸನಗಳು.
44. ಎಸ್.ಆಯ್.ಆಯ್. ಸಂ. XV, ಶಾ.ಸಂ. 59. ಎಸ್.ಆಯ್.ಆಯ್. ಸಂ. XI-ii, ಶಾ.ಸಂ. 147. ಎ.ಕ. ಸಂ. II, ಶಾ.ಸಂ. 73. ಗೋಗಿ ಹನುಮಾಕ್ಷಿ, ಪೂರ್ವೋಕ್ತ, ಪು. 171–179.
45. ಎಸ್.ಆಯ್.ಆಯ್. ಸಂ. XV, ಶಾ.ಸಂ. 96, 100, 213, 217. ಗೋಗಿ ಹನುಮಾಕ್ಷಿ, ಪೂರ್ವೋಕ್ತ, ಪು. 171–176. ಕ್ಷೇತ್ರಕಾರ್ಯದಲ್ಲಿ ದೊರೆತ ಅಪ್ರಕಟಿತ ಶಾಸನಗಳು.
46. ಗೋಗಿ ಹನುಮಾಕ್ಷಿ, ಪೂರ್ವೋಕ್ತ, ಪು. 171–176.
47. ಎಸ್.ಆಯ್.ಆಯ್. ಸಂ. XV, ಶಾ.ಸಂ. 254, 268. ಹಂಜೆ ಅಪ್ಪಣ್ಣ ಎನ್., "ನವಲಗುಂದ ತಾಲ್ಲೂಕಿನ ಜೈನಾವಶೇಷಗಳು", ಧಾರವಾಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (2008), ಪು. 16–18, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ ಮೈಸೂರು. ದೇವರಕೊಂಡಾರೆಡ್ಡಿ (ಸಂ.), ಪೂರ್ವೋಕ್ತ, ಸಂಪುಟ–2, ಶಾ.ಸಂ. 48, ಪು. 219–221. ಎ.ಕ. ಸಂ. IX, ಶಾ.ಸಂ. 171. ಕ್ಷೇತ್ರಕಾರ್ಯದಲ್ಲಿ ದೊರೆತ ಅಪ್ರಕಟಿತ ಶಾಸನಗಳು.
48. ಗೋಗಿ ಹನುಮಾಕ್ಷಿ, ಪೂರ್ವೋಕ್ತ, ಪು. 180.
49. ಎ.ಕ. ಸಂ. XIII, ಶಾ.ಸಂ. 57, 210. ಹಂಜೆ ಅಪ್ಪಣ್ಣ ಎನ್. "ಅಣ್ಣಿಗೇರಿಯ ಎರಡು ಜೈನ ಶಿಲಾಫಲಕ ಶಾಸನಗಳು", ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಸಂ.82/3 (ಜುಲೈ/ಸೆಪ್ಟಂಬರ–2008), ಪು. 57–60, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು. ಕ್ಷೇತ್ರಕಾರ್ಯದಲ್ಲಿ ದೊರೆತ ಅಪ್ರಕಟಿತ ಶಾಸನಗಳು.

50. ಅಮೃತ ಮಹಾದೇವ ಅಣ್ಣೀಗೇರಿ, ಪೂರ್ವೋಕ್ತ, ಪು. 42–78. ಕಲಬುರ್ಗಿ ಎಂ.ಎಂ. (ಸಂ.), ಹರಿಹರನ ರಗಳೆಗಳು (2001), ಏಕಾಂತರಾಮಿತಂದೆಯ ರಗಳೆ, ಪ.ಸಂ. 330–340, ಪು. 363. ಸಂ.ಶಿ. ಭೂಸನೂರಮಠ (ಸಂ.), ಸಿದ್ಧನಂಜೇಶ ವಿರಚಿತ ಗುರುರಾಜಚಾರಿತ್ರ (1950), ಸಂಧಿ–16, ಪ.ಸಂ. 17, ಪು. 314. ಬಸವಾರಾಧ್ಯ ಎನ್. (ಸಂ.), ಶಾಂತನಿರಂಜನ ವಿರಚಿತ ಅಬ್ಬಲೂರು ಚರಿತೆ (1973), ಐದನೆಯ ಸಂಧಿ, ಪ.ಸಂ. 17, ಪು. 72.
51. ಕಲಬುರ್ಗಿ ಎಂ.ಎಂ. ಮತ್ತು ರಾಠೋಡ ಪಿ.ಕೆ. (ಸಂ.), ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠದ ದಾಖಲು ಸಾಹಿತ್ಯ ಸಂಪುಟ–1 (2008), ದಾಖಲು ಸಂಖ್ಯೆ 57, 61. ಗೋಗಿ ಹನುಮಾಕ್ಷಿ ಮತ್ತು ರಾಠೋಡ ಪಿ.ಕೆ. (ಸಂ.), ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠದ ದಾಖಲು ಸಾಹಿತ್ಯ ಸಂಪುಟ–2 (2009), ದಾಖಲು ಸಂಖ್ಯೆ 24, 38, 46, 48, 49, 58, 69, 78, 91, 103, 129, 130, 144, 145, 170, 171, 187. ಶಿರೂರ ಬಿ.ವ್ಹಿ. (ಸಂ.), ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠದ ದಾಖಲು ಸಾಹಿತ್ಯ ಸಂಪುಟ–3 (2010), ದಾಖಲು ಸಂಖ್ಯೆ 28, 35, 45, 54, 55, 59, 61, 71, 76, 85, 116, 149, 154, 155, 162, 163, 303. ಕ್ಷೇತ್ರಕಾರ್ಯದಲ್ಲಿ ದೊರೆತಿರುವ ಅಪ್ರಕಟಿತ ದಾಖಲು ಪತ್ರಗಳು.
52. ಅಮೃತ ಮಹಾದೇವ ಅಣ್ಣೀಗೇರಿ, ಪೂರ್ವೋಕ್ತ, ಪು. 42–48.
53. ಜೋಶಿ ಎಸ್.ಕೆ., "ಧಾರವಾಡ ಜಿಲ್ಲೆಯ ಕೋಟೆ ಕೊತ್ತಲಗಳು", ಧಾರವಾಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (2008), ಪು. 72 ಮತ್ತು 80.

❖❖❖

ನೀ ತುಂಬು ಹೊಳೆಯಾದರೆ
ನಾ ದಡದ ಮರಳು
ನೀನೊಂದು ಮರವಾದರೆ
ನಾನದರ ನೆರಳು.

ನವನಿಧಿ

ಕದಡಿದ ಕಣಿವೆ
ರಾಹುಲ್ ಪಂಡಿತ
ಅನು:ಬಿ.ಎಸ್. ಜಯಪ್ರಕಾಶ್ ನಾರಾಯಣ
ವಸಂತ ಪ್ರಕಾಶನ, ಬೆಂಗಳೂರು
ರೂ. 230/–

ಕಶೀರ
ಸಹನಾ ವಿಜಯಕುಮಾರ್
ಸಾಹಿತ್ಯ ಭಂಡಾರ, ಬೆಂಗಳೂರು
ರೂ. 340/–

ಅನುಸಂಧಾನ
ಡಿ. ಎಸ್. ರಾಮಸ್ವಾಮಿ
ಅಂಬಾರಿ ಪ್ರಕಾಶನ, ಮೈಸೂರು
ರೂ. 170/–

ಮನೆಯಿಂದ ಮನೆಗೆ
ಡಿ. ಎಸ್. ರಾಮಸ್ವಾಮಿ
ಅಂಬಾರಿ ಪ್ರಕಾಶನ, ಮೈಸೂರು
ರೂ. 110/–

ಕಲಾಸೌರಭ ಸರೋಜಾ ಶ್ರೀನಾಥ್
ಗೀತಾ ಮಂಜುನಾಥ್
ಕನ್ನಡ ವಿಭಾಗ,
ಮುಂಬಯಿ ವಿಶ್ವವಿದ್ಯಾಲಯ
ರೂ. 100/–

ಜಗದಗಲ ಕುತೂಹಲ
ವಿದುಷಿ ಸರೋಜಾ ಶ್ರೀನಾಥ್
ಅಭಿಜಿತ್ ಪ್ರಕಾಶನ, ಮುಂಬಯಿ
ರೂ. 150/–

ಸಂಗೀತ ಸಾಹಿತ್ಯ ಅನುಸಂಧಾನ
ವಿದುಷಿ ಸರೋಜಾ ಶ್ರೀನಾಥ್
ಅಬಿಜಿತ್ ಪ್ರಕಾಶನ, ಮುಂಬಯಿ
ರೂ. 150/–

ದಲಿತರ ದೇವಸ್ಥಾನ ಪ್ರವೇಶದ ಸಾವಿರ ವರ್ಷ:
ದಲಿತರು ಮರೆತ ರಾಮಾನುಜ
ಎನ್. ಕೆ. ಮೋಹನ್ ರಾಂ
ಐಬಿಎಚ್ ಪ್ರಕಾಶನ, ಬೆಂಗಳೂರು
ರೂ. 100/–

ನನ್ನೊಳಗಿನ ನಾನು
(ಬಿ. ಎ. ಮೊಹಿದೀನ್ ಆತ್ಮಕಥನ)
ನಿರೂಪಣೆ: ಮಹಮ್ಮದ್ ಕುಳಾಯಿ ಮತ್ತು
ಬಿ. ಎ. ಮುಹಮ್ಮದ್ ಅಲಿ
ಭಾರತ ಪ್ರಕಾಶನ, ಮಂಗಳೂರು
ರೂ. 250/–

RNI Reg No. : KARKAN /2012/49251

CHINTHANA BAYALU **A Peer Reviewed Journal** **ISSN 2278-2192**
Kannada Quarterly, Volume 6, Issue 4, April - June 2018
Edited, Published, Printed & Owned by
Reshma G. Bhat
Door No. 15-109, Modankapu Post,
Bantwal Taluk, Dakshina Kannada 574 219.
Printed at
Aakrithi Prints
Light House Hill Road, Mangalore - 575 001

Pages : 64

ವಾರ್ಷಿಕ ಚಂದಾ : ರೂಪಾಯಿ ಇನ್ನೂರು
(ಅಂಚೆ ವೆಚ್ಚ ಸೇರಿ)
ಮೂರು ವರ್ಷಗಳಿಗೆ : ರೂಪಾಯಿ ಆರುನೂರು
ಐದು ವರ್ಷಗಳಿಗೆ : ರೂಪಾಯಿ ಒಂದು ಸಾವಿರ
ಆಜೀವ (ಪೋಷಕ) ಚಂದಾ : ರೂಪಾಯಿ ಐದು ಸಾವಿರ
ಮಹಾಪೋಷಕ ಚಂದಾ : ರೂಪಾಯಿ ಹತ್ತು ಸಾವಿರ
ಬಿಡಿ ಪ್ರತಿ : ರೂಪಾಯಿ ಐವತ್ತು

ದಯವಿಟ್ಟು ಡಿ.ಡಿ./ಎಂ.ಓ.ಗಳನ್ನು 'ಚಿಂತನ ಬಯಲು' ಹೆಸರಿನಲ್ಲಿ ಪತ್ರಿಕೆಯ ವಿಳಾಸಕ್ಕೆ ಕಳುಹಿಸಿ. ಚೆಕ್/ಡಿ.ಡಿ. ಮಂಗಳೂರಿನಲ್ಲಿ ಸಂದಾಯವಾಗುವಂತಿರಲಿ. ದಯವಿಟ್ಟು ಹೊರ ಊರಿನ ಚೆಕ್ ಕಳುಹಿಸಬೇಡಿ. ಎಲ್ಲಕ್ಕಿಂತ ಸುಲಭವಾಗಿ ಈ ಕೆಳಗಿನ ಖಾತೆಗೆ ನೇರವಾಗಿ ಸಂದಾಯ ಮಾಡಿ ಪೂರ್ಣ ವಿಳಾಸ ಹಾಗೂ ದೂರವಾಣಿ ಇತ್ಯಾದಿ ವಿವರಗಳೊಂದಿಗೆ ಸಂದಾಯದ ವಿವರಗಳನ್ನು ಬರೆಯಬಹುದು ಅಥವಾ ಮಿಂಚಂಚೆ ಮೂಲಕ ತಿಳಿಸಬಹುದು. ಬ್ಯಾಂಕ್ ಚಾರ್ಜನ್ನು ಚಂದಾದಾರರೇ ದಯವಿಟ್ಟು ಭರಿಸಬೇಕು.

ಕರ್ಣಾಟಕ ಬ್ಯಾಂಕ್
ಬಂಟ್ವಾಳ ಮೂಡ ಶಾಖೆಯಲ್ಲಿ
ಚಿಂತನ ಬಯಲು ಹೆಸರಿನಲ್ಲಿರುವ

ಕರೆಂಟ್ ಅಕೌಂಟ್ ಸಂಖ್ಯೆ : 0712000100041401

IFSC: KARB 0000071

ಸುಲಭ ಬ್ಯಾಂಕಿಂಗ್ ಸೇವೆಗಾಗಿ ನಿಮ್ಮ ಹತ್ತಿರದ ಶಾಖೆಯನ್ನು ಸಂಪರ್ಕಿಸಿ ಅಥವಾ 1800 425 1444ಗೆ ಕರೆ ಮಾಡಿರಿ

ಕರ್ಣಾಟಕ ಬ್ಯಾಂಕ್ ಲಿ.
ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.
ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002 ಇಮೇಲ್: info@ktkbank.com ವೆಬ್‌ಸೈಟ್: www.karnatakabank.com